ಚಿಕ್ಕ ಮಕ್ಕಳ ಚಿತ್ರಕಲೆ

ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರ ಪಡಿಸಿದ ಸಂಶೋಧನ ಪ್ರಬಂಧ



ಸಂಶೋಧಕರು
ಸಂಗಪ್ಪ ಕೋತಂಬರಿ

ಮಾರ್ಗದರ್ಶಕರು
ಡಾ. ಲಕ್ಷ್ಮಣಸಿಂಗ್.ಆರ್.ರಾಥೋಡ್

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬.
೨೦೧೬

ಚಿಕ್ಕ ಮಕ್ಕಳ ಚಿತ್ರಕಲೆ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಶೋಧನ ಪ್ರಬಂಧ)

ಸಂಶೋಧಕರು

ಸಂಗಪ್ಪ ಕೋತಂಬರಿ

ಮಾರ್ಗದರ್ಶಕರು

ಡಾ. ಲಕ್ಷ್ಮಣ ಸಿಂಗ್ ಆರ್. ರಾಥೋಡ್

ಉಪನ್ಯಾಸಕರು

ಚಾಮರಾಜೇಂದ್ರ ಸರಕಾರಿ ದೃಶ್ಯಕಲಾ ಕಾಲೇಜು, ಮೈಸೂರು

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೬

ಪ್ರಮಾಣ ಪತ್ರ

"ಚಿಕ್ಕ ಮಕ್ಕಳ ಚಿತ್ರಕಲೆ" ಎಂಬ ಶೀರ್ಷಿಕೆಯ ಕಿರು ಸಂಶೋಧನಾ ಪ್ರಬಂಧವನ್ನು **ಡಾ. ಲಕ್ಷ್ಮಣ ಸಿಂಗ್ ಆರ್. ರಾಥೋಡ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಾದರಪಡಿಸುತ್ತಿದ್ದೇನೆ.

ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗಾಗಿ ಬಳಸಿಕೊಂಡಿರುವುದಿಲ್ಲ ಪ್ರಮಾಣೀಕರಿಸುತ್ತೇನೆ.

ಸಂಗಪ್ಪ ಕೋತಂಬರಿ
ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 14/09/2016
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೃಶ್ಯಕಲಾ ವಿಭಾಗದ ಸಂಶೋಧನಾ ವಿದ್ಯಾರ್ಥಿ **ಸಂಗಪ್ಪ ಕೋತಂಬರಿ** ಇವರು ಬರೆದು ಸಾದರಪಡಿಸಿದ **"ಚಿಕ್ಕ ಮಕ್ಕಳ ಚಿತ್ರಕಲೆ"** ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ಇವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಸಂಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಸಂಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸಿದೆ.

ಮಾರ್ಗದರ್ಶಕರು

ಮಾರ್ಗದರ್ಶಕರು

ಡಾ. ಲಕ್ಷ್ಮಣ ಸಿಂಗ್ ಆರ್. ರಾಥೋಡ್

ಉಪನ್ಯಾಸಕರು

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಮೈಸೂರು

ಉಪನ್ಯಾಸಕರು,

...ಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು

ಮೈಸೂರು

ದಿನಾಂಕ : 14/09/2016

ಸ್ಥಳ : ವಿದ್ಯಾರಣ್ಯ

ದೃಢೀಕರಣ ಪತ್ರ

ಸಂಗಪ್ಪ ಕೋತಂಬರಿ ಅವರು **ಚಿಕ್ಕ ಮಕ್ಕಳ ಚಿತ್ರಕಲೆ** ಎಂಬ ಶೀರ್ಷಿಕೆಯ ಎಂ.ಫಿಲ್ ಸಂಶೋಧನಾ ಪ್ರಬಂಧವನ್ನು **ಡಾ. ಲಕ್ಷ್ಮಣ ಸಿಂಗ್ ಆರ್. ರಾಥೋಡ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದಾರೆ.

ದಿನಾಂಕ: ೨೨.೦೯.೨೦೧೬


ಸ್ಥಳ: ವಿದ್ಯಾರಣ್ಯ

(ಡಾ. ಹನುಮಣ್ಣನಾಯಕ ದೊರೆ)
ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ



ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಪ್ರಸ್ತಾವನೆ : ಮಕ್ಕಳು ಎಂದಾಕ್ಷಣ ಯಾರಿಗೇ ತಾನೇ ಇಷ್ಟವಾಗಲ್ಲ. ಅವು ಮಾಡುವ ತುಂಟಾಟ, ನಗು ಎಂತಹ ಕಲ್ಲು ಹೃದಯವಿದ್ದರೂ ಮಗುವನ್ನು ಕಂಡರೆ ಹೃದಯ ಕರಗಿ ನೀರಾಗುತ್ತದೆ. ಇಂತಹ ಮಕ್ಕಳನ್ನು ಪ್ರತಿಯೊಬ್ಬರು ಇಷ್ಟಪಡುತ್ತಾರೆ. ಹಾಗೆಯೇ ಮಗು ಸೃಜನಶೀಲ ವ್ಯಕ್ತಿತ್ವ, ಚಿಕ್ಕ ವಯಸ್ಸಿನಲ್ಲಿಯೇ ಗ್ರಹಿಸುವ ಸಾಮರ್ಥ್ಯ ಹೊಂದಿರುತ್ತದೆ. ಚಿತ್ರಕಲೆ, ಸಂಗೀತ, ನೃತ್ಯ, ನಾಟಕ, ಸಾಹಿತ್ಯ ಹೀಗೆ ಎಲ್ಲಾ ಕಲೆಗಳಲ್ಲೂ ಮಕ್ಕಳು ಆಸಕ್ತಿ ಹೊಂದಿರುತ್ತವೆ. ಆಟ, ಪಾಠ ಹಲವಾರು ವಿಷಯಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುತ್ತದೆ. ಮಕ್ಕಳಲ್ಲಿ ತುಂಬಾ ಇಷ್ಟ ಪಡುವಂತಹದ್ದು ಹಲವಾರು ಸಂಗತಿಗಳು ಕಂಡುಬರುತ್ತವೆ. ಹಾಡುವುದು, ನೃತ್ಯ ಮಾಡುವುದು, ಚಿತ್ರ ಬಿಡಿಸುವುದು ಮುಂತಾದ ಆಂಗಿಕ ಪ್ರದರ್ಶನ ಮಕ್ಕಳಲ್ಲಿ ತೋರಿಬರುತ್ತದೆ. "ವಿವಿಧ ಮಾಧ್ಯಮಗಳಲ್ಲಿ ಚಿತ್ರಕಲೆಯೂ ಒಂದು ಮಾಧ್ಯಮ ಚಿತ್ರಕಲೆಯನ್ನು ಬರೆಯುವ ವ್ಯಕ್ತಿ ವಿಶಿಷ್ಟ ವ್ಯಕ್ತಿತ್ವ ಪಡೆದಿರುತ್ತಾನೆ. ಬರೆಯುವ ಶಕ್ತಿ, ನೈಪುಣ್ಯತೆ ಅನೇಕ ಮಾನಸಿಕ ಅಂಶಗಳ ಮೇಲೆ ಬೆಳವಣಿಗೆಯಾಗಿರುತ್ತದೆ. ಮಗು ತಾನು ಬೆಳೆಯುವಾಗ ತನ್ನ ಸುತ್ತಲಿನ ಪರಿಸರದ ಪ್ರಭಾವದಿಂದ ಅನೇಕ ಅಭಿರುಚಿಗಳನ್ನು ಹೊಂದುತ್ತಾನೆ. ಅವುಗಳಲ್ಲಿ ಚಿತ್ರಕಲೆ ಅಭಿರುಚಿಯೂ ಒಂದು. ಇಂತಹ ಒಂದು ಚಿತ್ರಕಲೆ ಅಭಿರುಚಿಯನ್ನು ಮಗು ಬಾಲ್ಯದಲ್ಲಿಯೇ ಎಷ್ಟೋ ಸಲ ತನ್ನ ಆಟಗಳಿಂದ ಪ್ರದರ್ಶಿಸುತ್ತಾನೆ. ಚಿತ್ರಕಲೆ ಅಭಿರುಚಿ ಹೊಂದಿದ ವ್ಯಕ್ತಿ ಚಿತ್ರಕಲೆಯಲ್ಲಿ ಶ್ರೇಷ್ಠ ನೈಪುಣ್ಯತೆಯನ್ನು ಸಾಧಿಸಲು ಸಾಧ್ಯವಿಲ್ಲ. ಮಕ್ಕಳು ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿರುತ್ತದೆ. ಆದ್ದರಿಂದ ಕಲೆ ಅಭಿಕ್ಷಮತೆ ಹಾಗೂ ಕಲೆ ಅಭಿರುಚಿ ಹೊಂದಿದ ವ್ಯಕ್ತಿಗೆ ಕಲೆ ಶಿಕ್ಷಣ ತರಬೇತಿ ಕೊಟ್ಟರೆ ಅವನೊಬ್ಬ ಒಳ್ಳೆಯ ಕಲೆಗಾರನಾಗಲು ಸಾಧ್ಯವಿದೆ"[೧]

೧. ಡಾ. ಎಸ್.ಸಿ. ಪಾಟೀಲ (ಸಂ), ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ–೪೫

ಮಕ್ಕಳ ಆಲೋಚನೆ, ಚಿಂತನೆ, ಆಸೆ, ಆಕಾಂಕ್ಷೆ, ದೃಷ್ಟಿಕೋನ ಇವುಗಳ ಆಧಾರದ ಮೇಲೆ ಅಭಿರುಚಿ ನಿರ್ಧಾರವಾಗುವುದು. ಹಾಗೆಯೆ ಮಗುವು ಕೂಡ ಯಾವ ಮಾಧ್ಯಮಕ್ಕೆ ಆಕರ್ಷಣೆಯಾಗುವುದು ಎಂದು ಹೇಳುವುದು ಸುಲಭವಲ್ಲ. ಮಗು ಸೃಷ್ಟಿಯ ಅದ್ಭುತ ಕೊಡುಗೆ ತಂದೆ-ತಾಯಿಗಳ ಅನುವಂಶಿಕ ಗುಣಗಳ ಸಮ್ಮಿಳಿತದ ಫಲ, ಪರಿಸರದ ಪ್ರಭಾವದ ಮೂಸೆಯಲ್ಲಿ ತಿದ್ದಿ-ತೀಡಿ ಮಾರ್ಪಾಡು ಹೊಂದಿ, ಹೊಂದಾಣಿಕೆಗಳ ಹೊದಿಕೆ ಹೊತ್ತು ಹದಗೊಂಡು ಹೊಳೆಯುವ ಹವಳ ಮಗುವಿನ ಸರ್ವತೋಮುಖ ಬೆಳವಣಿಗೆ ಎಂದರೆ ಮಗುವಿನ ದೇಹ, ಮನಸ್ಸು ಮತ್ತು ಆತ್ಮ ಇವು ಮೂರು ವಿಕಾಸಗೊಂಡಿರಬೇಕು. ಅಂದರೆ ಅಲ್ಲಿ ಸುಪ್ತ ಶಕ್ತಿಗಳ ಸಮ್ಮಿಳಿತವಾಗಿರಬೇಕು. ಈ ಶಕ್ತಿಗಳು ಒಂದಕ್ಕೊಂದು ಪೂರಕ, ಪೋಷಕ, ಪರಿಪೂರಕವಾಗಿರುತ್ತವೆ.[೨] "ಚಿಕ್ಕಮಕ್ಕಳ ಚಿತ್ರಕಲೆ" ಆ ಹೆಸರೇ ಹೇಳುವಂತೆ ದೊಡ್ಡವರ ಚಿತ್ರಕ್ಕೂ, ಮಕ್ಕಳ ಚಿತ್ರಕ್ಕೂ ಇರುವ ವ್ಯತ್ಯಾಸಗಳ ಕುರಿತಾಗಿ ಮತ್ತು ವಿಶೇಷತೆಯೆನು, ಹಲವಾರು ಸಂಗತಿಗಳನ್ನು ಅನಾವರಣಗೊಳಿಸಿ ಮಕ್ಕಳ ಚಿತ್ರಗಳ ಬಗ್ಗೆ ತಿಳಿದುಕೊಳ್ಳಲಾಗುವುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ "ಚಿಕ್ಕಮಕ್ಕಳ ಚಿತ್ರಕಲೆ" ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಅಧ್ಯಯನದ ಉದ್ದೇಶ :

"ಭಾಷೆ, ಆಟ ಮತ್ತು ಕಲೆ ಅಭಿವ್ಯಕ್ತಿಯ ಮೂರು ಮುಖ್ಯ ಮಾಧ್ಯಮಗಳು. ತನ್ನ ಅನುಭವವನ್ನು, ಅನಿಸಿಕೆಗಳನ್ನು, ಆಲೋಚನೆಗಳನ್ನು, ಭಾವನೆಗಳನ್ನು ವ್ಯಕ್ತಪಡಿಸಲು ಮಗು ಮೊದಲು ಭಾಷೆಯನ್ನು, ಆನಂತರ ಆಟದ ನಡವಳಿಕೆಯನ್ನು ಹಾಗೂ ಕಲೆಯನ್ನು ಸಮರ್ಥವಾಗಿ ಬಳಸುತ್ತದೆ. ಮಗುವಿನ ಅಭಿವ್ಯಕ್ತಿ ವಿಧಾನದಲ್ಲಿ ಎರಡು ವಿಧಗಳನ್ನು ಗುರುತಿಸಲಾಗುತ್ತದೆ. ಒಂದು ಭಾಷೆ, ಇನ್ನೊಂದು ಪ್ರತಿಮಾ ವಿಧಾನ. ಈ ಪ್ರತಿಮೆ ಮುಖ್ಯವಾಗಿ ಚಿತ್ರ ರೂಪದಲ್ಲಿ ಇರುತ್ತದೆ. ಇವೆರಡೂ ಪರಸ್ಪರ ಪೂರಕವಾಗಿರುತ್ತದೆ. ಮಗು ಮಾತನಾಡುವುದನ್ನು ಕಲಿಯುವ ಹಂತದಲ್ಲೇ ಕೈಗೆ ಸಿಕ್ಕ ಸೀಮೆಸುಣ್ಣ, ಇದ್ದಿಲು, ಬಳಪದಿಂದ ಗೆರೆಗಳನ್ನು ಹಾಗೂ ತನ್ನದೇ ಆದ ರೀತಿಯಲ್ಲಿ ಚಿತ್ರಗಳನ್ನು ಬರೆಯಲು ಪ್ರಾರಂಭಿಸುತ್ತದೆ. ಗೋಡೆ, ನೆಲ, ಬಾಗಿಲು, ಕಾಗದ ಎಲ್ಲದರ ಮೇಲೆ ಈ ಗೆರೆ ಚಿತ್ರಗಳನ್ನು ಬಿಡಿಸಲು ಪ್ರಾರಂಭಿಸುತ್ತದೆ. ನಮಗೆ ಕೇವಲ ಅಸಂಬದ್ಧ ಗೆರೆಗಳಂತೆ ತೋರುವ ಇವುಗಳಿಗೆ 'ವಿಶೇಷ ಅರ್ಥ'ವಿದೆ ಎನ್ನುತ್ತಾರೆ. ಮನಶಾಸ್ತ್ರಜ್ಞರು. ಗೆರೆಗಳನ್ನು ಉಪಯೋಗಿಸಿ ಪ್ರತಿಮಾ ವಿಧಾನದಲ್ಲಿ ಅಭಿವ್ಯಕ್ತಿಸಲು ಪ್ರಯತ್ನಪಡುತ್ತಿರುವ ಮಗುವಿನ ಪ್ರಾರಂಭಿಕ ಚಿತ್ರಗಳಿವು. ಮಗು ಚಿತ್ರ ಬಿಡಿಸುವಾಗ ತನ್ನಷ್ಟಕ್ಕೆ ತಾನೇ ಮಾತನಾಡಿಕೊಳ್ಳುವುದನ್ನು ನೀವು ಗಮನಿಸಿರಬಹುದು.

---

೨. ಡಾ. ಕರವೀರ ಪ್ರಭು ಕ್ಯಾಲಿಕೊಂಡ, ಆಡುಗೂಸಿನ ಆರೋಗ್ಯ, ಪುಟ-೧೨

ಪಕ್ಕದಲ್ಲಿದ್ದು ಕೇಳಿಸಿಕೊಳ್ಳಿ, ಹಾಗೆಯೇ ಬರೆಯುತ್ತಿರುವ ಚಿತ್ರದ ಬಗ್ಗೆ, ಆ ಮನುಷ್ಯನ ಬಗ್ಗೆ, ನಡವಳಿಕೆ ಬಗ್ಗೆ, ಮಗು ಮತ್ತು ಆ ಮನುಷ್ಯನ ಸಂಬಂಧದ ಬಗ್ಗೆ ಕೇಳಿ ನಿಮಗೆ ಆಶ್ಚರ್ಯವಾಗುವಂತೆ ಮಗು ವಿವರಣೆ ಕೊಡುತ್ತಾ ಹೋಗುತ್ತದೆ. ಮಗುವಿನ ಮನಸ್ಸಿನ 'ವಿಶ್ವರೂಪ ದರ್ಶನ'ವಾಗುತ್ತದೆ"[೩] ಹೀಗೆಯೇ ಮಗು ತನಗೆ ಅನಿಸಿದ ಕಲ್ಪನೆಯ ಚಿತ್ರವನ್ನು ಪೂರ್ಣಗೊಳಿಸುವವರೆಗೂ ಅದಕ್ಕೆ ಸಮಾಧಾನವಿರುವುದಿಲ್ಲ. ತಾನು ಅಂದುಕೊಂಡ ಹಾಗೆ ಚಿತ್ರ ರಚಿಸುವವರೆಗೂ ತಲ್ಲೀನವಾಗಿರುತ್ತದೆ. ತಾನು ನೋಡಿದ ಅನೇಕ ಘಟನಾವಳಿಗಳನ್ನು ಚಿತ್ರಸುವುದರ ಮೂಲಕ ಕಲೆಯನ್ನು ಹೊರಹಾಕುತ್ತವೆ. "ಕಲೆ ಮಾನವನ ಕ್ರಿಯಾಶಕ್ತಿಯ ಕುಶಲ ಅಭಿವ್ಯಕ್ತಿ. ಅಭಿವ್ಯಕ್ತಿಯು ಹಲವಾರು ರೀತಿಯಲ್ಲಿ ವ್ಯಕ್ತವಾಗಿದ್ದು, ಆಗಾಗ ಬದಲಾವಣೆ ಆಗುತ್ತಾ ಬಂದಿದೆ. ಮಾನವನಿಗೆ ತನ್ನ ಪರಿಸರದಲ್ಲಿ ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಉಂಟುಮಾಡುತ್ತವೆಯೋ ಅವನ್ನು ಚಿತ್ರಿಸುತ್ತಾನೆ. ಪ್ರಕೃತಿಯನ್ನು ಅದು ಪ್ರಚೋದಿಸಿದ ಭಾವನೆಗಳನ್ನು ಕಲೆಯ ಮೂಲಕ ಸೃಷ್ಟಿಸುತ್ತಾನೆ. ಮಾನವನು ವಿಕಾಸಗೊಂಡಂತೆ ಕಲೆ ಬದಲಾಗುತ್ತಾ ಬಂದಿದೆ. ಕಲೆ ಮಾನವನ ಜೀವನದ ಅಂಗವಾಗಿದ್ದು, ಕಲಾಸೃಷ್ಟಿ ಒಂದಲ್ಲ ಒಂದು ರೂಪದಲ್ಲಿ ನಡೆಯುತ್ತಿದೆ."[೪] ಈ ಹಿನ್ನೆಲೆಯಲ್ಲಿ ಒಳಗೊಂಡಂತೆ ಆದಿಮಾನವ ಕಲೆ ಮತ್ತು ಮಗುವಿನ ಕಲೆಯು ಹೇಗೆ ಭಿನ್ನ ಎಂದು ಇಲ್ಲಿ ಹೇಳಲಾಗಿದೆ.

ಮಗು ಮತ್ತು ಆದಿಮಾನವನ ಕಲೆ :

ಆದಿಮಾನವರ ಕಾಲದಿಂದ ಕಲೆ ಹುಟ್ಟಿರುವುದು ಕಂಡುಬಂದಿದೆ. ನಂತರ ಅನೇಕ ಕಾಲಕ್ರಮೇಣವಾಗಿ ಬದಲಾವಣೆ ಹೊಂದುತ್ತಾ ತನ್ನಲ್ಲಿ ಕಂಡುಕೊಂಡು ಆದಿಮಾನವರು ಬುದ್ಧಿವಂತರಾಗಿ ಸೃಜನಶೀಲತೆಯನ್ನು ಮೈಗೂಡಿಸಿಕೊಂಡು ಹಲವಾರು ಬದಲಾವಣೆ ಕಂಡರು. ಕಲ್ಲುಬಂಡೆಗಳ ಮೇಲೆ ಆದಿಮಾನವರು ತಾವು ನೋಡಿದ ಪ್ರಾಣಿ, ಪಕ್ಷಿ, ಮರ, ಮನುಷ್ಯ, ನಿಸರ್ಗ ಸಂಕೋಲೆಗಳ ಕುರಿತಾದ ಚಿತ್ರಗಳನ್ನು ರಚಿಸಿದ್ದಾರೆ. ಇವರ ಚಿತ್ರಗಳು ತುಂಬಾ ವಿಶಿಷ್ಟವಾಗಿ ಕಂಡುಬರುತ್ತವೆ. ರೇಖೆಯ ಹಿಡಿತ, ಚಿತ್ರಿಸಿರುವ ರೀತಿ ನೋಡಿದರೆ ಮಕ್ಕಳ ಚಿತ್ರಗಳು ನೆನಪಿಗೆ ಬರುತ್ತವೆ. ಆದಿಮಾನವರ ಚಿತ್ರಕ್ಕೂ ಮತ್ತು ಮಕ್ಕಳ ಚಿತ್ರಕ್ಕೂ ಬಹಳ ವ್ಯತ್ಯಾಸ ಕಂಡುಬರುವುದಿಲ್ಲ. ಆದಿಮಾನವರು ದೇಹದಲ್ಲಿ ದೊಡ್ಡವರಾಗಿದ್ದರೂ ಕೂಡ ಅವರ ಚಿತ್ರಗಳು ಕಲ್ಪನೆ, ಕಣ್ಣಿಗೆ ಕಂಡ ದೃಶ್ಯ, ಚಿತ್ರಿಸುವ ಪ್ರಯತ್ನ ಎಲ್ಲವೂ ಗಮನಿಸಿದರೆ ಆದಿಮಾನವರ ಚಿತ್ರಗಳಲ್ಲಿ ಮಕ್ಕಳು ರಚಿಸುವ ಚಿತ್ರಗಳನ್ನು ಕಾಣಬಹುದು. ಮಗುವಿನ ರೇಖೆಗೂ, ಆದಿಮಾನವರು ಚಿತ್ರಿಸುವ ಚಿತ್ರಕ್ಕೂ ಎರಡು ಒಂದೇ ದಾರಿಯಲ್ಲಿ ಪಯಣ ಬೆಳೆಸಿದ ಹಾಗೆ ಕಂಡುಬರುವುದು.

---

೩. ಸಿ.ಆರ್. ಚಂದ್ರಶೇಖರ್, ಚಿತ್ರಕಲೆ ಮತ್ತು ಮನೋವಿಕಾಸ, ಪುಟ–೮೩
೪. ಪಿ.ಆರ್. ತಿಪ್ಪೇಸ್ವಾಮಿ (ಸಂ), ಕಲಾಕೋಶ, ಪುಟ–೮೩

ಮಗು ಮತ್ತು ಆದಿಮಾನವನ ಚಿತ್ರಗಳು











ಇಲ್ಲಿ ಆದಿಮಾನವರು ಚಿತ್ರ ರಚಿಸುತ್ತಾ ಮಕ್ಕಳಂತೆ ಯಾವುದೇ ಹಿಂಜರಿಕೆಯಿಲ್ಲದೇ ಸರಾಗವಾಗಿ ರಚಿಸಿದ್ದಾರೆ. ಮಕ್ಕಳು ಸಹ ಚಿತ್ರ ವಿಚಿತ್ರವಾಗಿ ಆಶ್ಚರ್ಯಕರ ರೀತಿಯಲ್ಲಿ ಮಕ್ಕಳು ಚಿತ್ರಿಸುತ್ತಾ ಅದರಲ್ಲಿಯೇ ಖುಷಿಯನ್ನು ಅನುಭವಿಸುವುದರ ಜೊತೆಗೆ ಚಿತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತವೆ. ಚಿಕ್ಕಮಕ್ಕಳ ಚಿತ್ರಕಲೆ ನೋಡಲು ಬಹಳ ಸರಳ. ಸಹಜ ರೇಖೆಗಳಿಂದ ಕೂಡಿರುತ್ತದೆ. ಆದರೆ ಅವುಗಳ ಹಿಂದೆ ಅಷ್ಟೇ ಕ್ಲಿಷ್ಟಕರವಾದ ಭಾವನೆ, ಕಲ್ಪನೆಗಳು ಮನೆ ಮಾಡಿರುತ್ತವೆ. ಆದಿಮಾನವರು ಸಹ ಕಲ್ಪನೆಯ ಮುಖಾಂತರ ಮಕ್ಕಳಂತೆ ಚಿತ್ರ ರಚಿಸಿದ್ದಾರೆ.

"ಮಗುವಿನ ಬುರುಡೆಯು ಖಾಲಿ ಕೊಡವಲ್ಲ" ಅದು ಅನೇಕ ಬುದ್ಧಿ ಸಾಮರ್ಥ್ಯಗಳ ಕಣಜ. ಇಂತಹ ಕಣಜದಲ್ಲಿರುವ ಶಕ್ತಿ ಸಾಮರ್ಥ್ಯವನ್ನು ಹೊರಗೆಳೆಯುವ ಮಹತ್ತರವಾದ ಜವಾಬ್ದಾರಿ ಶಿಕ್ಷಣದ್ದು. ಮಗುವಿನಲ್ಲಿ ಅಡಗಿರುವ ಶಕ್ತಿ ಸಾಮರ್ಥ್ಯಗಳನ್ನು ಹೊರಗೆಳೆಯುವ ಶಿಶುಕೇಂದ್ರಿತವಾದ ವಿಧಿವಿಧಾನಗಳನ್ನು ಅಳವಡಿಸಿಕೊಂಡಾಗ ಮಾತ್ರ ಅರ್ಥಪೂರ್ಣವಾಗುತ್ತದೆ.

ಶಿಕ್ಷಣ ಕ್ಷೇತ್ರದಲ್ಲಿ ಆದ ಅನೇಕ ಸಂಶೋಧನೆ ಹಾಗೂ ಆವಿಷ್ಕಾರವು ಮಗುವಿನಲ್ಲಿ ಅಡಗಿರುವ ಶಕ್ತಿ ಸಾಮರ್ಥ್ಯಗಳನ್ನು ಹೊರಗೆಳೆಯುವ ಹಾಗೂ ಸಾಮರ್ಥ್ಯಗಳನ್ನು ಮೊನಚುಗೊಳಿಸುವಂತಹ ಬೋಧನಾ ವಿಧಾನಗಳನ್ನು ನೀಡುತ್ತಿವೆ. ಅಂತಹ ಬೋಧನಾ ವಿಧಾನಗಳಲ್ಲಿ ಸೂಚನೆ ಬೋಧನೆ ಕ್ರಮಾನುಗತ ಬೋಧನೆಗಳ ಪ್ರಮುಖವಾದವು"[೫] ಮಕ್ಕಳಲ್ಲಿ ಕಲೆಯ ಅಭಿರುಚಿ ಬೆಳೆಸಿಕೊಳ್ಳುತ್ತಾ ತಾವು ನೋಡಿದ ಘಟನಾವಳಿಗಳನ್ನು ಮಕ್ಕಳು ಚಿತ್ರಿಸುವುದರ ಮೂಲಕ ಅಥವಾ ಅಭಿನಯ, ನೃತ್ಯ ಮುಂತಾದ ಚಟುವಟಿಕೆಯಲ್ಲಿ ತೊಡಗಿಕೊಂಡಿರುತ್ತವೆ. ಹಾಗೆಯೇ ಮಕ್ಕಳಲ್ಲಿ ಓದುವುದು, ಬರೆಯುವುದು ಬೇರೆ ಬೇರೆ ಕಲೆಗಳಲ್ಲಿ ಆಸಕ್ತಿ ಹೊಂದಿರುತ್ತವೆ. ಇದಲ್ಲದೇ ಚಿಕ್ಕಮಕ್ಕಳು ಚಿತ್ರಕಲೆ ಅಂದರೆ ತುಂಬಾ ಇಷ್ಟಪಡುವರು. ಪ್ರಾಣಿ, ಪಕ್ಷಿ, ಮಾನವ, ನಿಸರ್ಗ, ವಸ್ತು ಇನ್ನೂ ಹಲವಾರು ಈ ಚಿತ್ರಗಳಿಗೆ ಬೇರೆ ರೀತಿಯ ರೂಪಕೊಟ್ಟು ಚಿತ್ರವನ್ನು ತಮ್ಮ ಕಲ್ಪನೆಯಲ್ಲಿ ರಚನೆ ಮಾಡುತ್ತಾರೆ. ಚಿತ್ರದಲ್ಲಿ ರೇಖೆ, ಬಣ್ಣಗಳ ಬಳಕೆ, ನೆರಳು-ಬೆಳಕುಗಳ ಸಂಯೋಜನೆ, ತಮ್ಮದೇ ಆದ ವಿಶಿಷ್ಟ ಬುದ್ಧಿಮಟ್ಟದಲ್ಲಿ ಚಿತ್ರವನ್ನು ಪ್ರಸ್ತುತಪಡಿಸುತ್ತವೆ. ಇಂತಹ ಮಕ್ಕಳ ಕುರಿತಾದ ಚಿಕ್ಕಮಕ್ಕಳ ಚಿತ್ರಕಲೆ ಜೊತೆಗೆ ಚಿತ್ರಗಳ ಶೈಲಿ ಕಾಲದಿಂದ ಕಾಲಕ್ಕೆ ಬದಲಾದ ಅವುಗಳ ಬಳಕೆ ಇಂತಹ ಹಲವಾರು ವಿಚಾರಗಳನ್ನು ತಿಳಿದುಕೊಳ್ಳಲು ಇಂತಹ ಅಧ್ಯಯನಗಳು ತುಂಬಾ ಮಹತ್ವದ್ದಾಗಿದೆ.

ಮಕ್ಕಳಲ್ಲಿ ಕಲೆಯ ಅಭಿರುಚಿ :

"ಮಕ್ಕಳು ಚಿತ್ರ ರಚಿಸುವಲ್ಲಿ ಹೆಚ್ಚು ಆಸಕ್ತಿ ತಾಳುತ್ತವೆ ಏಕೆ? ಎನ್ನುವ ಒಂದು ಸರಳ ಪ್ರಶ್ನೆಯ ಮೂಲಕ ಮನುಷ್ಯರ ಮೂಲ ಅಭಿವ್ಯಕ್ತಿಯ ಎಲ್ಲ ಸಂಕೀರ್ಣ ವಿಚಾರಗಳನ್ನು, ವಿಸ್ಮಯಗಳನ್ನು

೫. ಕೆ.ಎಂ. ಸುರೇಶ್, ಕಲಿಕೆ ಮತ್ತು ಬೋಧನೆ ಮನೋವಿಜ್ಞಾನ, ಪುಟ-೯೧

ಕೂಲಂಕಷವಾಗಿ ಅರಿಯಬಹುದು. ನಮ್ಮ ಸಮಾಜದ ಪ್ರತಿಶತ ೮೦% ಮಕ್ಕಳು ತಾವು ಇಷ್ಟಪಡುವ ಆಟಕ್ಕಿಂತಲೂ ಹೆಚ್ಚು ಸಮಯವನ್ನು 'ಚಿತ್ರಕಲೆ'ಯಲ್ಲಿ ತೊಡಗಿಸಿಕೊಳ್ಳಲು ಇಚ್ಛಿಸುವುದನ್ನು ನಾವು ಕಾಣುತ್ತೇವೆ. ಮಗುವಿನ ಈ ಆಸಕ್ತಿಗೆ ಆನುವಂಶಿಕವಾಗಿ ಬಂದ ಯಾವ ಪ್ರತಿಭೆಯೂ ಕಾರಣವಲ್ಲ. ನಮ್ಮ ಸಮಾಜದ ಪ್ರತಿಯೊಂದು ಮಗುವು ಅದು ಯಾವ ವರ್ಗದಿಂದ ಬಂದಿದ್ದಾದರೂ ಅದರ ಖಾಸಗಿ ಸಂವಹನ ಭಾಷೆಯಾದ 'ಚಿತ್ರ'ದ ಮೂಲಕ ದೂರ ಜಗತ್ತಿನೊಂದಿಗೆ ಪ್ರತಿಕ್ರಿಯಿಸುತ್ತಿರುತ್ತದೆ. ತನ್ನ ಮನಸ್ಸಿನಲ್ಲಿದ್ದ ಅದೃಶ್ಯವಾದ ಅನೇಕ ಭಾವನೆಗಳ 'ಸ್ವರೂಪ'ವನ್ನು ತಾನೇ ಸೃಷ್ಟಿಸಿ ಅದನ್ನು ತಾನೇ ನೋಡಿ ಆನಂದಿಸುವ ಅಥವಾ ತನ್ನ ಮನಸ್ಸಿನ ದುಗುಡವನ್ನು ಆತಂಕವನ್ನು ಹೊರಹಾಕಿ ತನಗೆ ತಾನೇ ಸಾಂತ್ವನಗೊಳಿಸಿಕೊಳ್ಳುವ ಈ ವರ್ಣಮಯ ಕ್ರಿಯೆ ಮಗುವಿಗೊಂದು 'ಆಪ್ತಮಿತ್ರ'ನಂತೆ ಅಲ್ಲಿ ಮಗು ಮೌನವಾಗಿ ತನ್ನೆಲ್ಲ ಅನುಭವವನ್ನು ತನಗರಿವಿಲ್ಲದೆಯೇ ತೋಡಿಕೊಳ್ಳುತ್ತದೆ. ಹಾಗಾಗಿ 'ಚಿತ್ರಕಲೆ' ಮಗುವಿಗೆ 'ಸ್ವಯಂ ಸಾಂತ್ವನ'ಗೊಳಿಸಿಕೊಳ್ಳುವ ಒಂದು ಖಾಸಗಿ ಭಾಷೆ."[೬]

ಕಲೆ ಎನ್ನುವುದು ಪ್ರತಿ ಮಗುವಿನಲ್ಲೂ ಅಡಕವಾಗಿರುತ್ತದೆ. ಅದನ್ನು ಒರಗೆ ಹಚ್ಚಿ ಮಗುವನ್ನು ಸೃಜನಾತ್ಮಕವಾಗಿ ಬೆಳಸಿ ತನಗೆ ಇಷ್ಟವಾದ ಅಭಿರುಚಿ ಇರುವ ಮಾಧ್ಯಮ ತಾನೇ ಆಯ್ಕೆಮಾಡುವ ಸಾಮರ್ಥ್ಯ ಹೊಂದಿರುತ್ತದೆ. ಪೋಷಕರು ಕಲೆಯನ್ನು ಗುರುತಿಸಿ ಮಗುವಿಗೆ ಅನುಕೂಲವಾಗುವ ರೀತಿಯಲ್ಲಿ ವ್ಯವಸ್ಥಿತವಾಗಿ ಮಾಡಿಕೊಡುವ ಕರ್ತವ್ಯ ಪಾಲಿಸಬೇಕು. ಚಿತ್ರಕಲೆ ಅಂದರೆ ಮಗುವಿಗೆ ಏನೋ ಒಂದು ರೀತಿಯ ಆನಂದ, ಖುಷಿ. ಬೇರೆ ವಿಷಯದಲ್ಲಿ ಅಷ್ಟೊಂದು ಆಸಕ್ತಿ ತೋರದ ಮಗು ಚಿತ್ರ ರಚಿಸುವಾಗ ತಲ್ಲೀನವಾಗಿ ಬಿಡುತ್ತದೆ. ಮಕ್ಕಳು ನಮ್ಮ ನಡುವೆ ಇರುವ, ಓಡಾಡುವ ಚೇತನಗಳು ಎಂಬುವುದು ಒಂದು ವಾಸ್ತವ ವಿಚಾರವಾಗಿದೆ. ಮಕ್ಕಳು ನಮ್ಮ ಸಮುದಾಯಗಳ ಇಂದಿನ ಪ್ರಜೆಗಳು ಮಕ್ಕಳೇ ನಮ್ಮ ಆಸ್ತಿ ಎಂಬುವುದೂ ಮತ್ತೊಂದು ವಿಚಾರವಾಗಿದೆ. ನೆಮ್ಮದಿ, ಸುಖ, ಸಂತೋಷ, ಕಲಿಯುವ ವಾತಾವರಣದಲ್ಲಿ ಮಕ್ಕಳು ಬೆಳೆದು ಬಂದರೆ ಆ ಮಕ್ಕಳಿರುವ ಸಮುದಾಯಕ್ಕೆ ಅರ್ಥಪೂರ್ಣ ಭವಿಷ್ಯ ಇರುತ್ತದೆ.

"ಚಿಕ್ಕಮಕ್ಕಳ ಮನಸ್ಸು, ಆಲೋಚನೆಗಳು ಅದ್ಭುತ. ಅವರ ಭಾವನೆ, ಕಲ್ಪನೆಗಳಿಗೆ ಉತ್ತರಿಸಲು ತುಂಬ ಕಷ್ಟ. ತೊದಲು ಮಾತುಗಳು ಸುಮಧುರ ಹಾಗೇ ಅವರ ಮುದ್ದಾದ ಕೈಗಳಿಗೆ ಏನಾದರೂ ಬರೆಯುವ ಸಾಧನ ಸಿಕ್ಕರೆ ಗೀಚಾಡುವಿಕೆಯ ಭರಾಟೆ, ಈ ಗೀಚುವಿಕೆಯ ಭರದಲ್ಲಿ ಕಾಣಬೇಕು ಅದೊಂದು ಅದ್ಭುತ, ಭಾವನಾತ್ಮಕ ಲೋಕದ ಅನುಭವ. ಗೀಚುವಿಕೆಯಿಂದ ಆರಂಭಗೊಳ್ಳುವ ಮಗುವಿನ ಭಾವಾಭಿವ್ಯಕ್ತಿಯಲ್ಲಿ ಕ್ರಮೇಣ ಒಂದು ಸುಂದರ, ಸರಳ ರೂಪದೊಂದಿಗೆ ಅದ್ಭುತ

೬. ಡಾ. ಎಂ.ಎಸ್. ಮೂರ್ತಿ, ಮಕ್ಕಳ ಮನಸ್ಸಿನ ಚಿತ್ರಕಲೆ–"ನಿಜದ ನೆಲೆ" ಅಭಿನಂದನ ಗ್ರಂಥ, ಪುಟ–೪೬

ಚಿತ್ರ ಕಲಾಕೃತಿಗಳನ್ನು ಕಾಣಬಹುದು. ಪ್ರಾಯೋಗಿಕವಾಗಿ ಇದನ್ನು ಜಗತ್ತಿಗೆ ಮೊಟ್ಟ ಮೊದಲು ತೋರ್ಪಡಿಸಿದ ಮಹಾನ್ ವ್ಯಕ್ತಿ ಜರ್ಮನಿಯ ಬೋಹೆಮಿಯಾ ಪಟ್ಟಣದ ಚಿತ್ರಕಲಾವಿದ **ಪ್ರೊ. ಜಾನ್‌ಸಿಜೆಕ್**. ಹಾಗಾಗಿ ಪ್ರೊ. ಸಿಜೆಕ್‌ನನ್ನು ಚಿಕ್ಕಮಕ್ಕಳ ಚಿತ್ರಕಲೆಯ ಜನಕ ಎಂದು ಕರೆಯಲಾಗುತ್ತದೆ. ಮಕ್ಕಳ ಚಿತ್ರಕಲೆ ನೋಡಲು ಬಹಳ ಸರಳ, ಸಹಜ ರೇಖೆಗಳಿಂದ ಕೂಡಿರುತ್ತದೆ. ಆದರೆ ಅವುಗಳ ಹಿಂದೆ ಅಷ್ಟೇ ಕ್ಲಿಷ್ಟಕರವಾದ ಭಾವನೆ, ಕಲ್ಪನೆಗಳು ಮನೆ ಮಾಡಿರುತ್ತವೆ. ಅನೇಕ ಖ್ಯಾತನಾಮ ಕಲಾವಿದರು ಮಕ್ಕಳ ಚಿತ್ರಗಳ ಮುಂದೆ ಮೂಕವಿಸ್ಮಿತರಾಗುತ್ತಾರೆ. **ಪಾವುಲ್‌ಕ್ಲೀ, ಪಿಕಾಸೋ**ದಂತಹ ಆಧುನಿಕ ಕಲಾವಿದರು ಮಕ್ಕಳಂತೆ ಚಿತ್ರಿಸಲು ಇಷ್ಟಪಟ್ಟಿದ್ದರಂತೆ. ಆದರೆ ಅದು ಕಷ್ಟಸಾಧ್ಯವಾಗಿದೆ. ಕೋಮಲ ಮನಸ್ಸಿನಲ್ಲಿ ಮೂಡಿದ ಅದ್ಭುತ ಕಲ್ಪನೆಗಳು ಚಿತ್ರರೂಪದಲ್ಲಿ ದಾಖಲೆಗಳಾಗಿರುತ್ತವೆ. ಆ ಭಾವನೆಗಳನ್ನು ರಚಿಸಿದ ಮಗುವಿನ ಮಾತಲ್ಲೇ ಕೇಳಬೇಕು. ಮಕ್ಕಳ ಚಿತ್ರರಚನೆಯಲ್ಲಿ ಸಾಧನೆ, ಕಲಾ ತಂತ್ರಗಾರಿಕೆಯ ಕೊರತೆಗಳಿದ್ದರೂ, ಭಾವ ಪ್ರಚೋದಕ ಸರಳ ರೇಖೆಗಳು, ಕಣ್ಮನ ಸೆಳೆಯುವ ಬಣ್ಣಗಳ ಬಳಕೆಯಿಂದ ಕೂಡಿರುತ್ತದೆ.[೭] ಚಿತ್ರ ಬಿಡಿಸುವ ಸಂದರ್ಭ, ಪ್ರಸ್ತುತಪಡಿಸುವ ಆಯಾಮ ಎಲ್ಲವೂ ಚಿತ್ರರಚನೆಯಲ್ಲಿ ಮಗು ಮಗ್ನನಾಗಿ ಕ್ಷಣಾರ್ಧದಲ್ಲಿ ರೇಖಾಚಿತ್ರ ಪೂರ್ಣಗೊಳಿಸುವುದು. ಕ್ಷೇತ್ರಕಾರ್ಯದ ಸಮಯದಲ್ಲಿ ಶಾಲೆಗೆ ಭೇಟಿಕೊಟ್ಟಾಗ ಮಕ್ಕಳಿಗೆ ಪೇಪರ್, ಪೆನ್ಸಿಲ್ ವಿತರಿಸಲಾಯಿತು. ನಿಮ್ಮ ಮನಸ್ಸಿಗೆ ಅಥವಾ ನಿಮಗೆ ಏನು ತಿಳಿಯುತ್ತೆ ಪೇಪರನಲ್ಲಿ ಬಿಡಿಸಲು ಹೇಳಿದೆ. ಕೆಲವು ಮಕ್ಕಳು ತಮಗೆ ಅನಿಸಿದ ಚಿತ್ರವನ್ನು ಶರವೇಗದಲ್ಲಿ ಪಟಪಟನೆ ಚಿತ್ರರಚನೆ ಮಾಡಿದರು. ಆ ಚಿತ್ರ ನೋಡಿದರೆ ಇಂತಹದೆ ಪ್ರಾಣಿ, ಪಕ್ಷಿ, ಮನುಷ್ಯ ಅಂತ ಕಂಡುಹಿಡಿಯಬಹುದು. ಆಗ ಮಕ್ಕಳ ರೇಖೆಗಳು ಅವರ ಚಿತ್ರ ಬಿಡಿಸುವ ಕಾತರ ಮಕ್ಕಳಲ್ಲಿ ವ್ಯಕ್ತವಾಯಿತು. ಕೆಲವೇ ನಿಮಿಷಗಳಲ್ಲಿ ಚಿತ್ರ ಪೂರ್ಣಗೊಳಿಸಿ ಮತ್ತೊಂದು ಪೇಪರ್ ತೆಗೆದುಕೊಂಡರು. ಯಾವುದನ್ನು ಯೋಚಿಸದೆ ಮಕ್ಕಳು ನೇರವಾಗಿ ಪೇಪರ್ ಮೇಲೆ ಚಿತ್ರಬಿಡಿಸಿ ಅದಕ್ಕೆ ತಕ್ಕಂತೆ ಬಣ್ಣತುಂಬಿ ಚಿತ್ರ ಪೂರ್ಣಗೊಳಿಸಿದರು. ನಮಗೆ ನಂಬುವುದಕ್ಕೆ ಆಗಲಿಲ್ಲ. ಅದೇ ಒಬ್ಬ ಯುವ ಕಲಾವಿದ ಚಿತ್ರಬಿಡಿಸುವಾಗ ಅಥವಾ ನಾವೇ ರಚಿಸುವಾಗ ಪೇಪರ ಮೇಲೆ ರಚನೆ ಮಾಡುವುದಕ್ಕಿಂತ ಪೂರ್ವದಲ್ಲಿ ಯೋಚಿಸಿ ಚಿತ್ರ ರಚಿಸುವುದಕ್ಕೆ ಪ್ರಾರಂಭ ಮಾಡುತ್ತೆ. ಕೆಲವು ಸಂದರ್ಭದಲ್ಲಿ ಮನಸ್ಸಿಗೆ ಇಷ್ಟವಾಗಿಲ್ಲಾ ಅಂದರೆ ಅಳಿಸಿ ಹಾಕಿ ಪುನಃ ಪ್ರಯತ್ನಿಸುತ್ತೆ. ಆದರೆ ಮಕ್ಕಳು ಯಾವುದನ್ನು ತಲೆಗೆ ಹಾಕಿಕೊಳ್ಳುವುದಿಲ್ಲ. ತಮಗೆ ಅನಿಸಿದ ಹಾಗೆಯೆ ಚಿತ್ರ ರಚನೆ ಮಾಡಿ ಕಲೆಯನ್ನು ಹೊರಹಾಕುತ್ತಾರೆ.

---

೭. ಮಂಜುನಾಥ ಕೆ. ಮಾನೆ, ಚಿತ್ರಕಲಾ ಶಿಕ್ಷಣ, ಪುಟ–೮೭

"ಮಕ್ಕಳ ಮತ್ತು ವಯಸ್ಕ ಚಿತ್ರಗಳಲ್ಲಿ ತಮ್ಮನ್ನು ತಾವು ಬಹಿರಂಗಪಡಿಸಿಕೊಳ್ಳುವುದೇ ಏಕೈಕ ಉದ್ದೇಶವಾಗಿದೆ. ಅನೇಕ ವಯಸ್ಕರ ಕಲಾವಿದರು ಚಿತ್ರ ಬರೆಯುವ ಮೊದಲು ಏನನ್ನೂ ಸ್ಪಷ್ಟವಾಗಿ ಯೋಚಿಸದೆ ಆರಂಭಿಸುತ್ತಾರೆ. ತಮ್ಮನ್ನು ತಾವು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಹಿರಿಯರು ಹೇಗೆ ಒಂದು ವಸ್ತುವಿಗೆ ಜೀವ ಕೊಡಲು ಪ್ರಯತ್ನಿಸುತ್ತಾರೋ ಅಂತಹ ತನ್ಮಯತೆ ಮಕ್ಕಳಲ್ಲಿ ಕಂಡುಬರುತ್ತದೆ. ಚಿಕ್ಕಮಕ್ಕಳ ಚಿತ್ರಕಲೆ ಅವರ ಮನಸ್ಸಿನ ಪ್ರತಿರೂಪ ಎಂಬುದರಲ್ಲಿ ಸಂಶಯವೇ ಇಲ್ಲ. ಬರವಣಿಗೆ ಮಾತುಗಳಿಗಿಂತ ಹೆಚ್ಚು ಇಷ್ಟಪಡುವ ಮಾಧ್ಯಮ ಚಿತ್ರಕಲೆ. ಅವರಲ್ಲಿರುವ ಸುಪ್ತವಾದ ಮನಸ್ಸು ಅವರಿಗರಿವಿಲ್ಲದೆಯೇ ಚಿತ್ರಕಲೆಯ ಮೂಲಕ ಹೊರಬರುತ್ತದೆ. ಪದಗಳಲ್ಲಿ ಅವರ ಭಾವನೆಗಳನ್ನು ಸರಿಯಾಗಿ ವ್ಯಕ್ತಪಡಿಸಲು ಸುಮಾರು ಏಳು, ಎಂಟು ವರ್ಷಗಳೇ ಬೇಕು. ಅಲ್ಲಿಯವರೆಗೆ ಅವರ ನೆಚ್ಚಿನ ಮಾಧ್ಯಮ ಚಿತ್ರಕಲೆ ಆನಂತರ ಮಾತುಗಳು, ಬರವಣಿಗೆಗಳು, ಹಾಡುಗಳು ಹೆಚ್ಚು ಪ್ರಮುಖವಾಗಲು ಚಿತ್ರಕಲೆ ಹಿಂದೆ ಸರಿಯುತ್ತದೆ. ಆದರೆ ಕೆಲವು ಮಕ್ಕಳು ಚಿತ್ರಕಲೆಯನ್ನೇ ಮುಂದುವರಿಸುತ್ತಾರೆ. ಆಗ ಸೌಂದರ್ಯ ಪ್ರಜ್ಞೆ ಮತ್ತು ಸೃಜನಾತ್ಮಕತೆ ಇನ್ನೂ ಹೆಚ್ಚುತ್ತಾ ಹೋಗುತ್ತದೆ"[೮] ಇಂತಹ ಮಕ್ಕಳ ಕುರಿತ ಅಧ್ಯಯನ ಮಾಡಲು ತುಂಬ ಅವಶ್ಯಕ. ಆದ್ದರಿಂದ ಪ್ರಸ್ತುತ ಸಂದರ್ಭದಲ್ಲಿ ಮಕ್ಕಳ ಬಗ್ಗೆ ಇಲ್ಲಿಯವರೆಗೆ ನಡೆದ ಸಂಶೋಧನೆ ಸಂಕ್ಷಿಪ್ತವಾಗಿ ಕೆಳಗಡೆ ನೀಡಲಾಗಿದೆ.

ಪ್ರಸ್ತುತ ಶೀರ್ಷಿಕೆಗೆ ಸಂಬಂಧಿಸಿದಂತೆ ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ :

ಚಿತ್ರಕಲೆಯ ಕುರಿತಾಗಿ ಹಲವಾರು ಅಧ್ಯಯನ ನಡೆದಿವೆ. ಮತ್ತು ಪ್ರಸ್ತುತದಲ್ಲೂ ನಡೆಯುತ್ತಿವೆ. ಕಲಾವಿದರ ಜೀವನದ ಕುರಿತು ಕಲಾ ಗ್ಯಾಲರಿ, ನಿಸರ್ಗ ಚಿತ್ರಣ, ಐತಿಹಾಸಿಕ ಕಲೆಗಳು, ಪ್ರಾಗೈತಿಹಾಸಿಕ ಕಲೆಗಳು, ವಸ್ತುಸಂಗ್ರಹಾಲಯಗಳು, ಭಿತ್ತಿಚಿತ್ರಗಳು ಹೀಗೆ ಹಲವಾರು ಕಲೆಯ ಕುರಿತಾಗಿ ಸಂಶೋಧನೆಗಳು ನಡೆದುಬಂದಿದೆ. ಆದರೆ ಮಕ್ಕಳ ಕಲೆಯ ಕುರಿತಾಗಿ ಸಂಶೋಧನೆಗಳು ನಡೆದಿರುವುದು ತುಂಬಾ ವಿರಳ ಎಂದು ಹೇಳಬಹುದು. ಕೆಲವು ಚಿಕ್ಕಮಕ್ಕಳ ಕಲೆಯ ಕುರಿತಾಗಿ ಸಂಶೋಧನೆ ನಡೆದ ಅಧ್ಯಯನಗಳು ಇಲ್ಲಿ ನೀಡಲಾಗಿದೆ.

ಬಿ.ಪಿ. ಬಾಯಿರಿ, **ಚಿಕ್ಕಮಕ್ಕಳ ಚಿತ್ರಕಲೆ** ೧೯೬೭ರಲ್ಲಿ ನಡೆದ ಸಂಶೋಧನೆ. ಡಾ. ಸಿ.ಆರ್. ಚಂದ್ರಶೇಖರ, **ಚಿತ್ರಕಲೆ ಮತ್ತು ಮನೋವಿಕಾಸ,** ೧೯೬೫. ವ್ಹಿ.ಟಿ. ಕಾಳೆ, **ಚಿತ್ರಕಲಾ ಪರಿಚಯ,** ೧೯೬೭. ಅಶೋಕ ಟಿ. ಅಕ್ಕಿ, **'ಕಲಾ ಚರಿತ್ರೆ'** ೧೯೬೮.

ಪಿ.ಆರ್. ತಿಪ್ಪೇಸ್ವಾಮಿ ಅವರು ಮತ್ತು ಅ.ಲ. ನರಸಿಂಹನ್, ಎನ್. ಮರಿಶಾಮಾಚಾರ್ ಅವರ ಸಂಪಾದನೆಯಲ್ಲಿ ಹೊರಬಂದ **'ಚಿತ್ರಕಲಾ ಪ್ರಪಂಚ'** ಎಂಬ ಕೃತಿಯಲ್ಲಿ ಕಲಾಶಿಕ್ಷಣ, ಚಿಕ್ಕಮಕ್ಕಳ

೮. ಪಿ.ಆರ್. ತಿಪ್ಪೇಸ್ವಾಮಿ (ಪ್ರಸಂ), ಚಿತ್ರಕಲಾ ಪ್ರಪಂಚ, ಪುಟ–೫೮೫

ಚಿತ್ರಕಲೆ, ಪಠ್ಯ ವಸ್ತುವಿಗೆ ಸಂಬಂಧಿಸಿದ ಲೇಖನಗಳು ಸಂಗ್ರಹಗೊಂಡಿವೆ. ಅವುಗಳನು ಸಂಕ್ಷಿಪ್ತವಾಗಿ ಸೂಚಿಸಲಾಗಿದೆ. ಆರ್.ಎಂ. ಹಡಪದ, **ಶಿಕ್ಷಣ ಮತ್ತು ಚಿತ್ರಕಲೆ,** ೧೯೮೫. ಅ.ಲ. ನರಸಿಂಹನ್, **ಚಿತ್ರಕಲಾ ಶಿಕ್ಷಣ,** ೧೯೯೧. ಎಸ್. ಧನಲಕ್ಷ್ಮಿ, **ಶಿಕ್ಷಣದಲ್ಲಿ ಕಲೆ,** ೧೯೮೬. ಎಂ.ಎಸ್. ನಂಜುಂಡರಾವ್, **ಕರ್ನಾಟಕದಲ್ಲಿ ಕಲಾ ವಿದ್ಯಾಭ್ಯಾಸ,** ೧೯೯೧. ಎಸ್. ಶ್ರೀಕಂಠಸ್ವಾಮಿ, **ಮಗು ಚಿತ್ರಕಲೆ ಶಿಕ್ಷಣ** ೧೯೯೧. ಆರ್.ಜಿ. ರಾಯಕರ, **ಶಿಶುಕಲೆ,** ಎಚ್.ಎನ್. ಸರ್ವಮಂಗಳ, **ಮಾನಸಿಕ ಬೆಳವಣಿಗೆಯ ದೃಷ್ಟಿಯಲ್ಲಿ ಮಕ್ಕಳ ಚಿತ್ರಕಲೆ,** ಎಸ್. ಭಾಸ್ಕರ **ಸೃಜನಶೀಲ ಅಭಿವ್ಯಕ್ತಿ-ಚಿತ್ರಕಲಾ ಮಾಧ್ಯಮ** ೧೯೯೧. ವಿ.ಜಿ. ಅಂದಾನಿ, **ಮಕ್ಕಳಿಗೆ ಕಲಾ ಶಿಕ್ಷಣದ ಅಗತ್ಯ.** ಇವೆಲ್ಲವೂ ಈ ಕೃತಿಯಿಂದ ಹೊರಬಂದ ಲೇಖನಗಳಾಗಿವೆ.

ಎನ್. ವಿಶ್ವರೂಪಾಚಾರ್, **ಮಕ್ಕಳ ಕಲೆ,** ೨೦೦೪. ಡಾ. ಎಂ.ಎಸ್. ಮೂರ್ತಿ, **ಮಕ್ಕಳ ಮನಸ್ಸಿನ ಚಿತ್ರಕಲೆ** ೨೦೧೦. ಡಾ. ಎಸ್.ಸಿ. ಪಾಟೀಲ, **ವರ್ಣ ಸಂಚಯ,** ೨೦೧೧. ಮಂಜುನಾಥ ಕೆ. ಮಾನೆ, **ಚಿಕ್ಕಮಕ್ಕಳ ಚಿತ್ರಕಲೆ,** ೨೦೧೧. ಶಾಂತವೀರಣ್ಣ ಬುಸನೂರ, **ಕಲಾ ಶಿಕ್ಷಣ (ಚಿತ್ರಕಲಾ ಮಾರ್ಗದರ್ಶಿ),** ೨೦೦೪

ಈ ರೀತಿಯಾಗಿ ಮಕ್ಕಳ ಕಲೆಯ ಕುರಿತು ಅಧ್ಯಯನಗಳು ನಡೆದಿವೆ. ಮತ್ತು ನಿರ್ದಿಷ್ಟವಾಗಿ ಮಕ್ಕಳಿಗಾಗಿ ನಡೆದ ಸಂಶೋಧನೆ ಆಗಿರುವುದು ವಿರಳ. ಹಾಗಾಗಿ ಪ್ರಸ್ತುತ ಅಧ್ಯಯನದಲ್ಲಿ "ಚಿಕ್ಕಮಕ್ಕಳ ಚಿತ್ರಕಲೆ" ಎಂಬ ವಿಷಯವನ್ನು ಆಯ್ಕೆಮಾಡಿಕೊಂಡು ಮಕ್ಕಳ ಕಲೆ ಗುರುತಿಸಲಾಗುವುದು. ಮಕ್ಕಳ ಚಿತ್ರಕಲೆ ಬೆಳೆದುಬಂದ ರೀತಿ, ನೆಲೆ-ಹಿನ್ನೆಲೆ, ಕಲೆಯ ಉಗಮ, ಐತಿಹಾಸಿಕವಾಗಿ ಭೌಗೋಳಿಕವಾಗಿ ಹಲವಾರು ಸಂಗತಿ ಚಿಕ್ಕಮಕ್ಕಳ ಕಲೆಯ ಕುರಿತು ಇಲ್ಲಿ ವಿಶೇಷವಾಗಿ ಅಂದರೆ ಮಕ್ಕಳ ಕಲೆಗೂ ಪ್ರಾಮುಖ್ಯತೆಯಿದೆಯೇ, ಮಕ್ಕಳು ಚಿತ್ರವನ್ನು ಬಿಡಿಸುತ್ತಾರೆಯೇ ಹೀಗೆ ಹಲವಾರು ಸಂಗತಿಗಳು ಮಕ್ಕಳ ಕಲೆಯ ಬಗ್ಗೆ ತೆರದುಕೊಳ್ಳುತ್ತಾ ಹೋಗುತ್ತದೆ. ಹಾಗಾಗಿ ಈ ಅಧ್ಯಯನದಲ್ಲಿ "ಚಿಕ್ಕಮಕ್ಕಳ ಚಿತ್ರಕಲೆ" ಎಂಬ ವಿಷಯವನ್ನು ಆಯ್ಕೆಮಾಡಿಕೊಂಡು ಮಕ್ಕಳ ಕುರಿತಾದ ಕಲೆಯನ್ನು ಗುರುತಿಸಿ ಮಕ್ಕಳ ಬಿಡಿಸುವ ಚಿತ್ರಗಳನ್ನು ಒಂದು ಕಡೆ ವ್ಯವಸ್ಥಿತವಾಗಿ ಸಂಗ್ರಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಎಂ.ಫಿಲ್. ಅಧ್ಯಯನವನ್ನಾಗಿ ಚಿಕ್ಕಮಕ್ಕಳ ಚಿತ್ರಕಲೆ ಎಂಬ ವಿಷಯದ ಮೇಲೆ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ :

ಪ್ರಸ್ತುತ ಅಧ್ಯಯನವನ್ನು ಏಳು ಅಧ್ಯಾಯಗಳಾಗಿ ವಿಂಗಡಿಸಲಾಗಿದ್ದು ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸುವ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ಸ್ವರೂಪ ವಿವರವನ್ನು ಇಲ್ಲಿ ನೀಡಲಾಗಿದೆ.

ಅಧ್ಯಾಯ ಒಂದು :

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ ಕುರಿತಾಗಿ ವಿವರಣೆಯನ್ನು ಒಳಗೊಂಡಿದೆ.

ಅಧ್ಯಾಯ ಎರಡು :

ಚಿಕ್ಕಮಕ್ಕಳ ಚಿತ್ರಕಲೆಯ ನೆಲೆ – ಹಿನ್ನೆಲೆಗಳನ್ನು ಮತ್ತು ಕಲೆ ಬೆಳೆದು ಬಂದ ರೀತಿ ಕುರಿತು ಈ ಅಧ್ಯಾಯದಲ್ಲಿ ಹೇಳಲಾಗಿದೆ.

ಅಧ್ಯಾಯ ಮೂರು :

ಚಿಕ್ಕಮಕ್ಕಳ ಚಿತ್ರಕಲೆಗಳ ವರ್ಗೀಕರಣ : ಮಕ್ಕಳ ಮನಸ್ಥಿತಿ ಕುರಿತಾಗಿ ಮತ್ತು ಯಾವ ರೀತಿ ಚಿತ್ರಗಳನ್ನು ಪ್ರಸ್ತುತಪಡಿಸುತ್ತಾರೆ. ಎಂದು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಅಧ್ಯಾಯ ನಾಲ್ಕು :

ಚಿಕ್ಕಮಕ್ಕಳ ಕಲಾ ಪರಿಕರಗಳು ಮತ್ತು ರಚನಾ ವಿಧಾನಗಳು ಮಕ್ಕಳಿಗೆ ಕಲಾಪರಿಕರಗಳು ಎಷ್ಟು ಅವಶ್ಯಕ ಎಂದು ಈ ಅಧ್ಯಯದಲ್ಲಿ ಹೇಳಲಾಗಿದೆ.

ಅಧ್ಯಾಯ ಐದು :

ಚಿಕ್ಕಮಕ್ಕಳ ಚಿತ್ರಕಲೆಗಳ ವಸ್ತು ವಿಷಯ ಕುರಿತು ವಿಶ್ಲೇಷಣೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ

ಅಧ್ಯಾಯ ಆರು :

ಚಿಕ್ಕಮಕ್ಕಳ ಚಿತ್ರಕಲೆಯ ಒಂದು ತೌಲನಿಕ ಅಧ್ಯಯನ: ಒಂದರಿಂದ ಐದನೆಯ ವಯಸ್ಸಿನಲ್ಲಿ ಚಿತ್ರಗಳು ಹೇಗಿರುತ್ತದೆ. ಐದರಿಂದ ಎಂಟು ವಯಸ್ಸಿನಲ್ಲಿ, ಎಂಟರಿಂದ ಹನ್ನೆರಡು ವಯಸ್ಸಿನಲ್ಲಿ ಹೇಗಿರುತ್ತದೆ. ಎಂದು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಏಳು :

ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು ಒಟ್ಟು ಅಧ್ಯಯನದ ಫಲಿತಗಳನ್ನು ಈ ಅಧ್ಯಾಯ ಒಳಗೊಂಡಿದೆ.

ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಈ ಅಧ್ಯಯನವು "ಚಿಕ್ಕಮಕ್ಕಳ ಚಿತ್ರಕಲೆ" ಕುರಿತಾಗಿರುವುದರಿಂದ ಮಕ್ಕಳ ಚಿತ್ರಗಳು ಕಂಡುಬರುವ ಅಥವಾ ಸಂಗ್ರಹಗೊಂಡಿರುವ ಪ್ರದೇಶಗಳ ವ್ಯಾಪ್ತಿಯನ್ನು ಹೊಂದಿದೆ. ಮಕ್ಕಳ

ಚಿತ್ರಗಳನ್ನು ವರ್ಗೀಕರಿಸಿಕೊಂಡು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಇವರ ಚಿತ್ರಗಳಲ್ಲಿ ವಿಶೇಷತೆಯೇನು? ಗುರುತಿಸಿ ಮತ್ತು ನೇರವಾಗಿ ಶಾಲೆಗಳಿಗೆ ಭೇಟಿಕೊಟ್ಟು ಮಕ್ಕಳಿಂದ ಚಿತ್ರಗಳನ್ನು ಬಿಡಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಮತ್ತು ಮಕ್ಕಳು ತೆಗೆದ ಚಿತ್ರವು ವಿಷಯಕ್ಕೆ ಬಳಸಿಕೊಂಡು ಈ ಅಧ್ಯಯನಕ್ಕೆ ಪೂರಕವಾಗಿರುವುದರಿಂದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಅಧ್ಯಯನದ ವಿಧಾನ :

ಈ ಪ್ರಬಂಧದ ರಚನೆಗಾಗಿ ಮೂಲ ಆಕರ ಸಾಮಗ್ರಿ ಮತ್ತು ಆನುಷಂಗಿಕ ಆಕರ ಸಾಮಗ್ರಿ ಎಂಬ ಎರಡು ರೀತಿಯ ಆಕರಗಳಿಂದ ವಿಷಯ ಸಂಗ್ರಹ ಮಾಡಿಕೊಂಡು ಪ್ರಬಂಧ ರಚನೆ ಮಾಡುವ ವಿಧಾನ ಅನುಸರಿಸಲಾಗಿದೆ.

*** ಮೂಲ ಆಕರ ಸಾಮಗ್ರಿ :**

ಈ ಪ್ರಬಂಧದ ಅಧ್ಯಯನಕ್ಕೆ ಮೂಲ ಆಕರ ಸಾಮಗ್ರಿಯಾಗಿ ಅಧ್ಯಯನಕ್ಕೆ ಆಯ್ದುಕೊಂಡ "ಚಿಕ್ಕಮಕ್ಕಳ ಚಿತ್ರಕಲೆ"ಯನ್ನಾಧರಿಸಿ ಹಾಗೂ ಚಿತ್ರಗಳನ್ನು ಆಧರಿಸಿ ಕಲೆಗೆ ಪೂರಕವಾಗಿ ಕ್ಷೇತ್ರಕಾರ್ಯಗಳಿಗೆ ಭೇಟಿ ನೀಡಿ ಸಂಬಂಧಿಸಿದ ವಿಷಯ ಸಂಗ್ರಹಣೆ ಜೊತೆಗೆ ಶಾಲೆಗಳಿಗೆ ಭೇಟಿನೀಡಿ ಮಕ್ಕಳಿಂದ ಚಿತ್ರಗಳನ್ನು ತೆಗೆಸಿ ಸಂಗ್ರಹಿಸಿ ವ್ಯವಸ್ಥಿತವಾಗಿ ಮೂಲ ಆಕರ ಸಾಮಗ್ರಿಯಾಗಿ ಪರಿಗಣಿಸಲಾಗಿದೆ. ಮತ್ತು ವಾರದ ಪತ್ರಿಕೆಯಲ್ಲಿ ಮಕ್ಕಳು ತೆಗೆದ ಚಿತ್ರಗಳು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಛಾಯಾಚಿತ್ರಣ :

ಚಿಕ್ಕ ಮಕ್ಕಳ ಚಿತ್ರಕಲೆಯೆಂಬ ಶೀರ್ಷಿಕೆಯ ಈ ಪ್ರಬಂಧದಲ್ಲಿ ಚಿತ್ರಗಳು ಬಹುಮುಖ್ಯವಾಗಿವೆ. ಹಾಗಾಗಿ ಮಕ್ಕಳು ರಚಿಸಿದ ಚಿತ್ರಗಳ ನೆಲೆಗಳಿಗೆ ತೆರಳಿ ಛಾಯಾಚಿತ್ರಣ ಮಾಡಿಕೊಳ್ಳಲಾಗಿದೆ. ಕೆಲವು ಸಂದರ್ಭದಲ್ಲಿ ವೀಡಿಯೋ ಚಿತ್ರೀಕರಣ ಮಾಡಿಕೊಂಡು ಅದನ್ನು ಛಾಯಾಚಿತ್ರಗಳಿಗೆ ಪರಿವರ್ತಿಸಿಕೊಳ್ಳಲಾಗಿದೆ.

ವಿಷಯಕ್ಕೆ ಸಂಬಂಧಿಸಿದ ಪ್ರತಿಯೊಂದು ಛಾಯಾಚಿತ್ರಗಳನ್ನು ಮಾಡಿಕೊಂಡು ಅದಕ್ಕೆ ಸಂಬಂಧಪಟ್ಟಂತಹ ಮಾಹಿತಿಯನ್ನು ಕೆಳಗಡೆ ಬರೆದುಕೊಳ್ಳಲಾಗಿದೆ. ಹೀಗೆ ಛಾಯಾಚಿತ್ರದ ಪಟ್ಟಿಕೆಗಳನ್ನು ಪ್ರತ್ಯೇಕವಾಗಿ ಮಾಡಿಕೊಂಡು ನಂತರ ಅವುಗಳನ್ನು ಬರವಣಿಗೆಗೆ ಅಳವಡಿಸಲಾಗಿದೆ.


*** ಆನುಷಂಗಿಕ ಆಕರ ಸಾಮಗ್ರಿ :**

ಈ ಕಿರು ಸಂಶೋಧನ ಪ್ರಬಂಧದಲ್ಲಿ ಪ್ರಕಟಿತ, ಅಪ್ರಕಟಿತ ಕೃತಿಗಳು, ಗೆಝುಟೀಯರಗಳು, ವಿಶ್ವಕೋಶಗಳು, ಪತ್ರಿಕಾ ಲೇಖನಗಳು, ಸಂಶೋಧನ ಪ್ರಬಂಧಗಳು, ಗ್ರಂಥಸೂಚಿಗಳು, ಶಬ್ಧಕೋಶಗಳು, ಸ್ಮರಣ ಸಂಚಿಕೆಗಳು ಮುಂತಾದವುಗಳನ್ನು ಅಧ್ಯಯನದ ಆನುಷಂಗಿಕ ಆಕರ ಸಾಮಗ್ರಿಗಳಾಗಿ

ಬಳಸಿಕೊಳ್ಳಲಾಗಿದೆ. ಹಾಗೆಯೇ ಬೇರೆ ಬೇರೆ ಸ್ಥಳಗಳಿಗೆ ಭೇಟಿ ನೀಡಿ ವಿಷಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಅನುಷಂಗಿಕ ಆಕರ ಸಾಮಗ್ರಿಯಾಗಿ ಬಳಸಿಕೊಂಡು ವಿಷಯ ಸಂಗ್ರಹ ಮಾಡಿಕೊಳ್ಳುವ ವಿಧಾನ ಅನುಸರಿಸಲಾಗಿದೆ.

ಅಧ್ಯಾಯ - ಎರಡು

ಚಿಕ್ಕಮಕ್ಕಳ ಚಿತ್ರಕಲೆಯ ನೆಲೆ-ಹಿನ್ನೆಲೆ



ಅಧ್ಯಾಯ - ೨
ಚಿಕ್ಕಮಕ್ಕಳ ಚಿತ್ರಕಲೆಯ ನೆಲೆ-ಹಿನ್ನೆಲೆ

ಪ್ರಕೃತಿ ಮತ್ತು ಮಾನವ ಈ ಎರಡು ಅಂಶಗಳಿಗೂ ತುಂಬಾ ನಿಕಟವಾದ ಸಂಬಂಧವಿದೆ. ಮನುಷ್ಯ ಹುಟ್ಟುವುದಕ್ಕಿಂತ ಪೂರ್ವದಲ್ಲಿಯೇ ಪ್ರಕೃತಿ ಜನ್ಮತಾಳಿದ್ದು ನಂತರ ಸಾವಿರಾರು ಜೀವ ಸಂಕುಲ ಈ ಭೂಮಿಯ ಮೇಲೆ ಅಡಿಯಿಟ್ಟವು. ಅದರಲ್ಲಿ ಮನುಷ್ಯ ಜೀವಿಯು ಕೂಡ ಒಂದು. ಎಲ್ಲಾ ಜೀವಿಗಿಂತಲೂ ಮನುಷ್ಯ ಶ್ರೇಷ್ಠ, ಬುದ್ಧಿವಂತ ಜೀವಿ ಎಂದು ಕರಿಸಿಕೊಂಡನು. ಈ ಮಾನವ ಹಿನ್ನೆಲೆ ಹುಡುಕಿದರೆ ಇವನು ಒಬ್ಬ ಪ್ರಾಗೈತಿಹಾಸಿಕ ಕಾಲದ ನೆಲೆಯಿಂದ ಬಂದವನು. "ಆದಿ ಮಾನವ" ಎಂದು ಗುರುತಿಸಿಕೊಂಡು ನಂತರದಲ್ಲಿ ತನ್ನಲ್ಲೆ ತಾನೇ ಹುಡುಕಿಕೊಳ್ಳಲು ಆರಂಭಿಸಿದ, ಕಾಡು ಪ್ರಾಣಿಗಳ ಜೊತೆ ಪ್ರಾಣಿಯಾಗಿ ಜೀವಿಸತೊಡಗಿದ ನಂತರ ದಿನಗಳಲ್ಲಿ ಆಹಾರಕ್ಕಾಗಿ ಪ್ರಾಣಿಯನ್ನು ಬೇಟೆಯಾಡಿ ಮಾಂಸ ತಿನ್ನತೊಡಗಿದ. ತನಗೆ ತೋಚಿದ ಹಾಗೆಯೇ ಕಾಡಿನಲ್ಲಿ ಸ್ವಾತಂತ್ರ್ಯವಾಗಿ ಓಡಾಡುತ್ತಾ ಬದುಕಲು ಆರಂಭಿಸಿದ. ಪ್ರಾಗೈತಿಹಾಸಿಕ ಕಾಲದಲ್ಲಿ 'ಆದಿ ಮಾನವ" ಎಂದು ಹೆಸರು ಪಡೆದು ನೆಲೆಯೂರಲು ಕಲ್ಲು, ಬಂಡೆ, ಗವಿಗಳಲ್ಲಿ ಆಶ್ರಯಿಸಿಕೊಂಡು ಕಾಡು ಮತ್ತು ಪ್ರಾಣಿಗಳ ಜೊತೆ ಒಡನಾಟ, ತನಗೇ ಗೊತ್ತಿಲ್ಲದೆ ಕಲೆಯು ಸಹ ಆದಿಮಾನವನಲ್ಲಿ ಚಿಗುರು ಒಡೆಯುತ್ತದೆ. ಪ್ರಾಣಿಗಳ ಬೇಟೆಯಾಡುವ ಚಿತ್ರ ಬಿಡಿಸುವುದು ಪ್ರಾರಂಭಿಸಿದ. ಅದು ತಮ್ಮ ಸಹಪಾಠಿಗಳ ಸಂದೇಶದ ಕುರಿತಾಗಿ ಪ್ರಾಣಿಗಳ ಚಿತ್ರಗಳನ್ನು ಕಲ್ಲು, ಬಂಡೆಗಳ ಮೇಲೆ ಚಿತ್ರಿಸಲಾಗಿದೆ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವುದಕ್ಕೆ ಮತ್ತು ತಮ್ಮ ಸಹಪಾಠಿಗಳಿಗೆ ತಿಳಿಯಲಿ ಎನ್ನುವ ಉದ್ದೇಶದಿಂದ ಚಿತ್ರ ಬಿಡಿಸಲು ಆರಂಭಿಸಿದನು. ಸುಮಾರು ೧೦-೧೫ ಸಾವಿರ ವರ್ಷಗಳ ಹಿಂದೆ ಶೋಧನೆಗೆ ಒಳಪಟ್ಟ ಆದಿಮಾನವನ ಚಿತ್ರಗಳು ಕಂಡುಬರುತ್ತವೆ ಎಂದು ಹೇಳಲಾಗಿದೆ.

ಈ ಆದಿಮಾನವ ಚಿತ್ರಗಳಲ್ಲಿ ಹಲವು ಪ್ರಕಾರಗಳು ಕಂಡುಬರುತ್ತವೆ. ಅಂತವುಗಳಲ್ಲಿ "ಆದಿಮಾನವರು ಶಿಲಾಯುಗ ಹಂತದಲ್ಲಿ ತಾವು ವಾಸ ಮಾಡುತ್ತಿದ್ದ ಶಿಲಾಗುಹೆಗಳು, ಶಿಲಾಶ್ರಯಗಳು ಮತ್ತು ಬೃಹತ್ ಬಯಲು ಬಂಡೆಯ ಮೇಲೆ ಚಿತ್ರರಚನೆ ಮಾಡಿದ್ದಾರೆ. ಹಾಗಾಗಿ ವಿದ್ವಾಂಸರು ಪ್ರಾಗೈತಿಹಾಸಿಕ ಚಿತ್ರಗಳನ್ನು ಪ್ರಮುಖವಾಗಿ ಕೆಳಗಿನಂತೆ ವಿಂಗಡಿಸಲಾಗಿದೆ.

*** ಬಯಲು ಬಂಡೆಯ ಚಿತ್ರಗಳು-ಶಿಲಾಗುಹೆಯ ಚಿತ್ರಗಳು :**

ಆದಿಮಾನವರು ಬೆಟ್ಟ-ಗುಡ್ಡಗಳ ಮೇಲೆ ಕೊರೆದ ಚಿತ್ರಗಳು ಮತ್ತು ಬಂಡೆಯ ಮೇಲೆ ಕುಟ್ಟಿದ ಚಿತ್ರಗಳು ವಿಶೇಷವಾಗಿ ಕಂಡುಬರುತ್ತವೆ".[೧] ಹಾಗೆಯೇ ಆದಿಮಾನವ ಚಿತ್ರಗಳಲ್ಲಿ ಬಣ್ಣಗಳಿಂದ ಕೂಡಿದ ಚಿತ್ರಗಳನ್ನು ರಚಿಸಿದ್ದು, ಅವು ಪ್ರಾಣಿಗಳ ರಕ್ತದಿಂದ ಕಾಡುಪ್ರಾಣಿಗಳನ್ನು ಬೇಟೆಯಾಡುವ ಚಿತ್ರಗಳು ಆಗಿವೆ. ಗವಿಗಳಲ್ಲಿ ಕಲ್ಲು-ಬಂಡೆಗಳಲ್ಲಿ ಮತ್ತು ಬೇರೆ ಬೇರೆ ಪ್ರದೇಶಗಳಲ್ಲಿ ಹಲವಾರು ಜಾಗಗಳಲ್ಲಿ ಕಾಣಬಹುದು. ಬೃಹತ್ತಾದ ಬಯಲು ಬಂಡೆಗಳ ಮೇಲೆ ಗವಿಗಳಲ್ಲಿ ಪ್ರಾಗೈತಿಹಾಸಿಕ ಚಿತ್ರಗಳು ಕೆಂಪು ಮತ್ತು ಬಿಳಿ ವರ್ಣಗಳಿಂದ ಕೂಡಿವೆ. ಆದಿಮಾನವನಲ್ಲಿ ಬುದ್ಧಿಶಕ್ತಿ ದಿನದಿಂದ ದಿನಕ್ಕೆ ಬೆಳೆದು ಇಮ್ಮಡಿಯಾಗುತ್ತಾ ಹೊಸಹೊಸ ಆವಿಷ್ಕಾರಗಳನ್ನು ಕಂಡುಹಿಡಿಯತೊಡಗಿದ. ಹಾಗೆಯೇ ದಿನಗಳು ಕಳೆದಂತೆ ಗಂಡು, ಹೆಣ್ಣು, ಸಹಪಾಠಿಗಳನ್ನು ಗುರುತಿಸತೊಡಗಿದ. ತನ್ನಲ್ಲಿ ನಾಗರಿಕತೆ ಬೆಳೆದಂತೆಲ್ಲಾ ಬದಲಾವಣೆ ಕಂಡುಕೊಂಡ, ತನ್ನ ಒಂದು ಕಡೆ ನೆಲೆಗಾಗಿ ಮತ್ತು ಆಶ್ರಯಿಸಲು ಮನೆ ನಿರ್ಮಿಸಿದ. ತನ್ನ ಸಹಾಯಕ್ಕೆ ದೊಡ್ಡ ದೊಡ್ಡ ಪ್ರಾಣಿಗಳನ್ನು ಪಳಗಿಸಿ ಅವುಗಳಿಂದ ಕೆಲಸ ಮಾಡಿಸತೊಡಗಿದ. 'ಹೆಣ್ಣಿ'ಗೆ ಹೆಂಡತಿ ಸ್ಥಾನಕೊಟ್ಟು ತನ್ನಿಂದ ಹುಟ್ಟಿದ ಜೀವಿಗಳು ತನ್ನ ಮಕ್ಕಳು ಎಂದು ಗುರುತಿಸಿದ, ದಿನದಿಂದ ದಿನಕ್ಕೆ ಆದಿಮಾನವನ ಬುದ್ಧಿವಂತನಾಗತೊಡಗಿದ. ನಡೆದ ಘಟನೆಗಳ ಕುರಿತು ಚಿತ್ರ ಬಿಡಿಸುವುದು ಹವ್ಯಾಸ ಬೆಳೆಸಿಕೊಂಡ. ಕೇವಲ ಸಂದೇಶಕ್ಕಾಗಿ ಚಿತ್ರಗಳನ್ನು ಬಿಡಿಸುವ ಆದಿಮಾನವ ಕ್ರಮೇಣ ಕಲೆಯ ಬಗ್ಗೆ ಒಲವು ಮೂಡಿತು. ಚಿಕ್ಕ ಚಿಕ್ಕ ಮಕ್ಕಳಿಗೂ ಕಲೆಯ ಬಗ್ಗೆ ಹೇಳಲು ಆರಂಭಿಸಿದ. ಕೇವಲ ಆದಿಮಾನವ ಚಿತ್ರಗಳು ಚಿತ್ರಗಳಾಗಿ ಉಳಿಯದೆ ಅವು ಕಲಾವಿದರಿಗೆ ಸ್ಫೂರ್ತಿದಾಯಕವಾಗಿ ಕಲೆಯು ಇನ್ನಷ್ಟು ಬೆಳೆಯುವುದಕ್ಕೆ ಪ್ರೇರಣೆಯಾಯಿತು. ಈ ಆದಿಮಾನವನ ಚಿತ್ರಗಳು ಶತಶತಮಾನಗಳು ಕಳೆದರೂ ಇನ್ನೂ ಅಜರಾಮರವಾಗಿ ಉಳಿದುಕೊಂಡಿವೆ.

ಆದಿಮಾನವನ ಚಿತ್ರಗಳ ಇಂದು ಅಧ್ಯಯನದ ಸಾಮಗ್ರಿ ಮಾಹಿತಿಯಿಂದ ಮಕ್ಕಳು ಸಹ ಈ ಚಿತ್ರಗಳನ್ನು ನೋಡಿ, ಸ್ಫೂರ್ತಿಪಡೆದು ಮಕ್ಕಳಲ್ಲಿ ಚಿತ್ರಬಿಡಿಸುವ ಆಶೆ ಚಿಗುರೊಡೆಯಿತು ಇದರಿಂದ ಹಂತಹಂತವಾಗಿ ಚಿತ್ರಗಳಲ್ಲಿ ಹೊಸತನ ಪ್ರಯತ್ನಿಸುತ್ತಾ ಮಕ್ಕಳು ಸಹ ಆದಿಮಾನವನ

೧. ಯಾದಪ್ಪ ಪರದೇಶಿ, ಕರ್ನಾಟಕ ಕಲಾ ಸಂಸ್ಕೃತಿ, ಪುಟ-೧

ತರಹ ಚಿತ್ರ ತೆಗೆಯಲು ಪ್ರಾರಂಭಿಸಿದವು. ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯವು ತುಂಬಾ ವಿಭಿನ್ನವಾಗಿ ಮತ್ತು ಸೃಜನಶೀಲ ಮನೋಭಾವ ರೂಢಿಸಿಕೊಂಡು ತಾವು ನೋಡಿದ ಕೆಲವು ಘಟನಾವಳಿಗಳು ತಮ್ಮ ಕಣ್ಣಮುಂದೆ ತಂದುಕೊಂಡು ಮಕ್ಕಳು ಚಿತ್ರ ಬಿಡಿಸುವುದಕ್ಕೆ ಪ್ರಯತ್ನಿಸಿದವು "ಚಿಕ್ಕಮಕ್ಕಳ ಚಿತ್ರಕಲೆ" ಆ ಹೆಸರೇ ಹೇಳುವಂತೆಯೆ ಮಕ್ಕಳು ತುಂಬಾನೆ ಸ್ವತಂತ್ರವಾದ ಮನಸ್ಸುಗಳ ತಮಗೆ ಅನಿಸಿದ ಚಿತ್ರ ಬಿಡಿಸುವ ಜೊತೆಗೆ ಕಲೆಯನ್ನು ಹೊರ ಹಾಕುತ್ತವೆ.

*** ಚಿಕ್ಕ ಮಕ್ಕಳ ಚಿತ್ರಕಲೆಯ ವೈಶಿಷ್ಟ್ಯಗಳು :**

ಚಿಕ್ಕ ಮಕ್ಕಳು ಚಿತ್ರಕಲೆಯನ್ನು ನಾವುಗಳು ಚಾರಿತ್ರಿಕ, ಪಾರಂಪರಿಕವಾಗಿ ಗುರುತಿಸಿದ್ದೇವೆ. ಜೊತೆಗೆ ಚಿಕ್ಕ ಮಕ್ಕಳ ಚಿತ್ರಕಲೆ ಮೊದಲ ಹಂತ, ಎರಡನೇ ಹಂತ ವಿಶ್ಲೇಷಣೆಗೆ ಒಳಪಡಿಸುತ್ತ ಅವುಗಳ ವೈಶಿಷ್ಟ್ಯತೆ ಅಗತ್ಯತೆಯನ್ನು ಹಲವು ಆಯಾಮಗಳಲ್ಲಿ ಪ್ರಸ್ತುತಪಡಿಸಲಾಗಿದೆ. "ಚಿಕ್ಕಮಕ್ಕಳದ್ದೂ ಚಿತ್ರಕಲೆಯೋ? ಅವರು ಕೂಡ ಚಿತ್ರ ಮಾಡಬಲ್ಲರೇ? ಹೌದು! ಪ್ರತಿ ಮಗುವೂ ಒಬ್ಬ ಕಲಾವಿದ. ಚಿತ್ರಗಳು ಶಿಶುಗಳ ಭಾಷೆಯಾಗಿ ಅವರಿಗೆ ಮೊದಲು ಬರುವುದು ಚಿತ್ರಕಲೆ. ಆನಂತರ ಬರಹ, ಚಿತ್ರ ಮಾಡುವುದೆಂದರೆ ಅವರಿಗೆ ಆನಂದ.

ಮಕ್ಕಳು ತಮಗೆ ಸಹಜ ಸ್ವಭಾವದ ಗುರುತುಗಳಿಂದ ತಮ್ಮ ಭಾವನೆಗಳನ್ನು ತೋಡಿಕೊಳ್ಳುವ ರಚನೆಯು ಮಕ್ಕಳ ಚಿತ್ರಕಲೆಯಾಗಿದೆ. ಅವನ್ನು ಮಕ್ಕಳು ಮಾತ್ರ ರಚಿಸಬಲ್ಲರು. ಅದರ ಮೇಲೆ ಇತರರ ಪ್ರಭಾವ ಬಿದ್ದರೆ ಅದು ಶಿಶು ಚಿತ್ರಕಲೆಯಲ್ಲ. ಅದು ಆಗ ಕೃತಕ, ನಕಲಿ ಆಗುತ್ತದೆ.

ಚಿಕ್ಕಮಕ್ಕಳ ಚಿತ್ರಗಳನ್ನು ಸುಲಭ ರೂಪಕ್ಕೆ ತಂದು ತೋರಿಸುತ್ತಾರೆ. ಈ ನಿಯಮವು ಎಲ್ಲಾ ಕಾಲದ ಮತ್ತು ಎಲ್ಲಾ ಜನಾಂಗಗಳ ಮಕ್ಕಳಲ್ಲೂ ತೋರುತ್ತದೆ. ಮಗುವಿನ ತೊದಲ್ನುಡಿಯನ್ನು ನಾವು ಬಹಳವಾಗಿ ಮೆಚ್ಚುತ್ತೇವೆ. ಅದು ಎಲ್ಲರಿಗೂ ಅರ್ಥವಾಗದಿರಬಹುದು. ಹೆತ್ತವರಿಗೆ ಮಾತ್ರ ಅರ್ಥವಾಗಬಹುದು. ಚಿಕ್ಕಮಕ್ಕಳು ಮಾತನಾಡಲು ಬಯಸುವುವು ಆ ಸಹೃದಯತೆಯನ್ನು ತ್ಯಜಿಸಿ ಏನೇನೋ ಗೊಜಗುಟ್ಟುತ್ತದೆಂದು ಗದರಿಸಬಹುದೇ ಹಾಗೆ ಮಾಡುವುದು ಹಾನಿಕರ. ಸ್ಪಷ್ಟ ಉಚ್ಚಾರವು ಆ ಮೇಲೆ ಬರುತ್ತದೆ. ಮೊದಲು ಮಾತನಾಡುವುದು ಆನಂತರ ಭಾಷಾ ನಿಯಮ ವ್ಯಾಕರಣಾದಿಗಳನ್ನು ಕಲಿಯುವುದು ಮಕ್ಕಳ ಚಿತ್ರಕಲೆಯಲ್ಲೂ ಅದೇರೀತಿ ಚಿತ್ರಗಳೆಂದರೆ ಮನದಲ್ಲಿ ಮೂಡಿದುದನ್ನು ಫಲಕಗಳ ಮೇಲೆ ಗುರುತಿಸುವುದು. ಹಾಗೆ ಭಾವಪ್ರದರ್ಶನ ಮಾಡಿ ಆತ್ಮತೃಪ್ತಿಪಟ್ಟು ಅವರು ಹಿಗ್ಗುತ್ತಾರೆ. ಅವುಗಳನ್ನು ಅರ್ಥಮಾಡಿಕೊಳ್ಳುವುದು ಹಿರಿಯರ ಕರ್ತವ್ಯ. ಆ ರಚನಾ ಸ್ಫೂರ್ತಿಯನ್ನು ಹತ್ತಿಕ್ಕಬಾರದು, ಚಿತ್ರ ಬರೆಯುತ್ತಿದ್ದರೆ ಆತನೇನೋ ತಪ್ಪು ಕೆಲಸ ಮಾಡುತ್ತಿದ್ದಾನೆಂದು ತಿಳಿಯಬಾರದು".[೨] ಈ ಹಿನ್ನೆಲೆಯಲ್ಲಿ ಮಕ್ಕಳ ಮನಸ್ಸು ಸಹ ಬೆಳವಣಿಗೆಯ ಹಂತದಲ್ಲಿರುವಾಗ

೨. ಬಿ.ಪಿ. ಬಾಯಿರಿ, ಚಿಕ್ಕಮಕ್ಕಳ ಚಿತ್ರಕಲೆ, ಪುಟ–೧–೨

ಅದಕ್ಕೆ ಸೂಕ್ತ ಪೋಷಣೆಯನ್ನು ಹೆತ್ತವರು ನೀಡಬೇಕಾಗುತ್ತದೆ. ಸಂಗೀತ, ಕಲೆ, ಆಟ-ಪಾಠಗಳಲ್ಲಿ ಉತ್ತಮವಾದ ಪೈಪೋಟಿಯಿದ್ದರೆ ಅದು ಮಕ್ಕಳ ಭವಿಷ್ಯವನ್ನು ರೂಢಿಸುತ್ತದೆ. ಮಗುವು ಚಿತ್ರಿಸುವಾಗ ಮಾಯಾ ಪ್ರಪಂಚವನ್ನೇ ಸೃಷ್ಟಿಸುತ್ತವೆ. ಮಗುವಿನ ಮನಸ್ಸು ತುಂಬಾ ಸೂಕ್ಷ್ಮತೆಯಿಂದ ಕೂಡಿದ್ದು, ಅವು ಬಿಡಿಸುವ ಚಿತ್ರಗಳು ಕೂಡ ಮುಗ್ಧತೆ ಆ ಚಿತ್ರಗಳಲ್ಲಿ ಕಾಣಬಹುದು. ಸ್ವತಂತ್ರವಾಗಿ ಚಿತ್ರ ರಚಿಸುವ ಮಕ್ಕಳು ತಮ್ಮದೇ ಲೋಕದಲ್ಲಿ ತಮಗೆ ಅನಿಸಿದ ದೃಶ್ಯಗಳನ್ನು ಮಾಡಿ ಚಿತ್ರ ಬಿಡಿಸುವರು. ಯಾರಲ್ಲಿ ತುಂಬಾ ವಿಶೇಷವಾದ ಶಕ್ತಿ ಇರುತ್ತದೋ ಅಂತಹ ಮಕ್ಕಳ ಚಿತ್ರಗಳಲ್ಲಿ ವಿಶೇಷವಾಗಿ ಹೊಸತನ ಕಾಣಬಹುದು. ಮಕ್ಕಳು ಈ ಲೋಕದ ಬಹಳ ದೊಡ್ಡ ಭರವಸೆ. ನಾಳಿನ ಎಲ್ಲ ಸುಂದರ ಆಸೆಗಳು ಶುರುವಾಗುವುದು ಈ ಮಕ್ಕಳಿಂದಲೇ. ಅವರ ಮುಗ್ಧತೆಯೊಳಗಿನ ಪ್ರಬುದ್ಧತೆ, ನಗುವಿನೊಳಗಿನ ಸಹಜತೆ, ನಡೆಯೊಳಗಿನ ನಿಷ್ಕಲ್ಮಶತೆ ಇವೇ ಈ ಜಗತ್ತನ್ನು ಒಂದಷ್ಟು ಸಹನೀಯವಾಗಿಸಬಲ್ಲ ಜೀವರಸಗಳು. ಆದರೆ ಮಕ್ಕಳಿಗೆ ಸಿಗಬೇಕಾದ ಸಹಜ ಬಾಲ್ಯವನ್ನು ದೊಡ್ಡವರಾದ ನಾವು ನಮ್ಮ ಸಂಕುಚಿತ ಲೆಕ್ಕಾಚಾರಗಳಲ್ಲಿ ದಾರಿ ತಪ್ಪಿಸುತ್ತೇವೆ. ನಾಳಿನ ಭರವಸೆಗಳಿಗೆ ಲಾಭ-ನಷ್ಟಗಳ ಲೇಬಲ್ಲಗಳನ್ನು ಅಂಟಿಸುತ್ತ, ಮಕ್ಕಳು ಯಾವ ಶಾಲೆಯಲ್ಲಿ ಏನು ಕಲಿತರೆ ನಾಳೆ ಹೆಚ್ಚು ಸಂಬಳ ಸಿಗುತ್ತದೆ ಎಂಬುದನ್ನು ಬಹಳ ದೊಡ್ಡ ಪ್ರಶ್ನೆಯಾಗಿಸಿಕೊಂಡಿದ್ದೇವೆ. ಈ ಪ್ರಶ್ನೆಯೇ ಮಕ್ಕಳ ಪುಟ್ಟ ಭಾವಕೋಶವನ್ನು ಅರಳದಂತೆ ತುಳಿಯುತ್ತದೆ. ಮಕ್ಕಳು ಸದಾ ಪಠ್ಯಪುಸ್ತಕಗಳಿಗೆ ಅಂಟಿಕೊಂಡು ಹೊಮ್‌ವರ್ಕ್, ನೋಟ್ಸ್‌ಗಳಲ್ಲಿ ಮುಳುಗಿದ್ದರೆ ನಿರಾಳವಾಗಿರುವ ಪೋಷಕರು ಪಕ್ಕದ ಮನೆಯ ಮಕ್ಕಳೊಂದಿಗೆ ಆಟವಾಡಿದರೆ, ಚಿತ್ರ ಬರೆಯುತ್ತಿದ್ದರೆ ಅಥವಾ ಕಥೆ ಪುಸ್ತಕ ಓದುವುದು, ಆಡುವುದು, ಕುಣಿಯುವುದು ತಮ್ಮ ಭಾವನೆಗಳನ್ನು ಮಾತಿನಲ್ಲೋ ಅಥವಾ ಅಕ್ಷರಗಳಲ್ಲೋ ವ್ಯಕ್ತಪಡಿಸುವುದು ಕೂಡ ಕಲಿಕೆಯ ಒಂದು ಮುಖ್ಯವಾದ ಭಾಗ ಎಂದು ನಮಗೇಕೆ ಅನಿಸುತ್ತಿಲ್ಲ. ಮಕ್ಕಳ ಪುಟ್ಟ ಮನಸ್ಸು ಹೊರಜಗತ್ತಿನೊಂದಿಗೆ ಹೇಗೆಲ್ಲಾ ಅನುಸಂಧಾನ ನಡೆಯುತ್ತಿರುತ್ತದೆ ಎಂಬುದು ಅತ್ಯಂತ ಪಠ್ಯದ ಜೊತೆ ಸಾಂಸ್ಕೃತಿಕ ಚಟುವಟಿಕೆಗಳು ಮಕ್ಕಳ ಮನೋವಿಕಾಸಕ್ಕೆ ಅಗತ್ಯವಾಗಿ ಕಲಿಕೆಯಲ್ಲಿ ತೊಡಗಿಸಿಕೊಳ್ಳುತ್ತವೆ.

*** ಚಿತ್ರಕಲೆ ಮತ್ತು ಮನೋವಿಕಾಸ :**

"ಚಿತ್ರಕಲೆ, ಭಾಷೆ ಮತ್ತು ಆಟ ಇವು ಮೂರು ಅಭಿವ್ಯಕ್ತಿಯ ಮುಖ್ಯ ಮಾಧ್ಯಮಗಳು. ಅನುಭವಗಳನ್ನು, ಆಲೋಚನೆಗಳನ್ನು, ಭಾವನೆಗಳನ್ನು ವ್ಯಕ್ತಪಡಿಸಲು ಇರುವ ಅತ್ಯಂತ ಸರಳ ಮಾಧ್ಯಮಗಳಾಗಿವೆ. ಇದರಲ್ಲಿ ಚಿತ್ರಕಲೆಯು ಗೀಚುವಿಕೆಯಿಂದ ಆರಂಭಿಸಿ ಕ್ರಮೇಣ ಭಾಷೆ, ಆಟಗಳನ್ನು ಸಮರ್ಥವಾಗಿ ಮೈಗೂಡಿಸಿಕೊಳ್ಳುವಲ್ಲಿ ಸಹಾಯಕವಾಗುತ್ತದೆ.

ಒಂದು ಮಗುವಿನ ಅಭಿವ್ಯಕ್ತಿಯ ವಿಧಾನದಲ್ಲಿ ಎರಡು ವಿಧಗಳನ್ನು ಕಾಣುತ್ತೇವೆ. ಒಂದು ಭಾಷೆ, ಇನ್ನೊಂದು ಪ್ರತಿಭಾ ವಿಧಾನ. ಈ ಪ್ರತಿಭಾ ವಿಧಾನ ಮುಖ್ಯವಾಗಿ ಚಿತ್ರರೂಪದಲ್ಲಿ ಇರುತ್ತದೆ. ಇವೆರಡು ಪರಸ್ಪರ ಪೂರಕವಾಗಿರುತ್ತವೆ. ಸಾಮಾನ್ಯವಾಗಿ ಮಗು ತೊದಲು ನುಡಿಯನ್ನಾಡುವ ಪೂರ್ವದಲ್ಲೇ ಕೈಗೆ ಬಳಪ, ಸೀಸು, ಸೀಮೆಸುಣ್ಣ, ಇದ್ದಿಲು, ಕಡ್ಡಿಗಳಿಂದ ಗೀಚಾಡಲು ಆರಂಭಿಸುತ್ತದೆ. ಗೋಡೆ, ನೆಲ, ಕಾಗದ, ಬಾಗಿಲು ಇತ್ಯಾದಿಗಳ ಮೇಲೆ ಗೆರೆ, ಚಿತ್ರಗಳನ್ನು ಬರೆಯುತ್ತದೆ. ಇವು ನಮಗೆ ಅಸಂಬದ್ಧ ಗೆರೆಗಳೆಂದು ಕಂಡರೆ ಮನಶಾಸ್ತ್ರದ ಪ್ರಕಾರ ಇವುಗಳಿಗೆ ವಿಶೇಷ ಅರ್ಥ ಮೌಲ್ಯವಿದೆ ಎನ್ನಬಹುದು".[೩] ಮಕ್ಕಳ ಮನಸ್ಸಿನ ಮೇಲೆ ಆಗುವ ಪರಿಣಾಮಗಳು ನೇರವಾಗಿ ತಮ್ಮ ಬುದ್ಧಿಶಕ್ತಿಯನ್ನು ಕಲಿಕೆಗೆ ಒಗ್ಗೂಡಿಸಿ ಬೇರೆ ಬೇರೆ ವಿಷಯಗಳ ಕುರಿತು ಮನನ ಮಾಡಿಕೊಂಡು ಮಕ್ಕಳು ತಮ್ಮದೇ ಲೋಕದಲ್ಲಿ ಮುಳುಗಿ ಹೊಸ ಹೊಸ ಆವಿಷ್ಕಾರಗಳ ತುಡಿತ ಅವುಗಳನ್ನು ಪ್ರೇರೆಪಿಸಿ ಇಂದ್ರಿಯಗಳು ನೇರವಾಗಿ ಸೃಜನಶೀಲತೆಗೆ ಹೊರಳುತ್ತವೆ. ಇಲ್ಲಿ ಮಕ್ಕಳು ಎಲ್ಲಾ ಮಾಧ್ಯದಲ್ಲೂ ತಮ್ಮನ್ನೂ ತೋಡಗಿಸಿಕೊಳ್ಳುತ್ತವೆ. ಆಟವಾಗಿರಬಹುದು, ಓದುವುದು, ಬರೆಯುವುದು, ಹಾಡುವುದು, ನೃತ್ಯ ಮಾಡುವುದು, ಚಿತ್ರ ಬಿಡಿಸುವುದು ಹಲವಾರು ಬಗೆಯ ಮಾಧ್ಯಮಗಳಲ್ಲಿ ತಲ್ಲೀನರಾಗುತ್ತವೆ.

ಮಕ್ಕಳು ಚಿತ್ರಗಳಿಗೆ ಹೊಸ ಆಯಾಮವನ್ನು ಸೃಷ್ಟಿಮಾಡಿ ಬಣ್ಣಗಳ ಬಳಕೆ ಯಾವ ಚಿತ್ರಕ್ಕೆ ಯಾವ ಬಣ್ಣವನ್ನು ಲೇಪನ ಮಾಡಬೇಕು, ಯಾರು ಹೇಳಿಕೊಡದಿದ್ದರೂ ಇವರ ಕಲ್ಪನೆಯ ಮೂಲಕ ಚಿತ್ರಕ್ಕೆ ಬಣ್ಣ ತುಂಬಿ ಸುಂದರವಾದ ಕಲಾಕೃತಿ ನಿರ್ಮಿಸುತ್ತವೆ. ನಿಸರ್ಗ ಚಿತ್ರಣ, ಮನೆ ಚಿತ್ರಣ, ಮನುಷ್ಯ, ಪ್ರಾಣಿ, ವಸ್ತು ಯಾವುದೇ ಚಿತ್ರವಾಗಿರಬಹುದು ಆ ಚಿತ್ರಕ್ಕೆ ಅನುಗುಣವಾಗಿ ಮಕ್ಕಳು ಬಣ್ಣಗಳನ್ನು ತುಂಬುತ್ತಾರೆ. ಇವರ ಚಿತ್ರಗಳಲ್ಲಿ ರೇಖೆಯು ತುಂಬಾ ಪ್ರಧಾನವಾಗಿ ಬಳಕೆಯಾಗಿ ಚಿತ್ರಕ್ಕೆ ಹೊಸ ರೂಪವನ್ನು ಕೊಡುತ್ತಾ ನೆರಳು-ಬೆಳಕುಗಳ ಸಂಯೋಜನೆ ಬಣ್ಣಗಳ ಹೊಂದಾಣಿಕೆ ಎಲ್ಲವನ್ನು ಮಕ್ಕಳು ತಮ್ಮ ಕಲ್ಪನೆಯ ಮೂಲಕ ನಿಜವಾದ ಕಲಾಕೃತಿ ನಿರ್ಮಿಸುತ್ತಾರೆ.

ಶಿಕ್ಷಣ ಮತ್ತು ಚಿತ್ರಕಲೆ :

"ನಗರಗಳಲ್ಲಿ ಕೆಲವೊಂದು ಸಾರ್ವಜನಿಕ ಸಂಸ್ಥೆಗಳು ಮಕ್ಕಳ ಚಿತ್ರಕಲಾ ಸ್ಪರ್ಧೆ ಏರ್ಪಡಿಸುವುದನ್ನು ನೀವು ನೋಡಿರಬಹುದು. ನಿಮ್ಮ ಮಕ್ಕಳೂ ಅಂತಹ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಿರಬಹುದು. ಸ್ಪರ್ಧೆ ಎಂದರೂ ಆ ವಾತಾವರಣವನ್ನು ಗಮನಿಸಿದ್ದೀರಾ? ಎಂತಹ ಸಂಭ್ರಮದ ಹಬ್ಬದ ವಾತಾವರಣ ಮಕ್ಕಳ ಕಲ್ಪನೆಗೆ ರೆಕ್ಕೆ ಮೂಡಿಸಿ ಕಿನ್ನರ ಲೋಕದಲ್ಲಿ ವಿಹರಿಸಲು ಬಿಡುವಂತಹದೊಂದು

೩. ಮಂಜುನಾಥ ಕೆ. ಮಾನೆ, ಚಿತ್ರಕಲಾ ಶಿಕ್ಷಣ ಪುಟ-೧೧

ಅದ್ಭುತ ವಾತಾವರಣ. ಅದು ದೊಡ್ಡವರಿಗೆ ವಿಚಿತ್ರ ಎನಿಸಿದರೂ ಆ ಮಕ್ಕಳ ಮುಖ ನೋಡಿ, ನಗೆ ನೋಡಿ, ಸಂತೃಪ್ತಿ ನೋಡಿ ಅವುಗಳಿಗೆ ಏನೋ ಒಂದು ಸಾಧನೆ ಮಾಡಿದ ರೀತಿ ತೃಪ್ತಿ ಹೊಂದುತ್ತವೆ".[೪] ಮಕ್ಕಳು ಸ್ಪರ್ಧೆಗಳಲ್ಲಿ ಭಾಗವಹಿಸುವುದೆಂದರೆ ತುಂಬಾ ಆನಂದ. ಎಂತಹದೇ ವಿಷಯ ಕೊಟ್ಟರು ಕೂಡ ಎಲ್ಲೂ ಗೊಂದಲದಲ್ಲಿ ಸಿಲುಕದೆ ತಮ್ಮದೇ ಕಲ್ಪನೆಯ ಚಿತ್ರವನ್ನು ಕಣ್ಣು ಮುಂದೆ ದೃಶ್ಯಗಳ ಮುಖಾಂತರ ತಂದು ಸುಂದರವಾದ ಚಿತ್ರವನ್ನು ರೂಪಿಸುತ್ತವೆ. ಮಕ್ಕಳಲ್ಲಿ ಮಾನಸಿಕ ಬೆಳವಣಿಗೆ ಹಾಗೂ ವಯೋಮಾನಕ್ಕೆ ತಕ್ಕಂತೆ ಮಕ್ಕಳು ಚಿತ್ರಗಳನ್ನು ಪ್ರಸ್ತುತ ಪಡಿಸುತ್ತವೆ. ಕಲೆಯು ಶಿಕ್ಷಣದ ಒಂದು ಭಾಗವಾಗಿ ಇನ್ನು ಹೆಚ್ಚು ಮಕ್ಕಳಿಗೆ ಅವಕಾಶ ಒದಗಿಸಬೇಕು.

ಕಲಾ ಶಿಕ್ಷಣದ ಕುರಿತು ವಿದ್ವಾಂಸರ ಅಭಿಪ್ರಾಯ :

"ಕಲಾಶಿಕ್ಷಣದಲ್ಲಿ ಮಕ್ಕಳು ಪ್ರವೇಶಿಸುವಾಗ ನಮ್ಮ ಗುರಿ ಅವರೆಲ್ಲರನ್ನು ಕಲಾವಿದರನ್ನಾಗಿ ಮಾಡಬೇಕೆನ್ನುವುದಕ್ಕಿಂತಲೂ ಮುಖ್ಯವಾಗಿ ಅವರಲ್ಲಿ ಒಂದು ದಿನ ಭಾರತದ ನಾಗರಿಕರಾಗಿ ಬದುಕಬೇಕೆಂದಿರುವಾಗ ಅವರ ಸಿದ್ಧತೆಗಳಲ್ಲಿ ಅನೇಕ ಅವಶ್ಯಕತೆಗಳು ಇರುವಂತೆ ಕಲಾಶಿಕ್ಷಣದ ಅವಶ್ಯಕತೆಯೂ ಇದೆ ಎಂಬುದು ಗಮನಿಸಬೇಕಾದ ಅಂಶ.

ರೂಸೋ, ಜಾನ್ ಡ್ಯೂಯಿ, ಪ್ರೊನಿಜಕ್, ಎಂಡ್ರೊ, ಋತ್‌ಗ್ರಿಸ್ಟ್, ಪಾಲ್ ಟೊರೆನ್ಸ್, ಪ್ರೊಬೆಲ್, ಡಾ. ಮಾರಿಯಾ ಮಾಂಟೋಸರಿ, ಹರ್ಬರ್ಟರೀಡ್, ಡಿಕ್‌ಫೀಲ್ಡ್‌ರಂತಹ ಅನೇಕ ಪಾಶ್ಚಿಮಾತ್ಯ ವಿದ್ವಾಂಸರು ಶಿಕ್ಷಣದಲ್ಲಿ ಚಿತ್ರಕಲೆಯ ಮಹತ್ವದ ಕುರಿತು ಚಿಂತನೆ ಮಾಡಿದ್ದಾರೆ. ನಮ್ಮ ದೇಶದ **ಡಾ. ಆನಂದ ಕುಮಾರಸ್ವಾಮಿ, ರವೀಂದ್ರನಾಥ ಟ್ಯಾಗೋರ, ಅರವಿಂದರು, ಗಾಂಧೀಜಿ** ಮುಂತಾದವರು ಸಹ ಚಿತ್ರಕಲೆಯ ಅಧ್ಯಯನ ತುಂಬಾ ಮಹತ್ವದೆಂದು ಅದಕ್ಕೆ ಶಿಕ್ಷಣದಲ್ಲಿ ವಿಶೇಷ ಸ್ಥಾನ ಕಲ್ಪಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಮ್ಮ ದೇಶದಲ್ಲಿ ಬಂದ ಅನೇಕ ಶೈಕ್ಷಣಿಕ ಆಯೋಗಗಳು ಸಹ ಚಿತ್ರಕಲೆಯನ್ನು ಶಿಕ್ಷಣದಲ್ಲಿ ಅಳವಡಿಸುವ ಕುರಿತು ಶಿಫಾರಸುಗಳನ್ನು ಮಾಡಿವೆ. ೧೯೦೨ರ ಪ್ರಾಥಮಿಕ ಶಿಕ್ಷಣ ಆಯೋಗ, **ಲಾರ್ಡ್ ಕರ್ಜನ್**‌ನು ಶಿಫಾರಸು, ೧೯೧೩ರ ಶಿಕ್ಷಣ ನೀತಿ, ೧೯೪೪ರ ಸಾರ್ಜಟ ಆಯೋಗ, ೧೯೫೨ರ **ಡಾ. ಲಕ್ಷ್ಮಣ ಕುಮಾರ್** ಮೊದಲಿಯಾರ ವರದಿ, ೧೯೬೪ರ ಕೊಠಾರಿ ಆಯೋಗಗಳು ಚಿತ್ರಕಲೆ ಪಠ್ಯ ವಸ್ತುವಿನಲ್ಲಿ ಬರುವುದರ ಕುರಿತು ಸಾಕಷ್ಟು ಶಿಫಾರಸುಗಳನ್ನು ಮಾಡಿದರೂ ಸಹ ಪ್ರಾಥಮಿಕ, ಮಾಧ್ಯಮಿಕ ಹಂತದಲ್ಲಿ ಈ ವಿಷಯಕ್ಕೆ ಸಿಗಬೇಕಾದ ಮಹತ್ವ ಸಿಗದೇ ಇರುವುದು ತುಂಬಾ ಶೋಚನೀಯ ಸಂಗತಿ ಎಂದೇ ಹೇಳಬೇಕಾಗುತ್ತದೆ".[೫] ಎಲ್ಲಾ ಮಾಧ್ಯಮಕ್ಕೆ ಸಿಕ್ಕ ಮಾನ್ಯತೆ ಚಿತ್ರಕಲೆಗೂ

೪. ಪಿ.ಆರ್. ತಿಪ್ಪೇಸ್ವಾಮಿ, ಚಿತ್ರಕಲಾ ಪ್ರಪಂಚ, ಪುಟ-೫೭೨

೫. ಡಾ. ಎಸ್.ಸಿ. ಪಾಟೀಲ, ವರ್ಣ ಸಂಚಯ, ಪುಟ-೩೮

ಸಿಗಬೇಕು. ಶಿಕ್ಷಣ ಸಂಸ್ಥೆಗಳು ಕಲೆಯನ್ನು ಬೆಳೆಸುವುದು ಕರ್ತವ್ಯವಾಗಿದೆ. ಮಗು ತನ್ನದೇ ಆದ ಕಲ್ಪನಾ ಲೋಕದಲ್ಲಿ ವಿಹರಿಸುತ್ತದೆ. ದೊಡ್ಡವರಿಗಿಂತಲೂ ಅದರ ಕಲ್ಪನೆಗಳು ಭಿನ್ನವಾಗಿರುತ್ತವೆ. ಮಗುವು ಕಲೆಯ ಮೂಲಕ ಅಭಿವ್ಯಕ್ತಿಸುವಾಗ ತಾನು ಕಂಡಂತೆ ವಸ್ತುಗಳನ್ನು ರೇಖಿಸದೆ ಅಥವಾ ವರ್ಣಗಳಿಂದ ರಚಿಸದೆ ತಾನು ಭಾವಿಸಿದಂತೆ ರಚಿಸುತ್ತದೆ. ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯ ಎಷ್ಟಿರುತ್ತದೆ ಎಂದರೆ ಹಾಳೆಗಳ ಮೇಲೆ ಚಿತ್ರ ಬಿಡಿಸಬೇಕಾದರೆ ಮಕ್ಕಳು ನೇರವಾಗಿ ಬಣ್ಣ ಹಚ್ಚುವುದಿಲ್ಲ. ಮೊದಲು ರೇಖಾಚಿತ್ರ ತೆಗೆದು ನಂತರ ಆ ಚಿತ್ರಕ್ಕೆ ಅನುಗುಣವಾಗಿ ಬಣ್ಣವನ್ನು ಲೇಪನ ಮಾಡುತ್ತವೆ. ಚಿಕ್ಕ ವಯಸ್ಸಿನಲ್ಲಿ ಎಲ್ಲವನ್ನು ತಿಳಿದುಕೊಂಡಿರುತ್ತವೆ.

ಮಕ್ಕಳನ್ನು ಪ್ರೋತ್ಸಾಹಿಸಿ ಅವರಲ್ಲಿ ಇರುವಂತಹ ಕಲೆಯನ್ನು ಗುರುತಿಸಿ ಅಭಿನಂದಿಸಬೇಕು. ಇಂದಿನ ಶಿಕ್ಷಣ ಯುಗದಲ್ಲಿ ಮಕ್ಕಳು ಓದುವುದು ಬಿಟ್ಟರೆ ಕಂಪ್ಯೂಟರ್ ಕಂಡರೆ ಮಕ್ಕಳಿಗೆ ಖುಷಿ. ಅದರಲ್ಲಿ ಆಟವಾಡುವುದನ್ನು ಹೊರತುಪಡಿಸಿದರೆ ಇನ್ನೊಂದು ಇಷ್ಟವಾಗುವಂತಹ ಮಾಧ್ಯಮ "ಚಿತ್ರಕಲೆ" ಎನ್ನಬಹುದು. ಬಹಳ ಮಕ್ಕಳಿಗೆ ಖುಷಿ ಕೊಡುವ ವಿಷಯ ಎಲ್ಲ ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆ ಮಕ್ಕಳಲ್ಲಿ ತುಡಿಯುತ್ತಿರುತ್ತದೆ. ಶಾಲೆಗಳಲ್ಲಿ ನಡೆಸುವ ಚಿತ್ರಕಲಾ ಸ್ಪರ್ಧೆಗಳಾಗಿರಬಹುದು, ಸಂಘ-ಸಂಸ್ಥೆಗಳಲ್ಲಿ, ಸಾಂಸ್ಕೃತಿಕ ಸ್ಪರ್ಧೆಗಳು ನಡೆಸಬೇಕು. ಇದರಿಂದ ಮಕ್ಕಳಿಗೆ ಹೊಸ ಚೈತನ್ಯ ಹುಟ್ಟುತ್ತದೆ. ಶಿಕ್ಷಣ ಸಂಸ್ಥೆಗಳು ಚಿತ್ರಕಲೆಯನ್ನು ಕಡೆಗಣಿಸಬಾರದು. ಇಂತಹ ಮಕ್ಕಳ ಕಲೆಯು ಪ್ರೋತ್ಸಾಹಿಸಿ ಕಲೆಯನ್ನು ಉಳಿಸಿ ಬೆಳಿಸಬೇಕು.

"ಮಕ್ಕಳ ಚಿತ್ರಕಲೆಯ ಮುಖ್ಯ ಲಕ್ಷಣಗಳು ಚಿತ್ರಗಳಲ್ಲಿ ಅಂತಃಸ್ಫುರಣೆಯಿಂದ ಪ್ರಯತ್ನ ಪೂರ್ವಕವಾಗಿ, ನೇರವಾಗಿ ವಿಷಯಕ್ಕೆ ಹೋಗುವ ಗುಣಗಳಿರುತ್ತವೆ. ಅವರ ಕೃತಿಗಳಲ್ಲಿ ಕಲಾತಂತ್ರವನ್ನು ಪರಿಶೀಲಿಸಿದರೆ ಸುಲಭವಾದ ಮತ್ತು ಸರಳವಾದ ರೇಖೆಗಳು, ಆನಂದದ ಶೋಭಾಯಮಾನ ವರ್ಣಗಳ ಪ್ರಯೋಗ; ಅವುಗಳನ್ನು ನಿರೂಪಿಸುವುದರಲ್ಲಿ ಕಾವ್ಯ ಸೌಂದರ್ಯವು ಕಂಡುಬರುತ್ತದೆ. ಮಗುವು ರಚಿಸುವ ಕೃತಿಯು ಪ್ರಕೃತಿಯ ಪ್ರತಿಬಿಂಬವಲ್ಲ. ಅದು ಕಲ್ಪನೆಗೆ ಕೊಟ್ಟ ರೂಪ. ಶಿಶುಚಿತ್ರಗಳಲ್ಲಿ ಕಲ್ಪನೆಯೇ ಪ್ರಧಾನವಾದುದು.

ಮಕ್ಕಳ ಚಿತ್ರಗಳಲ್ಲಿ ಏನೇನನ್ನು ಕಾಣಬಹುದು. ಚಿತ್ರ-ವಿಚಿತ್ರ ಕಲ್ಪನೆಗಳು, ಊಹೆಗಳು, ವಿಚಿತ್ರ ಆಕಾರ ಹಾಗೂ ವರ್ಣಗಳಲ್ಲಿ ಸಂಕೇತಗಳಾಗಿ ಗೋಚರಿಸುತ್ತವೆ. ಉದ್ಯಾನದಲ್ಲಿರುವ ಹೂಗಳಂತೆ ಅವು ಮೋಹಕವಾಗಿರುತ್ತವೆ. ಹಿರಿಯ ಕಲಾವಿದ ಭಗವಂತನು ಸೃಷ್ಟಿಸಿದ ಈ ವಿಶಾಲ ಪ್ರಪಂಚದಲ್ಲಿ ಮಕ್ಕಳು ಚಿತ್ರಗಳಿಂದ ಕಿರಿಯ ಪ್ರಪಂಚವನ್ನೇ ನಿರ್ಮಿಸುತ್ತಾರೆ. ಚಿತ್ರಗಳನ್ನು ವೇಗವಾಗಿ ರಚಿಸುತ್ತಾರೆ. ನೋಡಿದರೆ ಆಶ್ಚರ್ಯವಾಗುತ್ತದೆ. ಚಿತ್ರಿಸುವಾಗ ಬಾಹ್ಯ ಪ್ರಪಂಚವನ್ನೇ ಮರೆಯುತ್ತಾರೆ.

ಮಗು ಏಕೆ ಚಿತ್ರಿಸುತ್ತದೆ. ಮಗುವಿನದು ಕುತೂಹಲ ಸ್ವಭಾವ. ಎಲ್ಲದರಲ್ಲೂ ಆಸಕ್ತಿ. ಎಲ್ಲವನ್ನೂ ಅರಿಯುವ ಆತುರ. ಪರಿಶೀಲಿಸುವುದು, ಕಲ್ಪನೆ ಮಾಡುವುದು ಮತ್ತು ಗುರುತುಗಳಿಂದ ವ್ಯಕ್ತಗೊಳಿಸುವುದು ಮಗುವಿನ ಸಹಜ ಸ್ವಭಾವ".[೬] ಮನಸ್ಸಿನ ಭಾವನೆ ಮತ್ತು ವಿಚಾರ ಸಂಕೀರ್ಣ ಇದರ ಮೂಲಕ ಮಕ್ಕಳು ತಮ್ಮದೇ ಶೈಲಿಯಲ್ಲಿ ಚಿತ್ರ ರಚನೆ ಮಾಡುತ್ತವೆ.

"ಮಕ್ಕಳ ಚಿತ್ರಕಲೆಯ ಬಗ್ಗೆ ಅನೇಕ ಹಿರಿಯ ಕಲಾವಿದರಲ್ಲಿ ಸ್ಫೂರ್ತಿಯನ್ನು ಮೂಡಿಸಿರುತ್ತದೆ. ಪಾಬ್ಲೋಪಿಕಾಸೋ ಮಕ್ಕಳ ಕಲೆಯಿಂದ ಪ್ರಭಾವಿತನಾಗಿದ್ದಾನೆ. ಮಕ್ಕಳಿಗೆ ಸಾಂಪ್ರದಾಯಿಕವಾಗಿ ಕಲೆಯನ್ನು ಬೋಧಿಸಬಾರದು. ನಾವು ಅವರಿಗೆ ಕಲಾತ್ಮಕ ಪರಿಸರವನ್ನು ಕಲ್ಪಿಸಿಕೊಡಬೇಕು ಮತ್ತು ಅವರ ಅಂತರಂಗದ ಸೃಜನಾತ್ಮಕ ಕಲ್ಪನೆಗೆ ಅವಕಾಶ ಮಾಡಿಕೊಡಬೇಕು. ಸೃಜನಾತ್ಮಕ ಶಕ್ತಿಯ ಪ್ರಕಾಶನಕ್ಕೆ ಅವಕಾಶ ಕಲ್ಪಿಸಿಕೊಡುವುದರಿಂದ ಮಕ್ಕಳ ಮನಸ್ಸು ಅಭಿವೃದ್ಧಿಗೊಳ್ಳುತ್ತದೆ. ಮತ್ತು ಜೀವನಕ್ಕೆ ಹೊಂದಿಕೊಳ್ಳಲು ಸಹಾಯಕವಾಗುತ್ತದೆ. ಅಲ್ಲದೆ ಮಕ್ಕಳ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಅವರು ಸಮತೋಲನ ಜೀವನವನ್ನು ಸಾಗಿಸಲು ಸಾಧ್ಯವಾಗುತ್ತದೆ".[೭]

ಮೂಲ ಶಿಕ್ಷಣ :

"ಮಕ್ಕಳಿಗೆ ಚಿತ್ರಕಲೆ' ಎಂಬ ಕಲ್ಪನೆಯೇ ಇನ್ನೂ ಶೈಶಾವಸ್ಥೆಯಲ್ಲಿದೆ. ಅವುಗಳಿಗೆ ಎಂತಹ ತರಬೇತಿ ಕೊಡಬೇಕು? ವಾರದಲ್ಲಿ ಎಷ್ಟು ಪೀರಿಯಡ್‌ಗಳನ್ನು ಇರಿಸಬೇಕು? ಯಾವ ಯಾವ ವಿಷಯಗಳಲ್ಲಿ ತಿಳುವಳಿಕೆ ಮೂಡಿಸಬೇಕು? ಎಂಬುದರ ಬಗ್ಗೆಯೇ ಇನ್ನೂ ಸರಿಯಾದ ಒಮ್ಮತಕ್ಕೆ ಶಿಕ್ಷಣ ತಜ್ಞರು ಬಂದಂತಿಲ್ಲ. ಕ್ರೆಯಾನ್ಸ್ ಸಹ ಸಿಕ್ಕದ ಹಳ್ಳಿಯ ಶಾಲೆಯಲ್ಲಿ ಚಿತ್ರಕಲೆಯನ್ನು ಒತ್ತಾಯದಿಂದ ತರಲು ಸಾಧ್ಯವಾಗದು, ಆದರೂ ಸಹ ಮೂಲ ಶಿಕ್ಷಣದಲ್ಲಿ ಕಲೆ ಕೈಕಸುಬಾದರೂ ಇರಬೇಕೆಂಬುದು ನಿರ್ವಿವಾದ.

ಜೇಮ್ಸ್ ಶೂಲಿ ಎಂಬಾತ ೧೮೯೫ರಲ್ಲಿ ಮೊದಲಿಗೆ ಮಕ್ಕಳಲ್ಲಿ ಇರುವ ಪ್ರತಿಭೆಯನ್ನು ಗುರುತಿಸಿದ ನಂತರ **ಮಂಟೋಸಾರಿಯಿಂದ ಹರ್‌ಬರ್ಟ್‌ರೀಡ್, ಮಹಾತ್ಮ ಗಾಂಧಿ, ಬಿ.ಪಿ. ಬಾಯಿರಿಯವರಿಗೆ** ಇದುವರೆಗೂ ಸಾಕಷ್ಟು ಜನ ತಮ್ಮ ಅಭಿಪ್ರಾಯಗಳನು ಕೊಟ್ಟಿದ್ದಾರೆ.

ಮಕ್ಕಳು ಅವರದೇ ಆದ ರೂಪವನ್ನು ಕಲ್ಪಿಸಿರುತ್ತಾರೆ. ಇಲ್ಲಿ ನೈಜಕ್ಕಿಂತ ಸಂಕೇತಗಳೇ ಪ್ರಧಾನ. ನಿಯಮಗಳೂ ಸಹ ಅವರದೇ ಆಗಿರುತ್ತದೆ. ಪರಸ್ಪರ ಸಂಬಂಧವಿರುವ ಹಲವಾರು ವಿಷಯಗಳನ್ನು ಒಳಗೊಂಡ ವಿನ್ಯಾಸಗಳ ಜೋಡಣೆಯಾಗಿರುತ್ತದೆ.

---

೬. ಬಿ.ಪಿ. ಬಾಯಿರಿ, ಚಿಕ್ಕಮಕ್ಕಳ ಚಿತ್ರಕಲೆ, ಪುಟ–೬–೭
೭. ಎನ್. ವಿಶ್ವರೂಪಾಚಾರ್, ಕಲಾ ಮನೋ ವಿಜ್ಞಾನ, ಪುಟ–೧೩

ನಾಳಿನ ಪ್ರಜೆಗಳಾದ ಶಾಲಾ ಮಕ್ಕಳು ವಸ್ತುವಿನಲ್ಲಿಯ ಸೌಂದರ್ಯವನ್ನು ಗುರುತಿಸಿ ವೈಯಕ್ತಿಕ ಅಭಿರುಚಿಗೆ ತಕ್ಕಂತೆ ಕಲ್ಪನೆಗಳೊಂದಿಗೆ ಭಾವನೆಗಳೊಂದಿಗೆ ಆನಂದಿಸಲು ಕಲಿಯುತ್ತಾರೆ. ಸೌಂದರ್ಯ ಪ್ರಜ್ಞೆಯನ್ನು ಬೆಳೆಸಿ, ಉತ್ಪಾದಿಸುವುದರಿಂದ ಸಮತೂಕದ ವ್ಯಕ್ತಿತ್ವವನ್ನು ಮುಂದೆ ಹೊಂದುತ್ತಾರೆ".[೮] ಜಗತ್ತಿನ ಇತರೆ ಎಲ್ಲಾ ಸಂಪತ್ತುಗಳಿಗಿಂತ ಮಕ್ಕಳೇ ಶ್ರೇಷ್ಠವಾದ ಸಂಪತ್ತು. ಅವರಿಗೆ ಸರಿಯಾದ ಶಿಕ್ಷಣ ನೀಡಿ ಪ್ರೋತ್ಸಾಹಿಸಿದ್ದೇ ಆದರೆ ಜಗತ್ತು ಶಾಂತಿ, ನೆಮ್ಮದಿ, ಸಮೃದ್ಧಿ, ಅಭಿವೃದ್ಧಿ ಸಾಧಿಸುವುದರಲ್ಲಿ ಯಾವುದೇ ಸಂದೇಹವಿಲ್ಲ. ಮಕ್ಕಳಿಗೆ ಶಿಕ್ಷಣ ಕೊಡಿಸುವ ಕೆಲಸ ಸರ್ಕಾರದ ಜವಾಬ್ದಾರಿಗಿಂತ ಪೋಷಕರ ಪಾತ್ರ ಬಹಳ ಮುಖ್ಯವಾಗಿದೆ. ಹಾಗೆಯೇ ಮಗುವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವುದು ಮತ್ತು ಅವರಿಗೆ ಇಷ್ಟವಾದ ಆಸೆಗಳನ್ನು ಪೂರೈಸುವುದು ಮುಖ್ಯವಾಗಿದೆ.

ಶಿಕ್ಷಣದಲ್ಲಿ ಮಕ್ಕಳಿಗೆ ಹೆಚ್ಚು ಕ್ರಿಯಾಶೀಲರಾಗಿ ಮತ್ತು ಉತ್ಸಾಹವಿರುವ ಮಾಧ್ಯಮ ಚಿತ್ರಕಲೆ ಮಕ್ಕಳಲ್ಲಿ ಹಲವಾರು ಕಲೆಗಳು ಅಡಗಿರುತ್ತವೆ. ಅವುಗಳನ್ನು ಗುರುತಿಸುವ ಜವಾಬ್ದಾರಿ ತಂದೆ-ತಾಯಿಗಳಿಗೆ ಮಾತ್ರ ಸಾಧ್ಯ. ಇನ್ನೂ ಮನೆ ಬಿಟ್ಟರೇ ಹೆಚ್ಚು ಸಮಯ ಶಾಲೆಯಲ್ಲಿ ಕಳೆಯುತ್ತವೆ. ಬರಿ ಓದುವುದು ಒಂದೇ ಜೀವನದ ಗುರಿ ಎಂದು ಮಕ್ಕಳಲ್ಲಿ ಹೇಳಿಕೊಡುವುದು ತುಂಬಾ ತಪ್ಪು ಓದಿನ ಜೊತೆಗೆ ಮಕ್ಕಳಿಗೆ ಸೃಜನಶೀಲ ವ್ಯಕ್ತಿತ್ವಗಳಿಗಾಗಿ ರೂಪಿಸಬೇಕು. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳಿಗೆ ಮಾನಸಿಕ ಒತ್ತಡ ತುಂಬಾ ಹೆಚ್ಚಾಗಿದೆ. ಮಗು ರ್‍ಯಾಂಕ್ ಬರಬೇಕು, ಓದಿನಲ್ಲಿ ಗಮನಕೊಡಬೇಕು ಇಂತಹ ಕಟ್ಟಲೆಗಳು ಮಕ್ಕಳ ಮೇಲೆ ಪ್ರಯೋಗ ಮಾಡಲಾಗುತ್ತದೆ. ಮಕ್ಕಳಿಗೆ ಇಷ್ಟವಾಗುವಂತಹ ಶಿಕ್ಷಣ ಒದಗಿಸುವುದು ತುಂಬಾ ಉಪಯುಕ್ತ.

ಶಾಲೆಗಳಲ್ಲಿ ಕಲಿಸಲ್ಪಡುವ ಚಿತ್ರಕಲೆ ಗುರಿ ಹಾಗೂ ವಸ್ತುಸ್ಥಿತಿಗಳಾದರೂ ಸೌಂದರ್ಯಾನ್ವೇಷಣಾ ಶಕ್ತಿಯ ಬೆಳವಣಿಗೆಗಾಗಿಯೇ ಇವೆ.

ಸೌಂದರ್ಯಾನ್ವೇಷಕ ಬುದ್ಧಿಯಾಗಲೀ, ರಚನಾತ್ಮಕ ಬುದ್ಧಿಯಾಗಲೀ ಚಿತ್ರಕಲೆಯನ್ನು ಕಲಿತ ಮೇಲೆಯೇ ಬರುತ್ತವೆಂದಲ್ಲ, ಈ ಎಲ್ಲ ಶಕ್ತಿಗಳೂ ಸ್ವಭಾವತಃ ಹುಟ್ಟಿನಿಂದಲೇ ಬಂದವುಗಳಾಗಿವೆ. ಮಗುವಿನ ಅಪ್ರಬುದ್ಧ ಮನಸ್ಸಿನಲ್ಲಿ ಸುಪ್ತವಾಗಿ ಹುದುಗಿಕೊಂಡಿರುವ ಈ ಎಲ್ಲ ಸುಪ್ತ ಚೇತನಗಳಿಗೂ ಚೇತರಿಸಿಕೊಂಡು ಕ್ರಿಯಾಶೀಲರಾಗಲು ಚಿತ್ರಕಲೆಯು ಪ್ರಚೋದನೆಯನು ಮಾತ್ರ ನೀಡುತ್ತದೆ. ಸುಪ್ತ ಭಾವನೆಗಳನ್ನು ಸುಲಭವಾಗಿ ಪ್ರಕಟಿಸಲು ಚಿತ್ರಕಲೆಯು ಒಂದು 'ಲಘುಲಿಪಿ'ಯಾಗಿದೆ".[೯] ತನ್ನಲ್ಲಿರುವ ಕಲೆಯನ್ನು ಮಗು ಡ್ರಾಯಿಂಗ್ ಹಾಳೆಯ ಮೇಲೆ ಅಭಿವ್ಯಕ್ತಿಸುತ್ತದೆ. ತನ್ನಲ್ಲಿರುವ ಕಲೆಯನ್ನು ಮಗು ಡ್ರಾಯಿಂಗ್ ಹಾಳೆಯ ಮೇಲೆ ಅಭಿವ್ಯಕ್ತಿಸುತ್ತದೆ.

೮. ಪಿ.ಆರ್. ತಿಪ್ಪೇಸ್ವಾಮಿ, ಚಿತ್ರಕಲಾ ಪ್ರಪಂಚ, ಪುಟ-೫೮೩
೯. ವಿ.ಟಿ. ಕಾಳೆ, ಚಿತ್ರಕಲಾ ಪರಿಚಯ, ಪುಟ-೯

ಬಣ್ಣದ ವಸ್ತುಗಳು :

ಬಣ್ಣದ ವಸ್ತುಗಳನ್ನು ಮಕ್ಕಳಿಗೆ ತೋರಿಸಿ ಬಣ್ಣವನ್ನು ಹೆಸರಿಸುವುದರ ಮೂಲಕ ಆಯಾ ಬಣ್ಣದ ಅರಿವನ್ನು ಮಕ್ಕಳಲ್ಲಿ ಉಂಟುಮಾಡಬಹುದು. ಒಂದೇ ಬಣ್ಣದ ಬೇರೆ ಬೇರೆ ವಸ್ತುಗಳನ್ನು ಮಕ್ಕಳಿಗೆ ತೋರಿಸಿ ಆ ಬಣ್ಣದ ನೆನಪು ಮಕ್ಕಳಲ್ಲಿ ಶಾಶ್ವತವಾಗಿ ಉಳಿಯುವಂತೆ ಮಾಡಲು ಶಿಕ್ಷಕರು ಯತ್ನಿಸಬೇಕು. ನಂತರದ ಹಂತದಲ್ಲಿ ವಿವಿಧ ಬಣ್ಣಗಳ ಪಗಡೆ ಕಾಯಿಗಳನ್ನು ಅಥವಾ ಗೋಲಿಗಳನ್ನು ಮೇಜಿನ ಮೇಲೆ ಹರಡಿ ಅವುಗಳನ್ನು ಬಣ್ಣದ ಆಧಾರದ ಮೇಲೆ ವಿಂಗಡಿಸುವ ಕಾರ್ಯವನ್ನು ಮಕ್ಕಳಿಗೆ ಒಪ್ಪಿಸಬೇಕು. ಮತ್ತು ನಿರ್ದಿಷ್ಟ ಬಣ್ಣವುಳ್ಳ ಪಗಡೆಕಾಯಿ ಅಥವಾ ಗೋಲಿಯನ್ನು ಆರಿಸಿ ತೆಗೆಯುವ ಕೆಲಸವನ್ನು ಮಕ್ಕಳಿಂದ ಮಾಡಿಸಬೇಕು. ಶಿಕ್ಷಕರು ಡ್ರಾಯಿಂಗ್ ಹಾಳೆಯ ಮೇಲೆ ರೂಪಾಯಿ ಅಗಲದ ವೃತ್ತಗಳನ್ನು ಎಳೆದು ಆ ವೃತ್ತಗಳನ್ನು ನಿರ್ದಿಷ್ಟ ಬಣ್ಣಗಳಿಂದ ತುಂಬುವ ಕೆಲಸವನ್ನು ಮಕ್ಕಳಿಗೆ ಹಚ್ಚಬೇಕು. ಈ ಬಗೆಯ ಅಭ್ಯಾಸ ನಂತರ ಮಕ್ಕಳು ಬಣ್ಣಗಳನ್ನು ಗುರುತಿಸಬಲ್ಲರು.

ಬರವಣಿಗೆ :

ಐದು ವರ್ಷ ತುಂಬಿದ ಮಕ್ಕಳಿಗೆ ಲೇಖನ ಸಾಮಗ್ರಿಗಳನ್ನು ಒದಗಿಸಬಹುದು. ಈ ವಯಸ್ಸಿನ ಮಕ್ಕಳಿಗೆ ಬಳಪ ಹಿಡಿದು ಸ್ಲೇಟಿನ ಮೇಲೆ ಬರೆಯುವುದನ್ನು ಅಭ್ಯಾಸ ಮಾಡಿಸಬಹುದು. ಪ್ರಾಥಮಿಕ ಶಾಲೆಯಲ್ಲಿ ಪ್ರವೇಶಿಸುವ ಮಗುವಿನ ಅಕ್ಷರಭ್ಯಾಸವಾಗಿದ್ದರೆ ಹೊಸ ವಾತಾವರಣಕ್ಕೆ ಮಗು ಬೇಗ ಹೊಂದಿಕೊಳ್ಳುವುದು ಸಹಜ.

ಸೊನ್ನೆ ಸುತ್ತುವುದು, ಗೆರೆ ಎಳೆಯುವುದು, ಅಡ್ಡಾದಿಡ್ಡಿ ಗೀಚುವುದು ಈ ರೀತಿಯಾಗಿ ಪ್ರಾರಂಭವಾಗುವ ಮಗುವಿನ ಬರವಣಿಗೆ ಕ್ರಮೇಣ ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ. ಈ ಹಂತವು ಮುಂದೆ ಕಲೆ ಮೂಡಲು ಪ್ರಾರಂಭ ಹಂತವಾಗಿದೆ. ತಗಡಿನ ತಟ್ಟೆಯಲ್ಲಿ ನುಣುಪಾದ ಮರಳು ಅಥವಾ ರಂಗದಲ್ಲಿ ಹಿಟ್ಟನ್ನು ಹರಡಿ ತೋರುಬೆರಳನಿಂದ ಅಕ್ಷರ ತಿದ್ದುವ ಅಭ್ಯಾಸ ಮಾಡಿಸಿದಲ್ಲಿ ಮಗು ಅಕ್ಷರಗಳನ್ನು ದುಂಡಾಗಿ ಬರೆಯಬಲ್ಲದು.

ರೇಖೆಗಳು :

ಎರಡನೇ ಹಂತದಲ್ಲಿ ಬಣ್ಣದ ಕಡ್ಡಿ ಅಥವಾ ಕುಂಚದ ಸಹಾಯದಿಂದ ರೇಖಾಕೃತಿಗಳಿಗೆ ಬಣ್ಣ ಹಚ್ಚುವುದನ್ನು ಮಕ್ಕಳಿಂದ ಮಾಡಿಸಬಹುದು. ಅಂದವಾಗಿ ಬಣ್ಣ ಹಚ್ಚುವ, ಚಿತ್ರ ಬರೆಯುವ ಮಕ್ಕಳಿಗೆ ಸಣ್ಣಪುಟ್ಟ ಬಹುಮಾನಗಳನ್ನು ಕೊಡುವುದರಿಂದ ಅವರಲ್ಲಿ ಉತ್ಸಾಹ ಹೆಚ್ಚುವುದು. ಈ ವಿಧಾನ ಅನುಸರಿಸುವುದರಿಂದ ಬಹುಮಾನ ಪಡೆಯುವ ಮಕ್ಕಳಲ್ಲೂ

ಸ್ಪರ್ಧಾತ್ಮಕ ಮನೋಭಾವ ಬೆಳೆದುಬರುವ ಸಾಧ್ಯತೆಯುಂಟು".[೧೦] ರೇಖೆಯ ಪ್ರಜ್ಞೆ ಮಕ್ಕಳಲ್ಲಿ ಎಷ್ಟು ಮುಖ್ಯ ಎಂದು ತಿಳಿಯದಿದ್ದರೂ ಕೂಡ ಚಿತ್ರವನ್ನು ರಚಿಸಬಲ್ಲರು. ಕಲೆ ಹುಟ್ಟಬೇಕೆಂದರೆ ಮೊದಲು ರೇಖೆಯೇ ಪ್ರಧಾನ. ಒಬ್ಬ ಕಲಾವಿದ ಚಿತ್ರರಚಿಸಬೇಕಾದರೂ ಇವರ ಚಿತ್ರದಲ್ಲಿ ರೇಖೆಯಿಂದಲೇ ಪ್ರಾರಂಭವಾಗಿ ರೇಖಾ ಚಿತ್ರವಿಲ್ಲದೆ ಕಲೆ ಪೂರ್ಣಗೊಳಿಸಲು ಸಾಧ್ಯವಿಲ್ಲ. ನೇರವಾಗಿ ಕ್ಯಾನ್ವಾಸ್ ಮೇಲೆ ಬಣ್ಣಗಳ ಲೇಪನ ಪ್ರಾರಂಭ ಮಾಡಿದರೂ ಕೂಡ ಕೊನೆಗೆ ಬ್ರಶ್ ಮುಖಾಂತರ ರೇಖೆಗಳು ಎಳೆಯಲೇಬೇಕು. ಒಂದು ಚಿತ್ರಕ್ಕೆ ಇಲ್ಲಿ ರೇಖೆಯು ಜೀವಾಳ. ಆದರೆ ಮಕ್ಕಳಲ್ಲೂ ರೇಖೆಯ ಬಗ್ಗೆ ಅರಿವು ಖಂಡಿತವಾಗಿರುವುದಿಲ್ಲ. ಆದರೆ ಚಿತ್ರ ರಚಿಸಬೇಕಾದ ಮಗು ಮೊದಲು ಪ್ರಾರಂಭಿಸುವುದೇ ರೇಖೆಗಳಿಂದ. ಅದಕ್ಕೆ ರೇಖೆಯ ಬಗ್ಗೆ ಅಷ್ಟೊಂದು ತಿಳಿದುಕೊಳ್ಳದೇಯಿದ್ದರೂ ಕೂಡ ಸರಳವಾಗಿ ಯಾವುದೇ ಹಿಂಜರಿಕೆಯಿಲ್ಲದೇ ಮಗು ರೇಖಾಚಿತ್ರ ರಚಿಸುತ್ತದೆ. ಕೊನೆಗೆ ತಾನೂ ಗೀಚದ ಚಿತ್ರದ ಸ್ವರೂಪವನ್ನು ಕಂಡುಕೊಳ್ಳುತ್ತದೆ.

ಇಂದಿನ ಶಿಕ್ಷಣದಲ್ಲಿ ಹೆಚ್ಚಾಗಿ ಓದು, ಬರಹ ಈ ಎರಡು ಬಿಟ್ಟರೆ ಮಕ್ಕಳಿಗೆ ಬೇರೆ ಶಿಕ್ಷಣ ಗೌಣವಾಗಿದೆ. ಮುಂದಿನ ದಿನಗಳಲ್ಲಿ ಶಿಕ್ಷಣ ಸಂಸ್ಥೆಗಳು ಓದುವುದರ ಜೊತೆಗೆ ಕಲೆಯು ಒಂದು ವಿಷಯವಾಗಿ ಪರಿಗಣಿಸಿ ಮಕ್ಕಳಲ್ಲಿ ಒಳ್ಳೆಯ ವ್ಯಕ್ತಿತ್ವ ರೂಪಿಸುವ ಕರ್ತವ್ಯ ಕೈಗೊಳ್ಳಬೇಕು. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಇವರಿಗೆ ಒಳ್ಳೆಯ ವಿದ್ಯೆ ಜೊತೆ ಕಲಾ ಸಂಸ್ಕೃತಿ ಬಗ್ಗೆ ತಿಳಿಹೇಳಬೇಕು.

ಮಗುವಿಗೆ ಇಷ್ಟವಾದ ಬಣ್ಣಗಳು ಯಾವುವು?

ಶಿಕ್ಷಣದಲ್ಲಿ ಚಿತ್ರಕಲೆ ಮಕ್ಕಳಿಗೆ ಹೊಸ ಚೇತನ ಉಂಟುಮಾಡುವ ಮಾಧ್ಯಮವಾಗಿದೆ. ಇಂತಹ ಕಲೆಗಳನ್ನು ಶಿಕ್ಷಣದೊಳಗೆ ಅಳವಡಿಸುವುದರಿಂದ ಮಕ್ಕಳು ಇನ್ನೂ ಸೃಜನಶೀಲರಾಗಿ ಹೊರಹೊಮ್ಮುತ್ತಾರೆ. ಮಕ್ಕಳಿಗೆ ಬಣ್ಣಗಳ ಕಲ್ಪನೆ, ರೇಖೆಗಳ ಅರಿವು ಮೂಡಿಸುವುದು ಬಹಳ ಮುಖ್ಯ. ಗುಲಾಬಿ, ನೀಲಿ, ಹಳದಿ, ಹಸಿರು ಅಂತ ಮಕ್ಕಳು ತೊದಲ್ನುಡಿಯಲ್ಲಿ ಹೇಳುವುದನ್ನು ಕೇಳೊಕೆ ಚೆಂದ. ಬಣ್ಣಗಳೊಂದಿಗೆ ಆಡುತ್ತ, ಬಣ್ಣಬಣ್ಣದ ಕನಸು ಕಟ್ಟುವ ಬಾಲ್ಯದಲ್ಲಿ ಅವರಿಗೆ ಪೂರಕ ವಾತಾವರಣ ಕಟ್ಟಿಕೊಡುವುದು ಬಹಳ ಮುಖ್ಯ. ಮನೆಯಲ್ಲಿರುವ ಮಕ್ಕಳ ರೂಂ ಕೂಡ ಅವರ ಕಲಿಕೆಗೆ ಪೂರಕವಾಗಿರಬೇಕು. ಮಕ್ಕಳಿಗೆ ಇಷ್ಟವಾದ ಬಣ್ಣ ಬಳಿದು ಅವರಿಗಿಷ್ಟವಾದ ವಸ್ತುಗಳನ್ನು ಹರಡಿಟ್ಟರೆ ಅವರ ರೂಂ ಅವರಿಗೆ ಸ್ವರ್ಗ. ಮಾತ್ರವಲ್ಲ, ಕೆಲ ಬಣ್ಣ ಮಕ್ಕಳ ಮಾನಸಿಕ ಬೆಳವಣಿಗೆ ಮೇಲೂ ಪರಿಣಾಮ ಬೀರಬಲ್ಲದು. ಹಾಗಾದರೆ ಮಕ್ಕಳಿಗೆ ಯಾವ ಬಣ್ಣಗಳು ಇಷ್ಟವಾಗುತ್ತವೆ ಎಂದು ಈ ಕೆಳಗಡೆ ಹೇಳಲಾಗಿದೆ.

೧೦. ಕೆ.ಆರ್. ಮೂರ್ತಿ, ಮಕ್ಕಳ ಮನೋವಿಕಾಸ ಮಾರ್ಗ, ಪುಟ-೩೦-೪೬

* ಪೀಸ್‌ಪುಲ್ ಬಣ್ಣಗಳಿದ್ದರೆ ಮಕ್ಕಳಿಗೂ ಇಷ್ಟ. ಗೋಡೆಗಳ ಮೇಲೆ ಗಿಡ, ಬಳ್ಳಿ, ಕಾರ್ಟೂನ್ ಪ್ರಾಣಿ ಹೀಗೆ ಅವರಿಗಿಷ್ಟವಾಗುವ ಚಿತ್ತಾರಗಳನ್ನು ಪೇಂಟ್ ಮಾಡಿಸಿ.

* ಮಕ್ಕಳ ಬೆಡ್‌ಸಿಟ್‌ನಲ್ಲೂ ಟಾಮ್ ಆಂಡ್ ಜೆರ್ರಿ, ಮಿಸ್ಟರ್‌ಬೀನ್, ಪಾಂಡಾ, ಛೋಟಾಭೀಮನಂತಹ ಚಿತ್ತಾರವಿರಲಿ. ಇದರಿಂದ ಮಕ್ಕಳು ಖುಷಿಯಿಂದಯಿರುತ್ತಾರೆ.

* ಅವರ ರೂಂನ ಗೋಡೆಯ ಬಣ್ಣಕ್ಕೆ ಸರಿಹೊಂದುವ ಅಥವಾ ಪ್ರಕರಣ ವರ್ಣದಿಂದ ಕೂಡಿದ ಬಣ್ಣದ ಚಿಕ್ಕಚಿಕ್ಕ ದಿಂಬುಗಳಿದ್ದರೆ ಚೆನ್ನ.

* ಮಕ್ಕಳ ರೂಂನಲ್ಲಿ ಮಂದ ಬೆಳಕಿಗಿಂತ ಗಾಢ ಬೆಳಕಿರಲಿ. ರೂಂನ ಒಂದು ಮೂಲೆಯಲ್ಲಿ ಚಿಕ್ಕದಾದ ಟೇಬಲ್ ಇರಲಿ, ಅದರ ಮೇಲೆ ಒಂದಷ್ಟು ಬಣ್ಣದ ಪೆನ್ಸಿಲ್/ಸ್ಕೆಚ್‌ಪೆನ್, ವಾಟರ್‌ಪೇಂಟ್, ವಸ್ತು ಇಟ್ಟುಕೊಳ್ಳಲು ಸ್ವಲ್ಪ ಖಾಲಿ ಜಾಗ, ಕಾರ್ಟೂನ್ ಬುಕ್‌ಗಳಿರಲಿ.

* ಸೈಕಾಲಾಜಿಕಲಿ ಮಕ್ಕಳ ಮನಸ್ಸಿನ ಮೇಲೆ ಸಕಾರಾತ್ಮಕ ಪರಿಣಾಮ ಬಿರುತ್ತದೆ ಎಂದು ಸಾಬೀತಾಗಿರುವ ಗುಲಾಬಿ, ಕೇಸರಿ, ನೀಲಿ, ಹಳದಿ, ಹಸಿರು, ಪರ್ಪಲ್ ಬಣ್ಣಗಳನ್ನು ಹೆಚ್ಚು ಬಳಸಿ. ಕಪ್ಪು, ಗಾಢನೀಲಿ, ಕೆಂಪು ಈ ಬಣ್ಣಗಳಿಂದ ಇವುಗಳನ್ನು ದೂರಮಾಡಿ ಬೆಳವಣಿಗೆಯ ಹಂತದಲ್ಲಿ ಮಗುವಿಗೆ ಬೇಕಾದ ಸಾಧ್ಯವಾದಷ್ಟು ಅವರಿಗೆ ಇಷ್ಟವಾದ ಮಾಧ್ಯಮದಲ್ಲಿ ಮುಂದುವರೆಯುವುದಕ್ಕೆ ಅವಕಾಶ ಕಲ್ಪಿಸಿ ಅವರಲ್ಲಿರುವ ಕಲೆಯನ್ನು ಹೊರ ತೆಗೆಯಬೇಕು. ಮಕ್ಕಳನ್ನು ಪೋಷಿಸುವ ಹೊಸ ಆಲೋಚನೆಗಳು ಇವುಗಳಿಗೆ ಶಿಕ್ಷಣ ಜೊತೆಗೆ ಕಲಾ ಸಂಸ್ಕೃತಿಯ ಬಗ್ಗೆ ತಿಳಿಸುವುದು ಪೋಷಕರ ಕರ್ತವ್ಯ ನಿರ್ವಹಿಸಬೇಕು.

"ಚಿತ್ರಕಲೆ ಜೀವನದ ಕೈಗನ್ನಡಿಯಷ್ಟೇ ಅಲ್ಲ, ಅದು ನಮ್ಮ ಬದುಕಿನ ಮುನ್ನೆಡೆಗೂ ಕಾರಣವಾಗಬಲ್ಲದು. ಒಂದು ರೀತಿಯಲ್ಲಿ ಚಿತ್ರಕಲೆ ಜೀವನದ ಪ್ರತಿಬಿಂಬ, ಅಷ್ಟೆ ಅಲ್ಲ ಅದು ಗತಿಬಿಂಬವೂ ಹೌದು. ಧರ್ಮ, ಮತ, ತತ್ವಗಳ ಪ್ರಾಚರಕ್ಕಾಗಿ, ಸಂಸ್ಕೃತಿಯ ಪ್ರಚಾರಕ್ಕಾಗಿ, ಜೀವನದರ್ಶನಕ್ಕಾಗಿ ಶಿಕ್ಷಣದಲ್ಲಿ ವಿಜ್ಞಾನ, ತಂತ್ರಜ್ಞಾನಕ್ಕಿಂತಲೂ ಚಿತ್ರಕಲೆಯ ಪಾತ್ರವು ತುಂಬಾ ಅವಶ್ಯಕವಿದೆ. ಜನಸಾಮಾನ್ಯರಿಗೆ ಸುಲಭವಾಗಿ ಅನುಭವಾಗಬಲ್ಲ ಕಲಾ ಮಾಧ್ಯಮಗಳಲ್ಲಿ ಚಿತ್ರಕಲೆ ಪ್ರಮುಖವಾದದ್ದು. ಇದಕ್ಕೆ ಕಾಲ, ದೇಶ, ಭಾಷೆ, ಪ್ರದೇಶಗಳನ್ನು ಮೀರಿದ ವ್ಯಾಪ್ತಿಯಿದೆ. ಹೀಗಾಗಿ ಚಿತ್ರಕಲೆಯನ್ನು ಅಂತಾರಾಷ್ಟ್ರೀಯ ಭಾಷೆಯೆಂದು ಕರೆಯಲಾಗುತ್ತದೆ. "ಚಿತ್ರಕಲೆಯಿಲ್ಲದ ಶಿಕ್ಷಣ ಕಿಟಕಿಗಳಿಲ್ಲದ ಮನೆಯ ಹಾಗೆ" ಎಂಬ ಮಾತು ಚಿತ್ರಕಲೆ ಹಾಗೂ ಶಿಕ್ಷಣದ ಸಾಮರಸ್ಯದ ಕುರಿತಾಗಿರುವ ಮಾತಾಗಿದೆ. ಬರ್ನಾಡ್ ಶಾ ಹೇಳುವಂತೆ "ನೋಯಿಸದೆ ವಿದ್ಯೆ ನೀಡಬಲ್ಲ ಶಿಕ್ಷಣವೆಂದರೆ ಕಲೆಯು ಮಾತ್ರ" ಎಂಬುದರಲ್ಲಿ ಔಚಿತ್ಯವಿದೆ. ಕಲೆಯು ಮಾನವನನ್ನು

ಅತಿಮಾನವನ್ನಾಗಿ ಮಾಡುವ ಸಾಧ್ಯವಾಗಿದೆ. ಅಷ್ಟೇ ಅಲ್ಲ ಒಂದು ಚಿತ್ರಕ್ಕೆ ಸಾವಿರ ಶಬ್ದಗಳ ಶಕ್ತಿಯಿದೆ. ಹೀಗಾಗಿ ಅದೊಂದು ದೃಶ್ಯಕಾವ್ಯವೆನ್ನಬಹುದು".[೧೧]

ಲಲಿತ ಕಲೆಗಳಲ್ಲಿ ಒಂದಾದ "ಚಿತ್ರಕಲೆ" ಎಲ್ಲಾ ವಯೋಮಾನದವರು ಈ ಕಲೆಗೆ ಶರಣ ಆಗಿದ್ದಾರೆ. ಹೆಸರಿಗೆ ಕಲೆಯಲ್ಲಿ ಜೀವನ ನಡೆಸುವುದಕ್ಕೆ ಆಗಾಲ್ಲ ಎನ್ನುವ ಜನರು ಚಿಕ್ಕ ವಯಸ್ಸಿನಲ್ಲಿ ಸೃಜನಶೀಲರಾಗಿ ಬೆಳೆಯುವುದಕ್ಕೆ ಈ ಚಿತ್ರಕಲೆ ಮುಖ್ಯ ಕಾರಣವಾಗಿದೆ. ಆದರೆ ಇಂತಹ ಕಲೆಯನ್ನು ಇಂದಿನ ಸಮಾಜ, ಶಿಕ್ಷಣ ವ್ಯವಸ್ಥೆ ಕಡೆಗಣಿಸುತ್ತಿರುವುದು ಶೋಚನಿಯ. ಇದೇ ರೀತಿಯಾಗಿ ಮಗುವು ಚಿತ್ರ ರಚಿಸುತ್ತಿದ್ದರೆ ತಡೆಯುವಂತಹ ಪ್ರವೃತ್ತಿ ಪೋಷಕರಲ್ಲೂ ಕಂಡುಬರುತ್ತದೆ. ಕಲೆಯನ್ನು ಕಡೆಗಣಿಸಬೇಡಿ, ಕಲೆಯನ್ನು ಉಳಿಸಿ-ಬೆಳೆಸುವ ಕರ್ತವ್ಯ ನಮ್ಮ ನಿಮ್ಮೆಲ್ಲರ ಹೊಣೆಯಾಗಿದೆ. ಚಿತ್ರಕಲೆ ಸ್ಫೂರ್ತಿದಾಯಕ, ಚೈತನ್ಯ, ಕ್ರಿಯಾಶೀಲತೆ, ಸಂಚಲನ ಸೃಷ್ಟಿಸುವ ಕಲೆಯು ಮಕ್ಕಳ ಆಶಾದಾಯಕವಾದ ಮಾಧ್ಯಮ ಈ ಚಿತ್ರಕಲೆ. ಇಂತಹ ಕಲೆಗಳು ಅಳಿವಿನ ಅಂಚಿನಲ್ಲಿ ಬಂದು ತಲುಪಿವೆ. ಸರಿಯಾದ ಮಾನದಂಡ ಶಿಕ್ಷಣ ಸಂಸ್ಥೆಗಳಲ್ಲಿ ಇಲ್ಲದೇ ಇರುವುದರಿಂದ ಕಲೆಯು ಕುಂಟುತ್ತಾ ಸಾಗಿದೆ. ಈ ಕಲೆಗಳನ್ನು ಉಳಿಸುವುದು ತುಂಬಾ ಅವಶ್ಯಕವಾಗಿದೆ. ಮಕ್ಕಳು ಚಟುವಟಿಕೆಯಿಂದ, ಸಂತೋಷದಿಂದ ಕೂಡಿರಬೇಕೆಂದರೆ "ಚಿತ್ರಕಲೆ" ಶಾಲಾ ಅಭ್ಯಾಸದಲ್ಲಿ ಈ ಕಲೆಯನ್ನು ಒಂದು ವಿಷಯವನ್ನಾಗಿ ಪರಿಗಣಿಸಿ ಚಿತ್ರಕಲೆಗೆ ಉನ್ನತ ಸ್ಥಾನ ಕೊಡಬೇಕು.

ಕ್ರಿಯಾತ್ಮಕವಾಗಿ ಪ್ರಸ್ತುತಪಡಿಸುವ ಮಕ್ಕಳು ಚಿತ್ರವನ್ನು ತುಂಬಾ ವಿಶಿಷ್ಟ ಶೈಲಿಯಲ್ಲಿ ಚಿತ್ರಿಸುತ್ತ ರೇಖೆಯು ಪ್ರಧಾನವಾಗಿ ಚಿತ್ರದಲ್ಲಿ ನೆರಳು-ಬೆಳಕುಗಳ ಸಂಯೋಜನೆ, ಬಣ್ಣಗಳ ಕಲ್ಪನೆ ಪೂರ್ಣ ಚಿತ್ರವಾದ ಮೇಲೆ ಬಣ್ಣಗಳ ಲೇಪನ ಸಹ ತುಂಬಾ ಸೃಜನಶೀಲವಾಗಿ ಚಿತ್ರದಲ್ಲಿ ಬಣ್ಣವನ್ನು ತುಂಬುತ್ತಾ ಚಿತ್ರವನ್ನು ಪೂರ್ಣಗೊಳಿಸುವ ಮಕ್ಕಳು ಸಂತೋಷದಿಂದ ಕಲೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತವೆ. ಯಾವುದೇ ರೀತಿಯ ಗೊಂದಲಕ್ಕೆ ಒಳಗಾಗದೇ ತನಗೆ ಅನಿಸಿದ ಪ್ರಾಣಿ, ಪಕ್ಷಿ, ಗಿಡ, ಮರ, ಮನೆ, ಮನುಷ್ಯ, ನಿಸರ್ಗ ಹಲವಾರು ದೃಶ್ಯವನ್ನು ನೆನಪಿಸಿಕೊಂಡು ಹೊಸ ಬಗೆಯ ಆಯಾಮದಲ್ಲಿ ಚಿತ್ರವನ್ನು ಪೂರ್ಣಗೊಳಿಸುತ್ತಾರೆ. ಮಕ್ಕಳಲ್ಲಿ ಬೇರೆ ಬೇರೆ ಆಲೋಚನೆಗಳು ಚಿತ್ರದ ವಿಷಯ ಕುರಿತು ಮುಂಚಿತವಾಗಿ ತಿಳಿಯದಿದ್ದರೂ ನೇರವಾಗಿ ಪೇಪರ ಮೇಲೆ ಬರೆಯುತ್ತಾ ಹೋಗುತ್ತಾರೆ. ಅದು ಕೊನೆಗೆ ಚಿತ್ರವಾಗಿ ನಿರ್ಮಾಣವಾಗುತ್ತದೆ. ಈ ರೀತಿಯಾಗಿ ಮಕ್ಕಳು ಕಲೆಯನ್ನು ಪ್ರಸ್ತುತಪಡಿಸುತ್ತವೆ.

---

೧೧. ಡಾ. ಎಸ್.ಸಿ. ಪಾಟೀಲ (ಸಂ), ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು(ಲೇ), ಪುಟ-೧೧೬


ಚಿತ್ರಕಲಾ ಶಿಕ್ಷಣ ಇನ್ನೂ ದೊಡ್ಡಮಟ್ಟದಲ್ಲಿ ಬೆಳವಣಿಗೆ ಹೊಂದಿ ಕಲೆಯನ್ನು ಉಳಿಸುವ ಕರ್ತವ್ಯ ಶಿಕ್ಷಣ ಸಂಸ್ಥೆಗಳು ಮಾಡಬೇಕು. ಚಿಕ್ಕ ಮಕ್ಕಳ ಚಿತ್ರಕಲೆಗಳನ್ನು ಗುರುತಿಸಿ ಅವುಗಳಿಗೆ ಉತ್ತೇಜನ ನೀಡಬೇಕು. ಸಂಘ-ಸಂಸ್ಥೆಗಳು, ಶಿಕ್ಷಣ ಇಲಾಖೆಗಳು, ಅಕಾಡೆಮಿಗಳು ಮಕ್ಕಳಿಗೋಸ್ಕರ ಚಿತ್ರಕಲಾ ಸ್ಪರ್ಧೆ, ಕಲಾ ಚಟುವಟಿಕೆಗಳು ಏರ್ಪಡಿಸಿ ಮಕ್ಕಳಿಂದ ಕಲೆಯನ್ನು ಹೊರಹಾಕಿ ಹೊಸ ಚೈತನ್ಯ ತುಂಬುವಂತಹ ಕಾರ್ಯ ಮಾಡಬೇಕು. ಮಕ್ಕಳು ಚಿತ್ರ ರಚಿಸುವುದನ್ನು ನೋಡುವುದೇ ಒಂದು ಖುಷಿ. ಚಿಕ್ಕಮಕ್ಕಳ ಚಿತ್ರಕಲೆ ವಿಶೇಷ ಮತ್ತು ಆಶ್ಚರ್ಯಕರ ರೀತಿಯಲ್ಲಿ ಚಿತ್ರಗಳು ಮಕ್ಕಳ ಕಲೆಗಳಲ್ಲಿ ಕಂಡುಬರುತ್ತವೆ. ಇಂತಹ ಅದ್ಭುತ ಭಾಷೆಯನ್ನು ನಮ್ಮ ಸಮಾಜದ ಪೋಷಕ ಹಾಗೂ ಶಿಕ್ಷಕ ವರ್ಗ ಸರಿಯಾಗಿ ಗಮನಿಸಲಿಲ್ಲವೆಂಬುದು ಒಂದು ದುರಂತ. ಚಿತ್ರಕಲೆ ಒಂದು 'ಪ್ರತಿಭೆ'ಯಾಗಿ ಅದನ್ನು ರಚಿಸುವ ಮಕ್ಕಳು ಕಲಾವಿದರಾಗುವರೆಂಬ ಭ್ರಮೆಯೊಳಗೆ ನಮ್ಮ ಸಮಾಜ ನಿಂತಿದೆ. ನಮ್ಮ ಮಕ್ಕಳು ಯಾವ ಒತ್ತಾಯಕ್ಕೂ ಮಣಿಯದೆ ರಚಿಸಿದ ಚಿತ್ರಗಳನ್ನು ಒಮ್ಮೆ ಸೂಕ್ಷ್ಮವಾಗಿ ನಾವು ಗ್ರಹಿಸಿದಲ್ಲಿ ನಮ್ಮನ್ನು ನಾವೇ ಕಾಣಬಹುದು".[೧೨] ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ಅವರ ಸುತ್ತಲಿನ ಪರಿಸರ ಪ್ರಮುಖ ಪಾತ್ರವಹಿಸುತ್ತದೆ. ಪರಿಸರ ಎಂದರೆ ಕೇವಲ ನಮ್ಮ ಸುತ್ತಮುತ್ತಲಿನ ಹವಾಮಾನ ವಾತಾವರಣಕ್ಕೆ ಮಾತ್ರ ಸೀಮಿತವಾಗಿಲ್ಲ. ಕುಟುಂಬದ ಸದಸ್ಯರ ರೀತಿನೀತಿಗಳು ನೆರೆ-ಹೊರೆಯವರ ಆಚಾರ-ವಿಚಾರಗಳು, ಅವರ ಜೀವನ ಶೈಲಿಯನ್ನೂ ಒಳಗೊಂಡಿರುತ್ತದೆ. ಹೀಗಾಗಿ ಮಗುವಿನ ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಉತ್ತಮ ಪರಿಸರ ಒದಗಿಸುವುದು ಪಾಲಕರ ಕರ್ತವ್ಯ.

ಈ ರೀತಿಯಾಗಿ ಬೆಳೆಯಬೇಕಾದರೆ ಮಕ್ಕಳು ಕಲೆಯ ಬಗ್ಗೆ ಅಭಿರುಚಿ ಬೆಳೆಸಿ ಸೃಜನಶೀಲತೆ, ಕ್ರಿಯಾಶೀಲರನ್ನಾಗಿ ರೂಪಿಸುವುದು ಒಳ್ಳೆಯ ವಿದ್ಯಾವಂತರನ್ನಾಗಿ ಮಕ್ಕಳನ್ನು ರೂಪಿಸುವುದು ಪೋಷಕರ ಜವಾಬ್ದಾರಿಯಾಗಿದೆ. ಹಾಗೆಯೇ ಮಗುವಿನ ಬೆಳವಣಿಗೆಯಲ್ಲಿ ಸಹಕಾರ ಕಲೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ಹುಟ್ಟುವ ಹಾಗೆಯೆ ಮುಖ್ಯವಾದ ಅಂಶವನ್ನು ತಿಳಿಸಿಹೇಳಬೇಕು. ಇದರಿಂದ ಉತ್ತೇಜನಗೊಂಡು ಜೀವನದಲ್ಲಿ ಏನಾದರೂ ಸಾಧಿಸುತ್ತದೆ.

೧೨. ಪಿಎಂ.ಎಸ್. ಮೂರ್ತಿ (ಲೇ) ಮಕ್ಕಳ ಮನಸ್ಸಿನ ಚಿತ್ರಕಲೆ, "ನಿಜದ ನೆಲೆ", ಅಭಿನಂದನಾ ಗ್ರಂಥ, ಪು-೨೪೬

ಅಧ್ಯಾಯ - ಮೂರು

ಚಿಕ್ಕ ಮಕ್ಕಳ ಚಿತ್ರಕಲೆಯ ವರ್ಗೀಕರಣ



ಅಧ್ಯಾಯ – ೩
ಚಿಕ್ಕ ಮಕ್ಕಳ ಚಿತ್ರಕಲೆಯ ವರ್ಗೀಕರಣ

ಮಕ್ಕಳ ವರ್ಣಚಿತ್ರಗಳು ನಮಗೆ ಭಿನ್ನವಾದ ಲೋಕವನ್ನು ಗೋಚರಿಸುತ್ತವೆ. ಅವರ ಚಿತ್ರಗಳಲ್ಲಿ ದೃಶ್ಯ ವಿಷಯಗಳ ಆಕಾರ, ಗಾತ್ರ ಮತ್ತು ಪ್ರಮಾಣ ಕೂಡ ಭಿನ್ನವಾಗಿರುತ್ತವೆ. ಮಕ್ಕಳ ರೇಖಾ ಚಿತ್ರಗಳು ವಿಡಂಬನ ಶೀಲತೆಯಿಂದ ಕೂಡಿರುತ್ತವೆ. ವರ್ಣ ಚಿತ್ರಕಾರನಾದ ಮಗು ಹೊಸ ಸೃಷ್ಟಿಯನ್ನೇ ಮಾಡಿರುತ್ತಾನೆ. ಆತನ ಕಲೆಯಲ್ಲಿ ಪರಿಪೂರ್ಣತೆ ಇಲ್ಲದಿದ್ದರೂ ಆತನ ಅಭಿವ್ಯಕ್ತಿ ಇರುತ್ತದೆ. ಆತನ ಮನಸ್ಸಿನ ಗಾಢವಾದ ಭಾವನೆಗಳಿರುತ್ತವೆ, ತನ್ನ ಸುತ್ತಲಿರುವ ಲೋಕದ ಅಭಿಪ್ರಾಯಗಳಿರುತ್ತವೆ. ಆದುದರಿಂದ ಮಕ್ಕಳ ಕಲೆಯ ಬಗ್ಗೆ ಎಚ್ಚರಿಕೆಯಿಂದ ಮತ್ತು ಗೌರವದಿಂದ ಮೆಚ್ಚುಗೆಯನ್ನು ಸೂಚಿಸಬೇಕಾಗುತ್ತದೆ.

ಬಾಲವರ್ಣ ಚಿತ್ರಕಾರ ವೈಯಕ್ತಿಕವಾಗಿ ವಸ್ತುಗಳನ್ನು ದೃಶ್ಯಕರಿಸುತ್ತಾನೆ. ಆತನು ತನಗೆ ಅನಿಸಿದ ರೀತಿಯಲ್ಲಿ ರೇಖಾಚಿತ್ರ ಬಿಡುತ್ತಾನೆ. ಅಲ್ಲದೆ ಬಣ್ಣಗಳ ಪರಿಣಾಮ ಗೊತ್ತಿಲ್ಲದಿದ್ದರು ಅವುಗಳನ್ನು ಉಪಯೋಗಿಸುತ್ತಾನೆ. ನಾನೇಕೆ ಇಂತಃ ಬಣ್ಣ ಉಪಯೋಗಿಸಿದೆ ಎಂದು ಹೇಳಲಾರ ಆದುದರಿಂದ ಮಕ್ಕಳ ವರ್ಣ ಚಿತ್ರಗಳು ಬಹಳ ಆಸಕ್ತಿದಾಯಕವಾಗಿರುತ್ತವೆ. ಮಗು ಚಿತ್ರಿಸಲು ಕುಳಿತಾಗ ಅದು ಏನನ್ನು ಚಿತ್ರಿಸುತ್ತದೆ ಎಂದು ಹೇಳಲಾಗುವುದಿಲ್ಲ. ವಯಸ್ಕರ ಆಸಕ್ತಿಯುತ ವಿಷಯಗಳು ಬಾಲಚಿತ್ರಕಾರನ ವಿಷಯಗಳಾಗಿರುವುದಿಲ್ಲ. ಮಗುವಿನ ಕಲಾ ಸ್ಫೂರ್ತಿ ಎಂಬ ಪ್ರಶ್ನೆಗೆ ಉತ್ತರಿಸುವುದು ಸುಲಭವಲ್ಲ. ಬಾಲವರ್ಣ ಚಿತ್ರಕಾರರು ಸಂಯೋಜನೆಯಲ್ಲಿ ಎಚ್ಚರಿಕೆಯನ್ನು ವಹಿಸುವುದಿಲ್ಲ. ಆದರೆ, ಸಂಕೇತಗಳ ಬಗ್ಗೆ ಅವರಿಗೆ ಗೊತ್ತಿರುವುದಿಲ್ಲ. ಆದರೆ ಸಂಕೇತಗಳನ್ನು ಸೃಷ್ಟಿಸುತ್ತಾರೆ. ಮಕ್ಕಳ ಕಲೆಯಲ್ಲಿ ಹಿಂದೆ ಸಂಭವಿಸಿದ ಘಟನೆಗಳಿಗಿಂತಲೂ ವರ್ತಮಾನದ

ಘಟನೆಗಳೇ ಹೆಚ್ಚು ಮಕ್ಕಳ ವರ್ಣ ಚಿತ್ರಗಳಲ್ಲಿ ನಾವು ಗ್ರಾಮೀಣ ಮತ್ತು ನಗರ ಜೀವನದ ವೈವಿಧ್ಯದ ವಿಷಯಗಳನ್ನು ಕಾಣಬಹುದು. ಮಕ್ಕಳ ರೇಖಾ ಚಿತ್ರಗಳು ಮತ್ತು ವರ್ಣ ಚಿತ್ರಗಳು ಅವರ ಮಾನಸಿಕ ಸಮಸ್ಯೆಗಳನ್ನು ಅರಿಯಲು ಅವರ ವ್ಯಕ್ತಿತ್ವದ ಪ್ರಗತಿಯನ್ನು ತಿಳಿಯಲು ಸಹಾಯಕವಾಗುತ್ತದೆ ಎಂದು ಮನೋವಿಜ್ಞಾನಿಗಳು ತಿಳಿಸಿದ್ದಾರೆ.[೧] ಈ ಹಿನೆಲೆಯಲ್ಲಿ ಮಗುವಿನ ಬೆಳವಣಿಗೆಯಲ್ಲಿ ಕಲೆಯು ಉತ್ತೇಜನ ತುಂಬುವ ಮಾಧ್ಯಮವಾಗಿ ಪರಿಣಮಿಸುತ್ತದೆ.

ಮಕ್ಕಳಿಗೆ ಉತ್ತಮ ಶಿಕ್ಷಣ ಎಷ್ಟು ಮುಖ್ಯವೋ ಸುಸಂಸ್ಕೃತವಂತರನ್ನಾಗಿ ಮಾಡುವುದು ಅಷ್ಟೆ ಮುಖ್ಯ. ಮಕ್ಕಳಿಗಾಗಿ ಆಸ್ತಿ ಮಾಡುವ ಬದಲು ಮಕ್ಕಳಿಗೆ ಶಿಕ್ಷಣವನ್ನು ನೀಡುವುದು ಸ್ವಾಭಿಮಾನದಿಂದ ಬದುಕುವುದನ್ನು ಕಲಿಸುವುದು ಪಾಲಕರ ಕರ್ತವ್ಯವಾಗಿದೆ. ಮಕ್ಕಳ ಭವಿಷ್ಯ ಉಜ್ವಲಗೊಳ್ಳಲು ಪ್ರಯತ್ನ ತುಂಬಾ ಮುಖ್ಯ. ಇಂದು ಶಿಕ್ಷಣ ಸಂಸ್ಥೆಗಳು ಶಾಲೆಗಳು ಮಕ್ಕಳನ್ನು ಬುದ್ದಿವಂತರನ್ನಾಗಿಸುವ ಕಾರ್ಖಾನೆಗಳಾಗಿವೆ. ಮಕ್ಕಳಿಗೆ ಬೌದ್ಧಿಕ ಮಟ್ಟ ಬೆಳೆಯಲು ಸಹಕಾರಿಯಾಗಬೇಕು ಬರಿ ಜ್ಞಾನಿಗಳಾಗಿ ರೂಡಿಸುವ ಬದಲು ಮಕ್ಕಳನ್ನು ಸೃಜನಶೀಲ ವ್ಯಕ್ತಿತ್ವ ಮೈಗೂಡಿಸುವ ಹಾಗೆ ಬೆಳೆಸಬೇಕು. ಇವುಗಳ ಮನಸ್ಥಿತಿ ಅರಿತುಕೊಂಡು ಮುಂದೆ ಸಾಗಬೇಕು. ಮಗು ಚಿತ್ರ ರಚಿಸುವುದಕ್ಕೆ ಪ್ರಯತ್ನಿಸುತ್ತಿದ್ದರೆ ಅದಕ್ಕೆ ಪ್ರೋತ್ಸಾಹ ಬಹಳ ಮುಖ್ಯ. ಚಿತ್ರ ಬರಿತಾ ಬರಿತಾ ಮಗು ಅದರಲ್ಲಿ ಮಗ್ನವಾಗಿ ಕಲ್ಪನೆಯ ಚಿತ್ರವನ್ನು ಡ್ರಾಯಿಂಗ್ ಪೇಪರ್ ಮೇಲೆ ರಚನೆ ಮಾಡುತ್ತಾನೆ. ನಾವು ಗಮನಿಸುವ ಹಾಗೆಯೇ ಮಕ್ಕಳು ಅಂತ ಯಾರಿಗೆ ಕರೆಯುತ್ತೇವೆ ಅದರದೆ ಆದ ವಯೋಮಾನ ಉಂಟು. ಅಂತಹ ಕೆಲವು ಅಂಶಗಳ ಬಗ್ಗೆ ವಿವರಿಸಲಾಗಿದೆ.

ಮಕ್ಕಳೆಂದರೆ :

ಮಕ್ಕಳು ಎಂದರೆ ಯಾರು? ಯಾರನ್ನು ನಾವು ಮಕ್ಕಳೆಂದು ಕರೆಯುತ್ತೇವೆ? ಮಕ್ಕಳೆಂದು ಗುರುತಿಸಲು ಏನಾದರೂ ಮಾನದಂಡಗಳಿವೆಯೇ? ಯಾವ ವಯೋಮಾನದವರನ್ನು ನಾವು ಮಕ್ಕಳೆಂದು ಕರೆಯುತ್ತೇವೆ. ಎನ್ನುವ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಸಾಮಾನ್ಯವಾಗಿ ಮಕ್ಕಳೆಂದರೆ ಏನು ತಿಳಿಯದ ಮುಗ್ಧರು ಆಟವಾಡಿ ನಲಿಯುವವರು, ಸೂಕ್ಷ್ಮಮನಸ್ಸುಳ್ಳವರು, ದೇವರ ಸಮಾನರು, ದೊಡ್ಡವರ ರಕ್ಷಣೆಯಲ್ಲಿ ಬೆಳೆಯಬೇಕಾದವರು ಎಳೆ ವಯಸ್ಸಿನವರು, ತಂದೆ–ತಾಯಿ, ಪೋಷಕರಿಂದ ರಕ್ಷಿಸಲ್ಪಡುವವರು, ಹೊಸದನ್ನು ಕಲೆಯಬೇಕಾದವರು, ಸ್ವತಂತ್ರವಾಗಿ ವಿಚಾರಮಾಡದವರು, ೧೪ ವರ್ಷದೊಳಗಿನವರು ಹೀಗೆ ಹೇಳುತ್ತಾ ಹೋಗಬಹುದು. ಆದರೆ ವಿಶ್ವಸಂಸ್ಥೆ ಮಕ್ಕಳ ಹಕ್ಕುಗಳ ಒಡಂಬಡಿಕೆ, ಭಾರತ ಸಂವಿಧಾನ, ಮಕ್ಕಳ ನ್ಯಾಯ ಕಾನೂನು ಮತ್ತು ಇತರೆ ಕಾನೂನುಗಳು ಮಕ್ಕಳೆಂದರೆ ಯಾರು ಎಂಬುದಕ್ಕೆ ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸುತ್ತವೆ.

---

೧. ವಿಶ್ವರೂಪಾಚಾರ್. ಎನ್, ಕಲಾ ಮನೋವಿಜ್ಞನ, ಪುಟ–೧೧

ಮಗು ೧೮ ವರ್ಷ ಆಗುವ ಮೊದಲೇ ವಯಸ್ಕರ ಆಗುತ್ತದೆ ಎಂದು ಒಂದು ದೇಶದ ಕಾನೂನು ಪರಿಗಣಿಸಿದೇ ಇದ್ದರೆ ೧೮ ವರ್ಷದೊಳಗಿನವರನ್ನು ಮಗು ಎಂದು ಒಡಬಂಡಿಕೆಯಾಗಿ ನಿರ್ಧರಿಸುತ್ತದೆ.

ಒಂದು ಮಗು ಬೆಳೆದು ಸ್ವತಂತ್ರವಾಗಿ ಯಾರ ರಕ್ಷಣೆ ಇಲ್ಲದೆ ತಾರತಮ್ಯವಿಲ್ಲದೆ ಜೀವಿಸಬೇಕೆಂದರೆ ಕನಿಷ್ಟ ೧೮ ವರ್ಷಗಳಾದರೂ ಬೇಕು ಎಂಬುದು ಈ ಪರಿಚ್ಚೇದದ ಆಶಯವಾಗಿದ್ದು, ೨೦೦೧ರ ತಿದ್ದುಪಡೆಯಂತೆ ೧೮ ವರ್ಷದೋಳಗಿನ ವಯಸ್ಸಿನವರನ್ನು ಮಕ್ಕಳು ಎಂದು ಹೇಳುತ್ತದೆ.

ಭಾರತದ ಸಂವಿಧಾನದ "೧೪ ವರ್ಷದೊಳಗಿನವರೆಲ್ಲರೂ ಮಕ್ಕಳು" ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳು ಒಡಂಬಡಿಕೆಗೆ ಭಾರತ ಸರ್ಕಾರವು ೧೯೯೨ರಲ್ಲಿ ಒಪ್ಪಿಗೆ ನೀಡಿದ ಮೇಲೆ ಭಾರತ ಸಂವಿಧಾನವೂ ಕೂಡ ೧೮ ವರ್ಷದೊಳಗಿನವರನ್ನು ಮಕ್ಕಳು ಎಂದು ಒಪ್ಪಿಕೊಂಡಂತಾಗಿದೆ."[೨] ಇದರೊಳಗೊಂಡಂತೆ ಮಕ್ಕಳು ಎಂದು ಕರೆಯುವ ನಾವು ಅವರ ಬೆಳವಣಿಗೆಯ ಹಂತದಲ್ಲೂ ಕೂಡ ಕ್ರಿಯಾಶೀಲರಾಗಿ ಬೆಳೆಸುವುದು ಮುಖ್ಯ.

ಮಕ್ಕಳು ಎಷ್ಟೇ ವಯಸ್ಸಿನವರು ಆದರೂ ಕೂಡ ಅವರಲ್ಲಿರುವ ಬುದ್ದಿ, ಚಾತುರ್ಯ್ಯ, ಚಟುವಟಿಕೆ, ಎಲ್ಲದರಲ್ಲೂ ಭಾಗವಹಿಸುವ ಹುಮ್ಮಸ್ಸು ಮಕ್ಕಳಲ್ಲಿ ಕಂಡುಬರುತ್ತದೆ. ಮಕ್ಕಳ ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಬಿರುವುದು. ಕಲೆ ಇವರ ಭಾಷೆಯಲ್ಲಿ ಚಿತ್ರಕಲೆಯೇ ಒಂದು ಮಾಧ್ಯಮವಾಗಿರುತ್ತದೆ.

ಮಕ್ಕಳ ಚಿತ್ರಕಲೆಗೂ ದೊಡ್ಡವರ ಚಿತ್ರಕ್ಕೂ ಇತ್ಯಾದಿ ವರ್ಗೀಕರಣಗಳೂ ಕಲೆಗಾರರ ಹಾಗೂ ವಿಮರ್ಶಕರ ಉತ್ಪಾದನೆಗಳು ಇವು ಅಧ್ಯಯನದ ಉದ್ದೇಶದಿಂದ ಹುಟ್ಟಿಕೊಂಡ ವರ್ಗೀಕರಣಗಳಷ್ಟೇ. ತೀರಾ ಗಂಭೀರವಾಗಿ ತೆಗೆದುಕೊಂಡರೆ ದೊಡ್ಡವರ ಚಿತ್ರಕ್ಕಿಂತ ಮಕ್ಕಳ ಚಿತ್ರ ಹೇಗೆ ಭಿನ್ನ ಮತ್ತು ಲಕ್ಷಣಗಳೇನು ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಇಲ್ಲಿರುವುದು ಕೇವಲ ಕಲೆ ದೊಡ್ಡವರು, ಚಿಕ್ಕವರು ಎನ್ನುವ ಬೇಧ-ಭಾವ ಚಿತ್ರಕಲೆಯಲ್ಲಿ ಇಲ್ಲ. ಎಲ್ಲವು ಇಲ್ಲಿ ಒಂದೇ ಅಂಶದಿಂದ ಕೂಡಿರುತ್ತವೆ.

"ಒಂದೂವರೆ ವರ್ಷದ ಮಗು ತನ್ನ ಮನಸ್ಸಿನ ಚಿತ್ರ ಪಟಲದ ಮೇಲೆ ಮೂಡಿದ ಆಕಾರಗಳಿಗೆ ಪ್ರತಿಕ್ರಿಯಿಸುವ ಪ್ರಯತ್ನವನ್ನು ಚಿತ್ರದ ಮೂಲಕ ಯತ್ನಿಸುತ್ತದೆ. ಕಣ್ಣು ಕಿವಿಗಳ ಮೂಲಕ ಮನಸ್ಸನ್ನು ಪ್ರವೇಶಿಸುವ ಈ ಎಲ್ಲ ರೀತಿಯ ಚಿತ್ರರೂಹುಗಳಲ್ಲಿ ತೀವ್ರವಾದುದು ಮಾತ್ರ ದಾಖಲೆಗೊಂಡು ಉಳಿದುದು ತನಗೆ ತಾನೇ ಅಳಿಸಿ ಹೋಗುವ 'ಸ್ವನಿಯಂತ್ರಿತ ವ್ಯವಸ್ಥೆಯನ್ನು ಈ ಪುಟ್ಟ ಮಗುವಿನಲ್ಲಿರುವ ಒಂದು ಮಾನಸಿಕ ವ್ಯವಸ್ಥಿತ ಜಾಲ ನಿರ್ವಹಿಸುತ್ತದೆ. ಮಗು

---

೨. ಪಿ. ಹೊಸ್ನೂರು ಸಾಬ್, ಮಕ್ಕಳ ಹಕ್ಕುಗಳು: ಸ್ಥಳೀಯ ಸರ್ಕಾರ ಕ.ವಿ.ವಿ.ಹಂಪಿ, ಎಂ,ಫಿಲ್ ಸಂಪ್ರಬಂಧ ಜಾನಪದ ಅಧ್ಯಯನ ವಿಭಾಗ

ಶೈಶಾವಸ್ಥೆಯ ಹಂತದಿಂದಲೂ ತನ್ನ ಸುತ್ತಲ ಜನರು. ಶಬ್ದ, ಆಕಾರ, ಬಣ್ಣಗಳು ಇತ್ಯಾದಿಗಳು ಅವುಗಳ ತೀವ್ರತೆಯನ್ನು ಅವಲಂಬಿಸಿ ಮಗುವಿನ ಸ್ಮೃತಿ ಸೇರುತ್ತವೆಯಾದರೂ ದಾಖಲೆಯಾಗಿ ಕೆಲವೇ ಸಂಕೀರ್ಣ ಚಿತ್ತಾರಗಳು ಮಾತ್ರ ಉಳಿಯುತ್ತವೆ. ದಿನ ಕಳೆದಂತೆ ಮಗು ಈ ಕುರೂಹುಗಳನ್ನು ಮಾತಿಗಿಂತಲೂ ಮೊದಲು ಚಿತ್ರಗಳ ಮೂಲಕ ಅಥವಾ ಗೀಟುಗಳ ಮೂಲಕ ಅಭಿವ್ಯಕ್ತಗೊಳಿಸುವ ಮೂಲಕ ಬಾಹ್ಯ ಪ್ರಪಂಚದೊಂದಿಗೆ ಸಂವಾದಿಸುತ್ತದೆ. ಮನಸ್ಸಿನ ಮಾತುಗಳಿಗೆ ಧ್ವನಿಯಾಗುವ 'ಚಿತ್ರಕಲೆ'ಯನ್ನು ಯಾವ ಯಾವ ಪೂರ್ವಾಗ್ರಹವಿಲ್ಲದೆ ಮಗು ಮುಕ್ತವಾಗಿ ತನ್ನ ಅಭಿವ್ಯಕ್ತಿಗೆ ಬಳಸಿಕೊಳ್ಳಲು ಹೆಚ್ಚಿನ ಒಲವು ತೋರುತ್ತದೆ. ಮಗು ತನಗೆ ಇಷ್ಟವಾದುದನ್ನು ಇಷ್ಟವಾಗದೇ ಇರುವುದನ್ನು ಸಮಾನ ಆಸಕ್ತಿಯಿಂದ ಚಿತ್ರಿಸುತ್ತದೆ. ಇಂತಹ ಚಿತ್ರಗಳನ್ನು ತಂದೆ-ತಾಯಿಗಳು ಶಿಕ್ಷಕರು ಸೂಕ್ಷ್ಮವಾಗಿ ಗ್ರಹಿಸಬೇಕು. ಆಗ ನಮ್ಮ ಮಕ್ಕಳನ್ನು ಸಾಮಾಜಿಕವಾಗಿ ಯಾವ ಮೂಲದ ಆಧಾರದ ಮೇಲೆ ಬಳಸುತ್ತಿದ್ದೇವೆ. ಅವರ ಖಾಸಗಿ ಒಲವುಗಳು ಯಾವುವು, ಅವರ ನಿರೀಕ್ಷೆಗಳನ್ನು ನಾವು ಪೂರೈಸುವಲ್ಲಿ ನಮ್ಮ ನಿಲುವುಗಳು ಯಾವುವು, ನಮ್ಮ ಮಕ್ಕಳು ಮಾನಸಿಕವಾಗಿ ಸದೃಡ ವ್ಯಕ್ತಿತ್ವ ರೂಪುಗೊಳ್ಳಲು ನಮ್ಮ ಯಾವ ಸಹಕಾರ ಅವರ ನೆರವಿಗೆ ಬಂದಿತು ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರದ ಸುಳಿವು ಈ ಮಕ್ಕಳ ಚಿತ್ರಗಳಲ್ಲಿ ಹೊಳೆಯಬಹುದು.[೩] ಈ ರೀತಿಯಾಗಿ ಹೇಳುವುದಾದರೆ ಮಗುವಿನ ಭಾವನೆಗಳು ವಿಭಿನ್ನ. ಚಿಕ್ಕ ಮಕ್ಕಳು ಹಾಗೂ ಬೆಳೆದವರ ನಡುವಿನ ಶಾಲಾ ಹಂತದ ಮಕ್ಕಳು, ಪೋಷಕರು ಹಾಗೂ ಸಾರ್ವಜನಿಕ ವ್ಯಕ್ತಿಗಳ ಒಡನಾಟಕ್ಕಿಂತ, ಶಾಲೆಯಲ್ಲಿರುವ ಅಧ್ಯಾಪಕರ ನಡುವೆಯೇ ದಿನದ ಹೆಚ್ಚು ಭಾಗ ಕಳೆಯುವುದರಿಂದ ಅಧ್ಯಾಪಕರೂ ಕಥೆ ಹೇಳುವ ಚಮತ್ಕಾರಿಕ ಕಲೆಯನ್ನೂ ರೂಢಿಸಿಕೊಳ್ಳುವುದು ಅವಶ್ಯಕ. ಕೆಲವು ಸಮಯದಲ್ಲಿ ಕಥೆಗಳಲ್ಲಿ ಹುಟ್ಟುವ ಅಂಶಗಳು ಮಕ್ಕಳಿಗೆ ಚಿತ್ರಿಸಲು ಪ್ರೇರಣೆಯಾಗಬಹುದು. ಪ್ರಕೃತಿಯಲ್ಲಿ ಸಾಕಷ್ಟು ಜೀವರಾಶಿಗಳು ಕಂಡುಬರುತ್ತವೆ. ಆದರೆ ಮಗು ಮಾತ್ರ ತನಗೆ ಆಕರ್ಷಣೆಯಾಗುವ ಕೆಲವೇ ಕೆಲವೂ ವಸ್ತುಗಳು ಆಗಿರಬಹುದು, ಅಥವಾ ಪ್ರಾಣಿಗಳಾಗಿರಬಹುದು ಬೇಗ ತನ್ನ ಮನಸ್ಸಿನಲ್ಲಿ ಉಳಿಯುವ ಹಾಗೆ ಆ ದೃಶ್ಯವನ್ನು ನೆನಪಿನಲ್ಲಿ ಇಟ್ಟುಕೊಳ್ಳುತ್ತದೆ ತನಗೆ ಇಷ್ಟವಾದಾಗ ಚಿತ್ರ ಬರೆಯುವಾಗ ತಾನು ಕಂಡ ದೃಶ್ಯ ಸ್ಮರಣ ಮಾಡಿಕೊಂಡು ಕಲೆಯನ್ನು ಮಾಧ್ಯಮದ ಮುಖಾಂತರ ಹೊರಹಾಕುತ್ತದೆ.

ಮಗು ವರ್ಷದಿಂದ ವರ್ಷಕ್ಕೆ ಬೆಳೆಯುತ್ತಾ ಹೋದಂತೆ ತನ್ನಲ್ಲಿರುವ ಕಲೆಯು ಸಹ ಇಮ್ಮಡಿಗೊಂಡು ತನ್ನ ಮನಸ್ಸಿನಲ್ಲಿ ಮೂಡಿದ ಚಿತ್ರವನ್ನು ಗೀಚುವುದು ತಿದ್ದಿವುದು ಮಾಡುತ್ತಾ ಮಾನಸಿಕವಾಗಿ ಬೆಳದಂತೆ ವಿಭಿನ್ನವಾದ ಕಲೆಯೂ ಸಹ ಹೊಸ ರೀತಿಯಲ್ಲಿ ಮಕ್ಕಳಲ್ಲಿ ರೇಖೆಗಳ

೩. ಎಂ.ಎಸ್. ಮೂರ್ತಿ (ಲೇ), ಮಕ್ಕಳ ಮನಸ್ಸಿನ ಚಿತ್ರಕಲೆ "ನಿಜದ ನೆಲೆ", ಅಭಿನಂದನ ಗ್ರಂಥ, ಪುಟ-೨೪೭

ಪ್ರೌಢಿಮೆ ಬೆಳಸಿಕೊಂಡು ನೆರಳು-ಬೆಳಕುಗಳ ಸಂಯೋಜನೆ, ಬಣ್ಣಗಳ ಕಲ್ಪನೆ ಎಲ್ಲಾ ಬಗೆಯ ಪ್ರಾಯೋಗಿಕವಾಗಿ ಚಿತ್ರವನ್ನು ಬಿಡಿಸುತ್ತವೆ. ಚಿತ್ರದಲ್ಲಿ ರೇಖೆಯು ಪ್ರಧಾನವಾಗಿ ಬಳಕೆ ಮಾಡುತ್ತಾ ಯಾವುದೇ ಚಿತ್ರದ ದೃಶ್ಯವಾಗಿರಲ್ಲಿ ಮಕ್ಕಳು ಬೇಗನೆ ತಮ್ಮ ಕಲ್ಪನೆಗೆ ತಂದುಕೊಂಡು ಚಿತ್ರರಚಿಸುವಲ್ಲಿ ಯಶಸ್ವಿ ಕಾಣುತ್ತಾರೆ. ಮಕ್ಕಳ ಆಲೋಚನೆಗಳು ಭಿನ್ನವಾಗಿ ಮತ್ತು ಅವಲೋಕನದಲ್ಲಿ ತೋಡಗಿರುತ್ತವೆ. ವರ್ಣಗಳ ಮುಖಾಂತರ ಕಲಾಕೃತಿಯನ್ನು ಪ್ರತಿಬಿಂಬಿಸುತ್ತಾ ಹೊಸಹೊಸ ರೀತಿಯಲ್ಲಿ ಚಿತ್ರಗಳನ್ನು ಪ್ರಸ್ತುತ ಪಡಿಸುವ ಮಕ್ಕಳು ಬೆಳವಣಿಗೆಯ ಹಂತದಲ್ಲಿ ಗ್ರಹಿಸುವ ಬುದ್ಧಿಶಕ್ತಿ ಹೊಂದಿರುತ್ತದೆ.

"ಶಿಕ್ಷಣವೆಂದರೆ ಓದು, ಬರಹ, ಅಕ್ಷರಭ್ಯಾಸವೆಂದು ತಿಳಿಸಿದ್ದೇವೆ. ಪ್ರಪಂಚದ ಅರಿವನ್ನು ಮೂಡಿಸುವುದು. ಶಿಕ್ಷಣವೆಂದಿದ್ದೇವೆ. ಶಿಕ್ಷಣವೆಂದರೆ ಮಕ್ಕಳಿಗೆ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕೆ ನೀಡುವ ಒಂದು ಜ್ಞಾನ, ಜೊತೆಗೆ ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ಪೂರಕವಾಗಿ ನೀಡುವ ಶಿಕ್ಷಣ ಇನ್ನೂ ಇವೆ. ಅವೇ ಚಿತ್ರಕಲೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ, ಉತ್ಸವ, ನಾಟಕ ಹಾಗೂ ಇತರ ಕಲೆಗಳು. ಇಂದು ನಶಿಸುತ್ತಿರುವ ಗ್ರಾಮೀಣ ಬದುಕಿನ ಕಲೆಗಳು, ಜನಪದ ಚಿತ್ರಗಳು, ರಂಗೋಲಿ ಕಲೆಗಳು ಗ್ರಾಮೀಣ ಕ್ರೀಡೆಗಳು, ಧಾರ್ಮಿಕ ಪರಂಪರೆಗಳು, ಪರಂಪರೆಗತ ಕಲೆಗಳನ್ನು ಸಾಂಸ್ಕೃತಿ ಹಿನ್ನೆಲೆಗಳ ಪರಿಚಯವನ್ನು ಮಕ್ಕಳಿಗೆ ಮಾಡಿಕೊಡಬೇಕಾಗಿದೆ.

ಪ್ರಾಥಮಿಕ ಮತ್ತು ಪ್ರೌಢ ಹಂತದ ಮಕ್ಕಳಲ್ಲಿ ಸೃಜನಶೀಲತೆ ಹೆಚ್ಚುತ್ತಾ ಹೋಗುವಂತಹದ್ದು ಸೃಜನಶಿಲತೆ ಎಂದರೆ ಸಮಸ್ಯೆಗೆ ಉತ್ತರಗಳನ್ನು ಕಂಡುಕೊಳ್ಳವುದು, ಹೊಸದನ್ನು ಸೃಷ್ಟಿಸುವುದು ಸೃಜನಶೀಲತೆಗೆ ಎಲ್ಲಾ ಮಕ್ಕಳಲ್ಲಿ ಇರುವ ಒಂದು ವಿಶೇಷ ಗುಣ ಪ್ರಾರಂಭದ ದೆಸೆಯಲ್ಲಿಯೇ ಮಕ್ಕಳಿಗೆ ಚಿತ್ರಕಲೆಯನ್ನು ಕಲಿಸಿದ್ದಾದರೆ ಸೃಜನಶೀಲಗೆ ಅವಕಾಶವನ್ನು ನೀಡಿದಂತಾಗುತ್ತದೆ. ಕ್ರಿಯೆಟಿವಿಟಿ ಮಕ್ಕಳಲ್ಲಿ ಜಾಸ್ತಿ ಇರುತ್ತದೆ. ಕಲೆ ಅದಕ್ಕೆ ಪ್ರಧಾನವಾಗಿದೆ".[೪] ಈ ಹಿನೆಲೆಯಲ್ಲಿ ಹೇಳುವುದಾದರೆ ಮಗು ಪ್ರತಿಕ್ಷಣವು ಹೊಸ ಹೊಸ ಆಲೋಚನೆ, ಕ್ರಿಯಾತ್ಮಕವಾಗಿ ಪ್ರಸ್ತುತಪಡಿಸುವುದಕ್ಕೆ ಚಿತ್ರಗಳಲ್ಲಿ ಪ್ರಯತ್ನಿಸುತ್ತದೆ.

ಮಕ್ಕಳ ಮನಸ್ಥಿತಿಗಳ ಬಗ್ಗೆ ಇಲ್ಲಿ ಹೇಳುವುದಾರೆ, ಪ್ರತಿದಿನ ಇವರಿಗೆ ಕಟ್ಟು ಪಾಡುಗಳು ಅಂದರೆ ಶಾಲೆಯಲ್ಲಿ ಓದುವದು, ಬರೆಯುವದು, ಶಾಲೆಯಿಂದ ಮನೆಗೆ ಬಂದ ಮೇಲೂ ಮತ್ತೆ ಇದೆ ಮುಂದುವರಿಯುವುದು ಮಕ್ಕಳ ಮೇಲೆ ಪೋಷಕರು ಸಹ ಅತಿಯಾದ ಒತ್ತಡ ಮಗುವಿನ ಮೇಲೆ ಹೇರುವುದು, ಓದು, ಬರಿ ಎಂದು ಪಿಡಿಸುವುದು ಈ ರೀತಿ ಇವರಿಗೆ ಸ್ವಲ್ಪವು ಅವರ ಇಷ್ಟಕ್ಕೆ ಹಾಯಾಗಿ ಬೇರೆ ಕಲಿಕೆಯಲ್ಲಿ ತೊಡಗಿಸಿಕೊಳ್ಳುವದಕ್ಕೂ ಬಿಡುವುದಿಲ್ಲ. ಈ ರೀತಿ ಮಾಡುವುದರಿಂದ ಮಕ್ಕಳಲ್ಲಿ ಮಾನಸಿಕ ಹಿಂಸೆ ಹೆಚ್ಚಾಗಿ ಯಾವುದು ಸರಿಯಾಗಿ ಅಭ್ಯಾಸ ಮಾಡದ ಸ್ಥಿತಿ ನಿರ್ಮಾಣವಾಗುತ್ತದೆ. ಮಕ್ಕಳನ್ನು ಸ್ವತಂತ್ರವಾಗಿ ಅವರ ಪಾಡಿಗೆ ಸ್ವಲ್ಪ ಸಮಯ

೪. ಬಿ.ಎಚ್. ಕುರಿಯವರ, ಬಿಸಿಲು ಬೆಳದಿಂಗಳು (ಸ್ಮರಣ ಸಂಚಿಕೆ) ಶಿಕ್ಷಣದಲ್ಲಿ ಚಿತ್ರಕಲೆ, ಪುಟ-೨೩

ಬಿಡಬೇಕು, ಇದರಿಂದ ಮಕ್ಕಳಲ್ಲಿ ಸೃಜನಶೀಲತೆ ಮೊಳಕೆ ಒಡೆಯುತ್ತಾ ಆಟದಲ್ಲಿ ಉತ್ಸಾಹ, ಚಿತ್ರ ಬಿಡುಸುವದರಲ್ಲಿ, ಹಾಡುವುದರಲ್ಲಿ ಹೀಗೆ ಬೇರೆ ಬೇರೆ ಅಭ್ಯಾಸದಲ್ಲಿ ತೊಡಗಿಸಿಕೊಳ್ಳುವದಕ್ಕೆ ಮಗು ಇಷ್ಟಪಡುತ್ತದೆ.

ಚಿಕ್ಕ ಮಕ್ಕಳು ದೊಡ್ಡವರ ಹಾಗೆಯೇ ಚಿಂತೆಯಲ್ಲಿ ಮಗ್ನರಾಗುವರು. ಮನಸ್ಸಿನ ಮೇಲೆ ಪರಿಣಾಮ ಬೀರುವ ಯಾವುದೇ ಸನ್ನಿವೇಶವಾಗಿರಬಹುದು ಅದು ಅಳಸದೇ ಹೋಗದಿದ್ದಾಗ ಚಿಂತೆಯಲ್ಲಿ ತೊಡಗಿಕೊಳ್ಳುತ್ತವೆ. "ಚಿಂತೆ" ಎನ್ನುವುದು ಮಕ್ಕಳಿಗೂ ಅನ್ವಯಿಸುತ್ತದೆಯೇ? ಎನ್ನವ ಪ್ರಶ್ನೆ ಕೆಲವರಿಗೆ ಉಂಟಾಗಬಹುದು ಆದರೆ ಇದು ಸತ್ಯ, ಇತ್ತೀಚಿನ ಅನೇಕ ಸಂಶೋಧನೆಗಳು ಈ ವಿಷಯವನ್ನು ದೃಢಪಡಿಸಿವೆ. ಮಗು ಜನಿಸಿ, ಅದರ ಶರೀರ ಬೆಳೆದಂತೆ ಅದರ ಮನಸ್ಸು ಸಹ ಬೆಳೆಯತೊಡಗುತ್ತದೆ. ಶಾರೀರಿಕ ಬೆಳವಣಿಗೆ ಮತ್ತು ಮಾನಸಿಕ ಬೆಳವಣಿಗೆ ಇವರೆಡೂ ಪರಸ್ಪರ ಪೂರಕವಾಗಿಯೇ ಮುಂದುವರಿಯುತ್ತವೆ. ಮಗುವಿನ ಜನನ ಒಂದು ಸಾಮಾನ್ಯ ಪ್ರಕ್ರಿಯೆ. ಇತರ ಪ್ರಾಣಿ ವರ್ಗಗಳಲ್ಲಿ ಮರಿಗಳು ಹೇಗೆ ಜನಿಸುತ್ತವೆಯೋ ಅದೇ ರೀತಿಯಲ್ಲಿ ಮನುಷ್ಯರಲ್ಲಿಯೂ ಸಹ ಜನನ ಪ್ರಕ್ರಿಯೆ ಸಾಮಾನ್ಯ".[೫] ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಮಗುವಿಗೆ ಮಾತಾನಾಡುತ್ತಾ ತಮಗೆ ಇಷ್ಟವಾದ ಮಾಧ್ಯಮದಲ್ಲಿ ಮುಂದುವರಿಯಲೂ ಅವುಗಳಿಗೆ ಸ್ವಾತಂತ್ರವಿರುವುದಿಲ್ಲ. ಆದರೂ ಕೂಡ ಕೆಲವು ಮಕ್ಕಳು ಹಟಹಿಡದ್ದಾದರು ಸಹ ತಮ್ಮ ಕೆಲಸ ಪೂರೈಸಿಕೊಳ್ಳುತ್ತವೆ. ಮಾನಸಿಕವಾಗಿ ಹೊರಬರಲು ಮಕ್ಕಳು ಇಷ್ಟಪಡುವರು. ಚಿತ್ರರಚಿಸುವ ಮಗುವನ್ನು ಅದರ ಪಾಡಿಗೆ ಬಿಟ್ಟರೆ ಸುಂದರವಾದ ಕಲಾಕೃತಿಗಳನ್ನು ನಿರ್ಮಿಸುತ್ತದೆ. ಮಕ್ಕಳು ಮಾನಸಿಕವಾಗಿ ಬೆಳೆವಣಿಗೆಯ ಹಂತದಲ್ಲಿ ಯಾವರೀತಿ ಚಿತ್ರಗಳನ್ನು ರಚಿಸುವರು ಮತ್ತು ತಮ್ಮ ಬುದ್ಧಿ ಸಾಮರ್ಥ್ಯ ಯಾವ ವಯಸ್ಸಿನಲ್ಲಿ ಮಗು ಚಿತ್ರಸುತ್ತೆ ಇಂತಹ ಕೆಲವು ಅಂಶಗಳು ಇಲ್ಲಿ ನೀಡಲಾಗಿದೆ.

ಚಿಕ್ಕಮಕ್ಕಳ ಚಿತ್ರಗಳ ವರ್ಗೀಕರಣ :

ಮಕ್ಕಳಲ್ಲಿ ಮಾನಸಿಕ ಬೆಳವಣಿಗೆ ಹಾಗೂ ವಯೋಮಾನಕ್ಕೆ ಅನುಸಾರ ಚಿತ್ರ ಬರವಣಿಗೆಯ ಹಂತಗಳು : ಆಯಾ ವಯಸ್ಸಿನಲ್ಲಿ ಮಕ್ಕಳ ಮನಸ್ಥಿತಿ ಕುರಿತು ಮತ್ತು ಬೆಳವಣಿಗೆಯಂತಹ ಚಿತ್ರಗಳು ಬರೆಯಬಲ್ಲರು ಎಂಬುದನ್ನು ಅವರು ಮಾನಸಿಕ ಸ್ಥಿತಿಗನುಗುಣವಾಗಿ ಮನೋವಿಜ್ಞಾನಿ ಶಿಕ್ಷಣ ತಜ್ಞ **ಹರ್ಬಾರ್ಟ ರೀಡ್** ವಿವರಿಸುತ್ತಾನೆ.

೧. **ಶಿಶುತನದ ಗೀಚುವಿಕೆ :** (೨ರಿಂದ ೫ ವರ್ಷದ ತನಕ) ಈ ವಯಸ್ಸಿನಲ್ಲಿ ಮಗುವಿನ ಕೈಯಲ್ಲಿ ಬಳಪ, ಪನ್ಸಿಲ್, ಪೆನ್ನುನಂಥ ವಸ್ತು ಸಿಕ್ಕರು ಗೀಚಾಡುವ ಪ್ರವೃತ್ತಿ ಬೆಳಿಸಿಕೊಳ್ಳುತ್ತವೆ.

೫. ಹೆಚ್. ಪರಮೇಶ್ವರ ಹೆಗಡೆ, ಮಕ್ಕಳ ವ್ಯಕ್ತಿತ್ವ ನಿರ್ಮಾಣ, ಪು–೪

೨. ಸಂಕೇತ ಪ್ರಧಾನ : (೫ರಿಂದ ೮ ವರೆಗೆ) ತನಕ ಸಂಕೇತ ಪ್ರಧಾನವಾಗಿ ಕಣ್ಣು ಮುಂದೆ ವಸ್ತುಯಿದ್ದರೂ ಆ ಚಿತ್ರರಚಿಸುವುದಿಲ್ಲಾ ತಮ್ಮ ಮನಸ್ಸಿಗೆ ಅಚ್ಚುವತ್ತಿದ್ದ ಚಿತ್ರವನ್ನು ರಚಿಸುತ್ತಾರೆ.

೩. ಮುಖ್ಯಾಂಶ ಸೂಚಿ ಹಂತ : (೮ರಿಂದ ೧೧ ವರ್ಷದ ವರೆಗೆ) ಎಂಟನೆಯ ವರುಷದವರೂ ಕೂಡಾ ವಸ್ತುಗಳನ್ನು ನೆನಪಿಸಿಕೊಂಡು ಚಿತ್ರಸುತ್ತಾರೆ. ಅಲ್ಲದೆ ವಸ್ತುಗಳ ಮುಖ್ಯ ರೂಪಗಳನ್ನು ಸೂಚಿಸುವ ಗುರುತುಗಳಿಂದಲೇ ಅವರು ತಮ್ಮ ಭಾವನಾ ನಿರೂಪಣೆ ಮಾಡುತ್ತಾರೆ.

೪. ತೋರಿಕೆಯ ನೈಜ ಹಂತ : (೧೧ರಿಂದ ೧೪ ವರ್ಷದವರೆಗೆ) ಕಲ್ಪನೆ ಮತ್ತು ಜ್ಞಾಪಕಗಳಿಂದ ಚಿತ್ರಿಸುವ ಸ್ಥಿತಿಯಿಂದ ನೋಡಿ ಚಿತ್ರಸುವ ದಿಸೆಗೆ ಒಲಿಯುತ್ತಾರೆ. ಗಮನಿಸಿದ ಒಂದೊಂದೇ ವಿಚಾರಗಳನ್ನು ಸೇರಿಸುತ್ತಾರೆ.

ಸಾಮಾನ್ಯವಾಗಿ ಹನ್ನೊಂದನೆಯ ವರ್ಷಕ್ಕೆ ಕಾಲಿಟ್ಟರೆಂದರೆ ಬದಿ ಮುಖದ ಚಿತ್ರಗಳನ್ನು ಮಕ್ಕಳು ರಚಿಸತೊಡಗುತ್ತಾರೆ. ಅದರಲ್ಲೂ ಕಣ್ಣು ಮಾತ್ರ ಬದಿಮುಖದಲ್ಲಿ ತೋರುವಂತೆ ಇರುವುದಿಲ್ಲ. ಇದ್ದರೂ ಮುಖದಲ್ಲಿ ಕಾಣುವಂತೆ ಉದ್ದವಾದ ಪೂರ್ತಿ ಕಣ್ಣನ್ನು ಚಿತ್ರಗಳು ನೆನಪಿಗೆ ಬರುತ್ತವೆ.

೫. ನೈಜ ಹಂತ : (೧೪ರಿಂದ ೧೬ ವರ್ಷದವರೆಗೆ) ನೈಜರೂಪ ಚಿತ್ರರಚನೆಯ ಅಭ್ಯಾಸವು ನಮ್ಮಲ್ಲಿ ಹಲವರಿಗೆ ಲಭ್ಯವಾಗುವುದಿಲ್ಲ. ಏಕೆಂದರೆ ಅಷ್ಟರಲ್ಲಿ ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿಗಳ ದೆಸೆಯಿಂದ ಮಕ್ಕಳು ಚಿತ್ರರಚನೆಯಲ್ಲಿ ಹೊತ್ತು ಕಳೆಯುವುದನ್ನು ಹಿರಿಯರು ಮೆಚ್ಚುವುದಿಲ್ಲ. ಸರ್ವತ್ರ ಪರೀಕ್ಷಾ ಪಾಠಗಳಿಗೆ ಗಮನಕೊಡಲಿ, ಪಾಸಾಗಲಿ ಎಂದು ಗುರು-ಹಿರಿಯರ ಹಾರೈಕೆಯಾಗಿದೆ. ಅಲ್ಲದೆ ಮೇಲಿನ ತರಗತಿಗಳಲ್ಲಿ ಮತ್ತು ಕಾಲೇಜುಗಳಲ್ಲಿ ನಮ್ಮಲ್ಲಿ ಚಿತ್ರಕಲಾ ಪಾಠವು ಇಲ್ಲದಾಗಿದೆ".[೬] ಈ ರೀತಿಯಾಗಿ ಮಕ್ಕಳು ವಯಸ್ಸಿಗೆ ಅನುಗುಣವಾಗಿ ಚಿತ್ರ ಬರೆಯುವ ಪ್ರಾರಂಭದ ಹಂತಗಳಾಗಿವೆ.

ಚಿಕ್ಕ ಮಕ್ಕಳಲ್ಲಿ ಮನೋವಿಕಾಸವನ್ನು ಸಾಧಿಸುವ ಚಿತ್ರಕಲಾ ಶಿಕ್ಷಣ ಅತ್ಯವಶ್ಯಕ ಮಕ್ಕಳಲ್ಲಿ ಸೌಂದರ್ಯ ಪ್ರಜ್ಞೆ, ನಿಷ್ಠೆ, ಕಲಿಕೆ ವಿಷಯದ ಗ್ರಹಿಕೆ, ಕ್ರಿಯಾತ್ಮಕ ಶಕ್ತಿಯ ವಿಕಾಸನಕ್ಕೆ ಚಿತ್ರಕಲೆ ಮುಖ್ಯವಾಗಿದೆ. ೨೦ನೇ ಶತಮಾನದ ಅಂತ್ಯದಲ್ಲಿ ನಾವು ಕಾಣುತ್ತಿರುವ ಮಕ್ಕಳಲ್ಲಿರುವ ಸೃಜನಶೀಲತೆ, ಬುದ್ಧಿಶಕ್ತಿಗೆ ನಾವು ಎಷ್ಟು ಪ್ರಶಂಶಿಸಿದರೂ ಸಾಲದು. ಇದಕ್ಕೆ ಇದುವರೆಗೆ ಉತ್ತೇಜನ ದೊರಕಿಲ್ಲ. ಇನ್ನು ಮುಂದೆ ಹೆಚ್ಚಿನ ಯೋಜನೆ ಅತ್ಯಗತ್ಯ. ಕಲಾವಿದ್ಯಾಭ್ಯಾಸದ ಮೌಲ್ಯಗಳನ್ನು ಆಲೋಚನೆ ಮಾಡಬೇಕಾದ್ದೂ ಸುಸಂಗತ. ಮಕ್ಕಳು ಆಟ, ಪಾಠ, ನೃತ್ಯ, ಚಿತ್ರಕಲೆ ಹೀಗೆ ಎಲ್ಲದರಲ್ಲೂ ಲವಲವಿಕೆಯಿಂದ ಭಾಗವಹಿಸುವ ಇವರು ಚಿತ್ರರಚಿಸುವುದೆಂದರೆ ಇವೆಲ್ಲಕ್ಕಿಂತ ಖುಷಿಯಿಂದ ತನ್ಮಯವಾಗುತ್ತಾರೆ. "ಕಲಿಕೆ ಮಕ್ಕಳ ವಿಕಾಸದಲ್ಲಿ ಬಹಳಷ್ಟು ಮುಖ್ಯವಾಗಿದ್ದು ಹೊಂದಾಣಿಕೆಯ

೬. ಬಿ.ಪಿ. ಬಾಯಿರಿ, ಚಿಕ್ಕಮಕ್ಕಳ ಚಿತ್ರಕಲೆ, ಪುಟ-೨೫
೭. ಜಿ. ರಮೇಶ ಉಪಾಧ್ಯಯನ, ಮಕ್ಕಳ ಮಾನಸಿಕ ಬೆಳವಣಿಗೆ, ಪುಟ-೫೨

ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ದೈಹಿಕ ಬೆಳವಣಿಗೆ ಅನುವಂಶಿಯತೆಯ ಕೊಡಗೆ, ಬುದ್ದಿಯ ಪ್ರಮಾಣ, ಆರೋಗ್ಯ, ಪರಿಸರದ ಉತ್ತೇಜನಗಳನ್ನು ಅವಲಂಬಿಸಿ ಕಲಿಕೆ ವೈವಿಧ್ಯಮಯವಾಗಿ ವಿಸ್ತಾರವಾಗುತ್ತದೆ. ಇನ್ನೊಂದು ಅತಿ ಮುಖ್ಯವಾದ ಕಲಿಕೆಯ ಮೂಲವೆಂದರೆ ಪ್ರೇರಣೆ, ದೈಹಿಕ ಅಗತ್ಯಗಳನ್ನು ಪೂರೈಸುವ ಅಂಶ ಮೊದಲ ಹಂತದ ಕಲಿಕೆಗಳಿಗೆ ಪ್ರೇರಣೆಯಾದರೆ, ಪರಿಸರದಲ್ಲಿ ಮಗು ಕಂಡುಕೊಳ್ಳುವ ಆಸಕ್ತಿ ಮತ್ತು ಕುತೂಹಲ ಪೂರ್ವ ಬಾಲ್ಯದಲ್ಲಿ ಕಲಿಕೆಗೆ ಪ್ರೇರಣೆಯಾಗಿರುತ್ತದೆ".[೭]

ಇಂದಿನ ಕೆಲವು ಮಕ್ಕಳನ್ನು ಗಮನಿಸಿದರೆ ಶಾಲೆ, ಮನೆಯಲ್ಲಿ ಓದುವುದು ಇದರಲ್ಲೆ ಮಗ್ನನಾಗುವಂತೆ ಮಕ್ಕಳನ್ನು ಪಾಲಕರು ಇವುಗಳ ಮೇಲೆ ಒತ್ತಡ ಹೇರಿ ಸ್ವತಂತ್ರವಾಗಿ ಸ್ವಲ್ಪ ಸಮಯವನ್ನು ನೀಡುವುದಿಲ್ಲಾ. ಇದರಿಂದ ಮನಸ್ಸಿನ ಮೇಲೆ ಹೆಚ್ಚು ಪರಿಣಾಮಗಳಾಗಿ ಬೇರೆ ಬೇರೆ ಚಟುವಟಿಕೆಯಲ್ಲಿ ತೊಡಗಿಕೊಳ್ಳುವುದು ಆಸಕ್ತಿ ಕಳೆದುಕೊಳ್ಳುತ್ತಾರೆ. ಕಾರಣ ಅತಿಯಾದ ಒತ್ತಡ ಈ ರೀತಿ ಮಕ್ಕಳು ಮೇಲೆ ಆಗುವ ತೊಂದರೆ ಪಾಲಕರೆ ಹೊರಬೇಕಾಗುತ್ತದೆ. ಆದುದರಿಂದ ಮಕ್ಕಳನ್ನು ಕೆಲವು ಸಮಯ ಸ್ವತಂತ್ರವಾಗಿ ಬಿಡಿ ಅವರನ್ನು ಅವರ ಪಾಡಿಗೆ ಬಿಟ್ಟರೆ ಸೃಜನಾತ್ಮಕ ಕ್ರಿಯೆಗಳು ಅವರಲ್ಲಿ ಹುಟ್ಟಿ ಹೊಸದನ್ನು ಏನಾದರೂ ಸಾಧಿಸುವ ಛಲ ಅವರಲ್ಲಿ ಹುಟ್ಟುತ್ತದೆ. ತುಂಬಾ ಆಸಕ್ತಿ ಮಕ್ಕಳಲ್ಲಿ ಕಂಡುಬರುವುದು. ಚಿತ್ರ ಬಿಡಿಸುವುದು ಇವುಗಳಿಗೆ ತುಂಬಾ ಖುಷಿ ಕೊಡುವಂತಹ ಮಾಧ್ಯಮ ಚಿತ್ರಕಲೆಯಾಗಿದೆ. ಆದರೆ ಪೋಷಕರ ಒತ್ತಾಯದ ಮೇರೆಗೆ ಬೇರೆ ವಿಷಯಗಳಗೆ ಅಥವಾ ಬೇರೆ ಮಾಧ್ಯಮಕ್ಕೆ ಒಳಗಾಗುತ್ತದೆ. ಆಯ್ಕೆ ಸ್ವಾತಂತ್ರವಿರುವುದಿಲ್ಲಾ. ಮಗುವಿಗೆ ಇದರಿಂದ ತಪ್ಪಿಸಿಕೊಳ್ಳಲಾಗದೆ ವಿಧಿಯಿಲ್ಲದೆ ಪೋಷಕರು ಹೇಳಿದ ಹಾಗೆಯೇ ಮಕ್ಕಳು ಶಿಕ್ಷಣದಲ್ಲಿ ಮುಂದುರೆಯುತ್ತವೆ. ಕೆಲವು ಮಕ್ಕಳು ಕಲೆಯೆಂದರೆ ಇಷ್ಟವಿದ್ದರು ಆಯ್ಕೆ ಬೇರೆಯಿರುವುದರಿಂದ ಕಲೆಯನ್ನು ಅಲ್ಲಿಗೇ ನಿಲ್ಲಿಸುತ್ತವೆ. ಇಂತಹ ಮಕ್ಕಳಲ್ಲಿ ಕೆಲವರು ಓದು ಬರೆಯುವುದರ ಜೊತೆಗೆ ಚಿತ್ರಕಲೆ ತಗೆಯುವುದನ್ನು ರೂಢಿಸಿಕೊಳ್ಳುತ್ತವೆ.

"ಒಂದು ಕಡೆ ಮಗುವಿನಲ್ಲಿ ಸಹಜವಾಗಿರುವ ಆಸೆ, ಆಕಾಂಕ್ಷೆ, ತನ್ನ ಸ್ವಂತ ಸ್ವಭಾವಗಳ ಮೂಲ ವ್ಯಕ್ತಿತ್ವದ ಘಟಕ. ಮತ್ತೊಂದು ಕಡೆ ಇತರರಿಂದ ಕಲಿತ ಆದರ್ಶಗಳ ನೈತಿಕ ತತ್ವಗಳ ಪ್ರತಿಬಂಧ. ಹೀಗೆ ಇವೆರಡನ್ನೂ ಒಂದಕ್ಕೊಂದು ಪೂರಕವಾಗಿ ಹೊಂದಿಸಿಕೊಳ್ಳುವ ಅಥವಾ ಸಮನ್ವಯ ಸಾಧಿಸುವ ಪ್ರಯತ್ನ ಮಗುವಿನಲ್ಲಿ ನಡೆಯುತ್ತಿದ್ದು, ಅದರ ಸಾಧನೆ ಬೇಗನೆ ಸಾಧಿಸುವುದಿಲ್ಲ. ಆದ್ದರಿಂದ ಆಗಾಗ ಮೂಲ ವ್ಯಕ್ತಿತ್ವಕ್ಕೂ, ಆದರ್ಶಕ್ಕೂ ಪರಸ್ಪರ ಸಂಘರ್ಷಗಳಾಗುತ್ತಿರುತ್ತವೆ. ಕೆಲವೊಮ್ಮೆ ದೊಡ್ಡವರಲ್ಲೂ ಸಹಜ ಪ್ರವೃತ್ತಿಗಳು ಆದರ್ಶದ ನಿಯಂತ್ರಣಕ್ಕೆ

ಸಿಗದೆ ಬೇರೆ ಬೇರೆಯಾಗಿಯೇ ನಿಂತಿರುವ ವ್ಯಕ್ತಿತ್ವದ ಸಂಘಟನೆ ಮತ್ತು ದುರ್ಬಲತೆ ಕಂಡುಬರುತ್ತದೆ.

ಸರಿಯಾದ ಸಮನ್ವಯ ಸಾಧಿಸಬೇಕಾದರೆ ಸಹಜತೆಗೂ ಆದರ್ಶಕ್ಕೂ ಬಹಳಷ್ಟು ಅಂತರವಿರಬಾರದು. ಅಂದರೆ ಅವು ಪರಸ್ಪರ ವಿರೊಧವಾಗಿ ನಿಲ್ಲದೆ ಹೊಂದಾಣಿಕೆಗೊಳ್ಳಲು ಅನುಕೂಲವಾಗುತ್ತದೆ. ಸಹಜ ಪ್ರವೃತ್ತಿಗೆ ತೀರ ವಿರೋಧವಾಗಿ ಅಥವಾ ತೀರಾ ಸಂಕುಚಿತವಾದ ಆದರ್ಶಗಳಿದ್ದಾಗ ಸಹಜ ಪ್ರಕಟಣೆಗೆ ಅವಕಾಶ ಸಿಗದಿರಬಹುದು. ಮಕ್ಕಳ ಮಾನಸಿಕ ಆರೋಗ್ಯದ ದೃಷ್ಟಿಯಿಂದ, ಮೊದಲಿನ ಹಂತಗಳಲ್ಲಿಯೆ ಮಕ್ಕಳು ಎಷ್ಟರಮಟ್ಟಿಗೆ ಈ ದ್ವಂದ್ವವನ್ನು ನಿವಾರಿಸಿಕೊಂಡು, ಸಂಘಟಿತ ವ್ಯಕ್ತಿತ್ವ ಉಳ್ಳವರಾಗುತ್ತಾರೆಂಬುದು ಮುಖ್ಯ ಅಂಶ"[೮] ಕಲೆಯು ಪ್ರತಿ ಮಗುವಿನಲ್ಲಿಯು ಚಿಗುರುವಡೆಯುವುದು. ಒಂದು ವರ್ಷದ ಮಗುವು ಸಹ ಕೈಯಲ್ಲಿ ಬಳಪ ಕೊಟ್ಟರೆ ತಾನಿದ್ದ ಜಾಗದಲ್ಲಿ ನೆಲೆ ಅಥವಾ ಗೋಡೆಗಳ ಮೇಲೆ ಗೀಚುತ್ತದೆ. ಅದಕ್ಕೆ ಇದನ್ನು ಹಿಡಿದರೆ ಬರೆಯುತ್ತಾ ತನ್ನ ಕಲ್ಪನೆ ಇಲ್ಲದಿದ್ದರು ಕೂಡ ಅದು ಗೀಚುವುದಕ್ಕೆ ಪ್ರಯತ್ನಿಸುತ್ತದೆ. ಇದೇ ಮುಂದಿನ ಹಂತದಲ್ಲಿ ಗೆರೆಯೇ ಚಿತ್ರವಾಗಿ ರಚಿಸುವಷ್ಟು ಮಗು ಪ್ರಯತ್ನ ಮಾಡುವುದಕ್ಕೆ ಪ್ರಾರಂಭವಾಗುತ್ತದೆ.

"ಸೃಜನಾತ್ಮಕ ಗುಣಗಳನ್ನು ವೃದ್ದಿಸುವುದು ಶಿಕ್ಷಣದ ಒಂದು ಗುರಿಯಾದರೆ. ಈ ಸೃಜನಾತ್ಮಕತೆಯನ್ನು ಹೊಂದಿರುವ ಕಲೆ ಚಿತ್ರಕಲೆ ಹೀಗಾಗಿ ಕಲೆ ಶಿಕ್ಷಣದ ಒಂದು ಪ್ರಮುಖ ಪ್ರಕ್ರಿಯಾಗಿ ಕಂಡುಬರುತ್ತದೆ. ಕಲೆ ಯಾವುದೇ ದೇಶದ ಆಯಾ ಸಂಸ್ಕೃತಿಯ ಬಹುಮುಖ್ಯವಾದ ಅಂಗ ಹಾಗೂ ಜನರ ಜೀವನವನ್ನು ಹಲವಾರು ರೀತಿಯಲ್ಲಿ ಪ್ರಭಾವಿತಗೊಳಿಸುವ ಗುಣ ವಿಶೇಷತೆಯನ್ನು ಹೊಂದಿದೆ. ಸಂಸ್ಕೃತಿಯ ಬಹು ಮುಖ್ಯವಾದ ಈ ಅಭಿವ್ಯಕ್ತಿ ಶಿಕ್ಷಣದಲ್ಲಿ ಸೇರಬೇಕಾದುದು ಕ್ರಮಪ್ರಾಪ್ತ."[೯] ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ಸಂಬಂಧಿಸಿದ ಮನೆಯಲ್ಲಿ ಶಾಲೆಯಲ್ಲಿ ಮತ್ತು ಸಮಾಜದಲ್ಲಿ ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಮಕ್ಕಳು ಸಾಕಷ್ಟು ಮಾನಸಿಕ ಒತ್ತಡಗಳಿಗೆ ಒಳಗಾಗಿದ್ದಾರೆ. ಎಷ್ಟೋ ಪ್ರಕರಣಗಳಲ್ಲಿ ಅವರಿಗೆ ಬೇಕಾದಂತಹ ಪ್ರೀತಿ, ಆಸರೆ, ಪ್ರೋತ್ಸಾಹ, ಮಾರ್ಗದರ್ಶನಗಳು ಹಾಗೂ ದೈಹಿಕ ಮತ್ತು ಮಾನಸಿಕ ಬೆಳೆವಣಿಗೆ ಬೇಕಾದಂತಹ ವಸ್ತುಗಳು ಪ್ರಚೋದನೆಗಳು ಸಿಗುವುದಿಲ್ಲ. ಇದರಿಂದ ಅವರು ವಿವಿಧ ಬಗೆಯ ಮಾನಸಿಕ ಅಸ್ವಸ್ಥಗಳಿಗೆ ತುತ್ತಾಗುತ್ತಾರೆ. ಆ ರೀತಿ ಕೆಟ್ಟ ಪರಿಣಾಮ ಬಿರುವಂತೆ ಮಕ್ಕಳಿಗೆ ಸೃಜನಶೀಲ ವ್ಯಕ್ತಿಯಾಗಿ ಬೆಳೆಯುವುದಕ್ಕೆ ಪ್ರೋತ್ಸಾಹ ನೀಡಬೇಕು. ಮಗು ಚಿತ್ರರಚಿಸುವುದು ದೊಡ್ಡ ಅಪಾದ ಎನ್ನುವ ರೀತಿಯಲ್ಲಿ ಪೋಷಕರು ಅವುಗಳಿಗೆ ಹೆದರಿಸಬೇಡಿ. ಕಲೆಯು ಅಜರಾಮರ ಕಲೆ ಎಲ್ಲಿ ಇರುತ್ತದೋ ಅಲ್ಲಿ ಕ್ರಿಯಾತ್ಮಕವಾಗಿ ಮತ್ತು ಸೃಜನಶೀಲತೆ ಮಕ್ಕಳಲ್ಲಿ ನೆಲಿಸಿರುತ್ತದೆ.

---

೮. ಜಿ. ರಮೇಶ ಉಪಾಧ್ಯಾಯ : ಮಕ್ಕಳ ಮಾನಸಿಕ ಬೆಳವಣಿಗೆ, ಪುಟ–೩೪

೯. ಡಾ. ಎಸ್.ಸಿ. ಪಾಟೀಲ (ಲೇ) (ಸಂ), ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ–೧೧೭

ಚಿಕ್ಕಮಕ್ಕಳ ಚಿತ್ರಕಲೆಯು ಅವರ ಬೆಳವಣಿಗೆಯ ಹಂತದಲ್ಲಿ ಏನೇ ಗೀಚಿದರು ಅದು creative ಆಗಿ ಕಾಣುತ್ತದೆ. ಎರಡೂ ವರ್ಷದ ಮಗು ರೇಖೆ ಎಳೆದಾಗ ಖುಷಿ ಪಡುತ್ತದೆ. ಆದರೆ ಅದು ಎಳೆಯುವ ಗೆರೆ ಚಿತ್ರವಾಗುತ್ತೆ. ಎನ್ನುವ ಕಲ್ಪನೆ ಅದಕ್ಕೆ ಮೂಡಿರುವುದಿಲ್ಲಾ ಹಾಗೆಯೇ ಮಗು ಬೆಳದಂತೆಲ್ಲಾ ವರ್ಷದಿಂದ ವರ್ಷಕ್ಕೆ ರೇಖೆಯಲ್ಲಿ ಹೊಸತನ ಕಂಡುಕೊಳ್ಳುವುದಕ್ಕೆ ಪ್ರಾರಭಿಸುತ್ತದೆ. ಐದರಿಂದ ಎಂಟು ವರ್ಷದ ಮಗು ಯಾವುದಾದರು ಚಿತ್ರವನ್ನು ನೆನಪಿಸಿಕೊಂಡು ಚಿತ್ರ ರಚಿಸುವ ಪ್ರಯತ್ನದಲ್ಲಿ ತೊಡಗಿ ಎದುರಿಗೆ ಇದ್ದ ವಸ್ತುಗಳನ್ನು ನೋಡಿಕೊಂಡು ರಚಿಸ ಬೇಕೆನ್ನುವ ಕಲ್ಪನೆ ಅವುಗಳಿಗೆ ಇಲ್ಲದ್ದಿದ್ದರೂ ಕೂಡಾ ಕಲ್ಪನೆಯ ಮೂಲಕ ಚಿತ್ರವನ್ನು ರಚಿಸುತ್ತವೆ. ಸಾಂಕೇತಿಕವಾಗಿ ರಚಿಸುವ ಚಿತ್ರಗಳ ಮೇಲೆ ಮಕ್ಕಳು ಕೇಂದ್ರಿಕರಿಸುತ್ತವೆ. ೮ರಿಂದ ೧೧ ವರ್ಷದ ಮಕ್ಕಳಲ್ಲಿ ಕಂಡುಬರುವ ಸಂಗತಿ ಎಂದರೆ ವಸ್ತು, ಪ್ರಾಣಿ, ಪಕ್ಷಿ, ಬೇರೆ ಬೇರೆ ಯಾವುದಾರನ್ನು ನೆನಪಿಕೊಂಡು ಚಿತ್ರಿಸುವುದೇ ಮುಖ್ಯಾಂಶ ಸೂಚಿ ಹಂತವೆಂದು ಹೇಳಬಹುದು. ಇಲ್ಲಿ ಮಕ್ಕಳು ತಮ್ಮಗೆ ಬೇಗ ಅರ್ಥವಾಗುವ, ಸ್ಪಷ್ಟವಾಗಿ ಗೋಚರಿಸುವ ವಸ್ತುಗಳನ್ನು ಮಾತ್ರ ಕಣ್ಣು ಮುಂದೇ ತಂದುಕೊಂಡು ಚಿತ್ರಸಿರುವರು. ಚಿತ್ರ ಬರೆಯವ ಮಗು ತನಗೇ ಇಷ್ಟವಾದ ಚಿತ್ರವನ್ನು ಪದೇ ಪದೇ ಅದೇ ಚಿತ್ರವನ್ನು ರಚಿಸುತ್ತದೆ. ಉದಾ: ಕೆಲವು ಮಕ್ಕಳು ಹೂವಿನ ಚಿತ್ರ ಅಥವಾ ಪ್ರಾಣಿ ಇತ್ಯಾದಿ ರಚಿಸುವ ಚಿತ್ರವು ತಮಗೇ ಹೆಚ್ಚು ನೆನಪಿಗೆ ಬರುವ ಚಿತ್ರವನ್ನು ಯಾವಗಲೂ ರಚಿಸುತ್ತಾ ಇರುತ್ತಾರೆ. ಇದಕ್ಕೆ ಕಾರಣ ಒಂದೇ ಚಿತ್ರಕ್ಕೆ ಕೇಂದ್ರಕರಿಸಿರುವ ಮಗು ಅದನ್ನು ಮೆದುಳುನಿಂದ ಅಳಿಸಿವುದಕ್ಕೆ ಆಗಲ್ಲಾ ಹಾಗಾಗಿ ಪದೇ ಪದೇ ಅದನ್ನೆ ಚಿತ್ರಿಸುತ್ತಾ ಮುಂದುವರದಿರುತ್ತದೆ. ಶಿಕ್ಷಕರು ಆದವರು ಮಗುವಿನಲ್ಲಿರುವ ಸೃಜನಶೀಲತೆಯನ್ನು ಬೇರೆ ಬೇರೆ ನೋಡಿದ ದೃಶ್ಯವನ್ನು ನೆನಪಿಸಿ ಹೊಸ ಚಿತ್ರ ಬರೆಯುವಾಗ ತಾಳ್ಮೆ ಸಂಯಮವಾಗಲಿ ಅವುಗಳಿಗೆ ಇರುವುದಿಲ್ಲಾ. ಬೇಗನೆ ಚಿತ್ರ ಪೂರ್ಣಗೊಳ್ಳಬೇಕು ಎನ್ನುವುದು ಅಪ್ಪೇಗೊತ್ತಿರುತ್ತದೆ. ಯಾವುದೇ ಹಿಂಜರಿಕೆಯಾಗಲಿ, ಒತ್ತಡವಾಗಲಿ ಇರುವುದಿಲ್ಲಾ ತನ್ನ ಪಾಡಿಗೆ ಚಿತ್ರ ಬರೆಯುತ್ತಾ ಮಗು ತಲ್ಲಿನವಾಗಿರುತ್ತದೆ.

ಚಿಕ್ಕ ಮಕ್ಕಳು ಚಿತ್ರಗಳಲ್ಲಿ ವರ್ಗಿಕರಣ ಎಂದು ಬಂದಾಗ ಮಗು ಬೆಳೆವಣಿಗೆ ಹಂತದಲ್ಲಿ ೨ ರಿಂದ ೫, ೫ ರಿಂದ ೧೦ ವರ್ಷದ ಮಗು ಯಾವ ರೀತಿ ಚಿತ್ರ ರಚಿಸಬಹುದು. ವರ್ಷದಲ್ಲಿ ಸಾಮಾನ್ಯವಾಗಿ ಮಕ್ಕಳು ತಾವು ಮಾತನಾಡುವ ಭಾಷೆ ಚಿತ್ರಗಳಿಗಿರುತ್ತವೆ. ರಚಿಸುವ ಚಿತ್ರ ಅದು ಅನುಕರಣೆಯಿಂದ ಕೂಡಿರಬಹುದು ಅಥವಾ ಸ್ವಂತ ಬುದ್ದಿ ಶಕ್ತಿಯಿಂದ ಆಗಿರಬಹುದು. ಚಿತ್ರಗಳನ್ನು ಮಕ್ಕಳು ರಚನೆ ಮಾಡುತ್ತಾ ಇರುತ್ತಾರೆ.

ಅನುಕರಣೆ ಚಿತ್ರ ಅಭ್ಯಾಸದ ವಿಧಾನ :

ಯಾವುದೇ ಚಿಂತೆ, ಸಮಸ್ಯೆ, ವಿಚಾರ ವಿನಿಮಯಗಳ ಬಂಧನವಿಲ್ಲದೆ ಎಳೆಯ ಮಕ್ಕಳು ಹಿರಿಯರ ಪ್ರತಿಯೊಂದು ಚಟುವಟಿಕೆಗಳನ್ನು ಅವಲಂಬಿಸುವರು. ತಾವು ಮಾತನಾಡುವ ಭಾಷೆ, ನಡೆ–ನುಡಿಗಳು ಮನೆಯಲ್ಲಿ ಹಿಂದಿನಿಂದ ನಡೆದುಬಂದ ಕುಶಲಕೈಗಾರಿಕೆಯ ಕೆಲಸಗಳು ಅನುಕರಣೆಯಿಂದ ಪುನರಾವರ್ತನೆಯಾಗಿ; ಅಲ್ಲದೆ ನ್ಯೂನತೆಗಳನ್ನು ನವೀನತೆಯಾಗಿ ಪರಿವರ್ತಿಸಿಕೊಂಡು ಬರುತ್ತಿರುವುದು ನಾವು ದಿನನಿತ್ಯ ಕಾಣುತ್ತಿರುವ ದೃಶ್ಯ ಅಂದರೆ ಈ ಅನುಕರಣೆಯ ಮನೋಭಾವನೆಯಿಂದ ಮಕ್ಕಳ ವೀಕ್ಷಣಾ ಸಾಮರ್ಥ್ಯದಲ್ಲಿಯೂ ವಸ್ತುಗಳ ಆಕಾರ, ಪ್ರಮಾಣ, ಬಣ್ಣ ಇತ್ಯಾದಿಗಳ ಅರಿಯುವಿಕೆಯ ಆಲೋಚನಾ ಸಾಮರ್ಥ್ಯವೂ ಒಳಗೊಂಡಿದೆ. ಕಲಿಕೆಯ ಹಂತದಲ್ಲಿ ಅನುಕರಣೆಯು ಅನುಭವಗಳ ಮೂಲಕ ಮಕ್ಕಳು ತಮ್ಮ ಜ್ಞಾನ ಪರಿವರ್ತನೆಗೊಳಿಸಿಕೊಳ್ಳುವ ಹಾಗೂ ವಿಕಾಸಗೊಳಿಸಿಕೊಳ್ಳುವ ಪ್ರಯತ್ನಕೆ ಪ್ರಾರಂಭಿಕ ಹಂತದ ಸುಲಭ ವಿಧಾನವಾಗಲಿದೆ”.[೧೦]

ಸಾಮಾನ್ಯವಾಗಿ ಮಾನವ ನಿರ್ಮಿತ ವಸ್ತುಗಳೆಲ್ಲವೂ ಆಕಾರದಲ್ಲಿ ಸಂದರ್ಶನವಾಗಿಯೇ ಇರುವುದರಿಂದ ವಸ್ತುಗಳ ಆಕಾರಗಳ ಕಲ್ಪನೆಗಾಗಿ ಸಂದರ್ಶನವಾಗಿರುವಂತಹ ಯಾವುದೇ ವಸ್ತುಗಳ ಚಿತ್ರ, ಸಂದರ್ಶನ ಆಕಾರದಲ್ಲಿರುವ ಅಲಂಕಾರಿಕ ನಕ್ಷಾ ಸುಳುವಿನ (ಮಕ್ಕಳು ಚಿತ್ರಿಸಲು ಸುಲಭವಿರುವಂತಹ) ಚಿತ್ರ ನಕಾಶೆ ಇತ್ಯಾದಿಗಳನ್ನು ಪ್ರಮಾಣದಲ್ಲಿ ಬದಲಾವಣೆ ಮಾಡಿ, ನೋಡಿ ಅನುಕರಿಸಿ, ಆಕಾರದಲ್ಲಿ ಬದಲಾವಣೆಯಾಗುವಂತೆ ಉದ್ಭವ ಸ್ಥಿತಿಯಲ್ಲಿ ಚಿತ್ರಸುವ ವಿಧಾನವು ಮಕ್ಕಳ ಕಲಾ ಕೌಶಲ್ಯತೆಗೆ ಸೂಕ್ತ ಅನುಭವವಾಗಲಿದೆ.

ಮಕ್ಕಳ ಮನಸ್ಸು ತುಂಬ ಸೂಕ್ಷ್ಮ. ಅವು ನೋಡಿದ ಯಾವುದೇ ದೃಶ್ಯಗಳಾಗಿರಬಹುದು ಒಂದು ಬಾರಿ ಗ್ರಹಿಸಿದರೆ ಮರೆಯುವುದಿಲ್ಲಾ. ಆ ರೀತಿಯಾಗಿ ಮಕ್ಕಳ ಮನಸ್ಸು ಚುರುಕಿನಿಂದ ಕೂಡಿರುತ್ತದೆ. ಚಿತ್ರ ರಚಿಸುವಾಗಲೂ ಮಕ್ಕಳು ಒಂದೇ ಕಡೆ ಕೇಂದ್ರಿಕರಿಸಿ ಚಿತ್ರರಚಿಸುವಾಗಲು ಮಕ್ಕಳು ಒಂದೇ ಕಡೆ ಕೇಂದ್ರೀಕರಿಸಿ ಚಿತ್ರ ಬರೆಯುತ್ತವೆ. ಮನುಷ್ಯ ಅಥವಾ ಪ್ರಾಣಿ ಇನ್ನು ಯಾವುದೋ ಚಿತ್ರವಾಗಿರಬಹುದು ಚಿತ್ರ ಬರಿತಾ ಬರಿತಾ ಅದರೊಳಗೆ ಮಗ್ನವಾಗಿ ತಾನೂ ಅಂದಕೊಂಡ ಹಾಗೆ ಚಿತ್ರ ಒಂದು ರೂಪಕ್ಕೆ ಬರುವರೆಗೂ ಅದಕ್ಕೆ ಸಮಧಾನ ಇರುವುದಿಲ್ಲ. ಮಾನಸಿಕವಾಗಿ ಪೂರ್ಣಗೊಳಿಸಬೇಕು ಅಂದುಕೊಂಡಿರುವ ಕೆಲಸ ಮುಗಿಯುವರೆಗೂ ನಿಲ್ಲಿಸುವುದಿಲ್ಲ. ಕೊನೆಗೆ ಚಿತ್ರ ಪೂರ್ಣಗೊಂಡ ಮೇಲೆ ಅದಕ್ಕೆ ಬಣ್ಣ ಹಾಕುವ ಆಲೋಚನೆ ಬಂದು ಆ ಚಿತ್ರಕ್ಕೆ ಇಂತಹ ಬಣ್ಣಹಾಕಬೇಕು ಅಂತ ಸ್ವಲ್ಪಮಟ್ಟಿಗೆ ತಿಳಿದಿರುತ್ತದೆ. ಉದಾ : ಒಂದು ಮನಷ್ಯ

---

೧೦. ಶಾಂತವೀರಣ್ಣ ಬೂಸನೂರು, ಕಲಾ ಶಿಕ್ಷಣ (ಚಿತ್ರಕಲಾ ಮಾರ್ಗದರ್ಶಿ), ಪುಟ–೬೦

ಬಣ್ಣ ಕಂದು, ಅಥವಾ ಕಂದುಗೆಂಪು ಈ ರೀತಿಯಾಗಿರುತ್ತದೆ. ಆದರೆ ಮಗು ಚಿತ್ರರಚಿಸಿದ ಮೇಲೆ ನಿಜವಾದ ಬಣ್ಣ ಚಿತ್ರಕ್ಕೆ ಹಾಕಲು ತಾನು ಮನಸ್ಸಿನಲ್ಲಿ ಬಂದ ಬಣ್ಣವನ್ನೆ ಲೇಪನ ಮಾಡುತ್ತದೆ. ಮುಖ, ಕಾಲು, ಕೈ, ಮನುಷ್ಯ ಚಿತ್ರಕ್ಕೆ ವಿರುದ್ಧವಾದ ಬಣ್ಣವನ್ನು ತುಂಬುತ್ತವೆ. ಮುಖದ ಬಣ್ಣ ಕಂದಾ ಆದಲ್ಲಿ ಅಲ್ಲಿ ಹಸಿರು, ನೀಲಿ, ಕೆಂಪು ಈ ರೀತಿಯಾಗಿ ಬೇರೆ ಬೇರೆ ರೀತಿಯಲ್ಲಿ ಮತ್ತು creative ಆಗಿ ಚಿತ್ರದಲ್ಲಿ ಬಣ್ಣಗಳನ್ನು ಬಳಕೆ ಮಾಡುತ್ತವೆ. ಮಕ್ಕಳ ಆಲೋಚನೆ ಭಿನ್ನ ಒಬ್ಬ ಕಲಾವಿದ ಮಾಡುವ ವಿಚಾರಕ್ಕೂ ಮಕ್ಕಳು ಮಾಡುವ ವಿಚಾರಕ್ಕೂ ತುಂಬ ವ್ಯತ್ಯಾಸವಿದೆ. ಇಂತಹ ಮಕ್ಕಳ ಕಲೆಯನ್ನು ಗಮನಿಸಿದ ಪಾಶ್ಚತ್ಯ ಪ್ರಖ್ಯಾತ ಕಲಾವಿದ ಪ್ಯಾಬ್ಲೋ ಪಿಕಾಸೋ ತಾನೋ ಮಕ್ಕಳಂತೆ ಚಿತ್ರರಚಿಸುವುದಕ್ಕೆ ಪ್ರಯತ್ನಿಸಿದ್ದಾನೆ. ಮಕ್ಕಳ ಕಲೆಗೆ ಈ ಕಲಾವಿದ ಪ್ರಭಾವಕ್ಕೆ ಒಳಗಾಗಿದ್ದಾನೆ.

"ಕಲೆ ಇಲ್ಲದೆ ಯಾವ ಬದುಕೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಕಲೆ ಎನ್ನುವುದು ನಾವು ಹಾಕಿಕೊಳ್ಳುವ ಕೋಟ್ ಇದ್ದ ಹಾಗಲ್ಲ. ಕಲೆ ಏನನ್ನು ಕೊಡಬಲ್ಲದು ಅದನ್ನು ಮಾತ್ರ ನಾವು ಸಂಪೂರ್ಣವಾಗಿ ಸ್ವಿಕರಿಸಲು ಸಾಧ್ಯ"[೧೧] ಹಾಗೆಯೇ ಮಕ್ಕಳ ಕಲೆಯು ಕೇವಲವಾಗಿ ಕಾಣಬಾರದು. ಅವುಗಳು ಕಲೆಯನ್ನು ಕಣ್ಣಾರೆ ನೋಡಿ ಆನಂದಸಬೇಕು. ಮಕ್ಕಳ ಮನಸ್ಸು ಹೂವಿನ ಹಾಗೆ ಮೃದು ಅವುಗಳಿಗೆ ಹಿಂಸೆ ಆಗಾದಂತೆ, ನೋವಾಗದಂತೆ ವರ್ತಿಸಬಾರದು. ಚಿತ್ರ ಬರೆಯುವ ಮಗು ಮುಂದೆ ದೊಡ್ಡ ಕಲಾವಿದನಾಗಿ ಬೆಳೆಯಬಹುದು. ಸಾಮಾಜಕ್ಕೆ ಒಳ್ಳೆಯ ಸಂದೇಶ ಕುರಿತಾದ ಕಲೆಯನ್ನು ಹೊರಸೂಸಬಹುದು. ಕಲೆಯು ಅಜರಾಮರವಾಗಿ ಉಳಿಯಬೇಕು.

ಮಕ್ಕಳು ಸಂವೇದನಾಶೀಲರಾಗಿ ಬೆಳೆಯಲು ಶಿಕ್ಷಣ ವ್ಯವಸ್ಥೆ ಕಲ್ಪಿಸಬೇಕು. ಮಕ್ಕಳ ಕಲೆಗೆ ಉತ್ತೇಜನ ನೀಡಿ ಇವುಗಳಿಗೆ ಒಳ್ಳೆಯ ಮಾರ್ಗದರ್ಶನ ಮುಖ್ಯ ಚಿತ್ರ ಬಿಡಿಸುವ ಮಗು ಕ್ರಿಯಾ ಶೀಲವಾಗಿ ರೂಪಗೊಳ್ಳಲು ವ್ಯವಸ್ಥಿತವಾದ ವೇದಿಕೆ ನಿರ್ಮಾಣವಾಗಬೇಕು. ನಾನು ಗಮನಿಸಿದ ಹಾಗೇ ಮಕ್ಕಳ ಕಲಾಕೃತಿಗಳು ವಾರದ ದಿನ ಪತ್ರಿಕೆಗಳಲ್ಲಿ ಮಕ್ಕಳು ರಚಿಸಿದ ಚಿತ್ರಗಳು ಕಂಡುಬರುತ್ತವೆ. ಉದಯವಾಣಿ, ಸಂಯುಕ್ತ ಕರ್ನಾಟಕ, ವಿಜಯವಾಣಿ ಇತ್ಯಾದಿ ಪತ್ರಿಕೆಗಳಲ್ಲಿ ಮಕ್ಕಳ ಕುರಿತಾದ ಚಿತ್ರಗಳು ಕಂಡುಬರುತ್ತದೆ. ಪತ್ರಿಕೆ ಮಾಡುವಂತಹ ಕೆಲಸ ಶಿಕ್ಷಣ ಇಲಾಖೆ ಮಕ್ಕಳ ಕಲೆಯನ್ನು ಬೆಳೆಸುವ ಕಾರ್ಯಕೈಗೊಳ್ಳಬೇಕು. ಇದರಿಂದ ಮಕ್ಕಳಿಗೆ ಒಂದು ಒಳ್ಳೆಯ ಜ್ಞಾನ ದೊರಕುತ್ತದೆ. ಮತ್ತು ಜೀವನದಲ್ಲಿ ಉತ್ಸಹ ಚಿಲುಮೆಯಾಗಿ ಹೊರಹೊಮ್ಮಲು ಇದು ಒಳ್ಳೆಯ ಮಾಧ್ಯಮ ಚಿತ್ರಕಲೆಯಾಗಿದೆ.


---

೧೧. ಪ್ರೊ, ಎಂ.ಎಚ್. ಕೃಷ್ಣಯ್ಯ (ಸಂ), ಕಲೆ ಮತ್ತು ರಸಸ್ವಾಧನೆ, ಪುಟ–೭

ಚಿಕ್ಕ ಮಕ್ಕಳು ಗೀಚಿದ ರೇಖಾ ಚಿತ್ರಗಳು










ವಯೋಮಾನಕ್ಕೆ ಅನುಸಾರ ಚಿಕ್ಕ ಮಕ್ಕಳ ಚಿತ್ರಗಳಲ್ಲಿ ಬರವಣಿಗೆಯ ಹಂತಗಳು







ಚಿತ್ರ-೧ - (೫ ರಿಂದ ೬ರ ವಯಸ್ಸು) ಚಿತ್ರ-೨








ಚಿತ್ರ - ೫ (ವಯಸ್ಸು ೧೦)




ಚಿತ್ರ - ೬ (೧೦ ರಿಂದ ೧೨ ರ ವಯಸ್ಸು



ಚಿತ್ರ- ೬






ಚಿತ್ರ- ೭ (೧೨ರಿಂದ ೧೪ರ ವಯಸ್ಸು) ಚಿತ್ರ-೮

ಅಧ್ಯಾಯ - ನಾಲ್ಕು

ಚಿಕ್ಕ ಮಕ್ಕಳ ಕಲಾ ಪರಿಕರಗಳು ಮತ್ತು ರಚನಾ ವಿಧಾನಗಳು



ಅಧ್ಯಾಯ – ೪

ಚಿಕ್ಕ ಮಕ್ಕಳ ಕಲಾ ಪರಿಕರಗಳು ಮತ್ತು ರಚನಾ ವಿಧಾನಗಳು

"ಇವತ್ತಿನ ಶಿಕ್ಷಣದಲ್ಲಿ ಮಕ್ಕಳ ಮುಕ್ತ ಮನಸ್ಸಿನಲ್ಲಿ ಮೂಡಬಹುದಾದ ಅಭಿವ್ಯಕ್ತಿಗೆ ರೂಪಕೊಡುವ ವ್ಯವಸ್ಥೆ ಅಥವಾ ಪರಿಸರ ಇಲ್ಲದಾಗಿದೆ. ಮುಖ್ಯವಾಗಿ ಚಿತ್ರಕಲೆ ಮನಸ್ಸಿನ ಭಾವಗಳಿಗೆ ಆವೇಗಗಳಿಗೆ ರೂಪಕೊಟ್ಟು ಕಳವಳ ಹಾಗೂ ತುಮುಲಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಮಾರ್ಗವಾಗಿರುವುದರಿಂದ, ಅಲ್ಲದೆ ಈ ಕ್ರಿಯೆಯಲ್ಲಿ ಒಂದು ಅಭಿವ್ಯಕ್ತಿಯನ್ನು ಕಂಡುಕೊಳ್ಳಬಹುದಾದ ಸಾಧ್ಯತೆ ಇರುವುದರಿಂದ ಮಕ್ಕಳ ಶಿಕ್ಷಣದಲ್ಲಿ ಚಿತ್ರಕಲೆಯು ಮಹತ್ವದ ಪಾತ್ರವಹಿಸುತ್ತದೆ. ಮಕ್ಕಳ ಮನೋವಿಜ್ಞಾನ ಅರಿತ ಶಿಕ್ಷಣತಜ್ಞರು ಈ ಮಾತನ್ನು ಒಪ್ಪಿಕೊಳ್ಳುತ್ತಾರೆ. ಇದನ್ನು ಅರಿತು ಕಲೆಯನ್ನು ಶಿಕ್ಷಣದಲ್ಲಿ ಸೂಕ್ತವಾಗಿ ಅಳವಡಿಸಿದಲ್ಲಿ ಮಕ್ಕಳಲ್ಲಿ ಪೂರ್ಣಪ್ರಮಾಣದ ಮಾನಸಿಕ ಬೆಳವಣಿಗೆಯನ್ನು ಕಾಣಬಹುದಾಗಿದೆ. ಮಕ್ಕಳಿಗೆ ರೇಖೆ ಹಾಗೂ ಬಣ್ಣಗಳಿಂದ ಮುಕ್ತವಾಗಿ ಆಟ ಆಡಲು ಬಿಟ್ಟು ಅಭಿವ್ಯಕ್ತಿಯನ್ನು ಕಂಡುಕೊಳ್ಳಲು ಅನುವು ಇದ್ದಾಗ, ಸೋಲು ಹಾಗೂ ಆಶಾಭಂಗವಾಗದ ಪರಿಸರ ದೊರೆತಾಗ ಸೃಜನಶೀಲತೆ ತಾನಾಗೇ ಸಹಜವಾಗಿ ಹೊರಹೊಮ್ಮುತ್ತದೆ.

ಮಕ್ಕಳ ಶಿಕ್ಷಣದಲ್ಲಿ ಕಲೆಗೆ ಹೆಚ್ಚಿನ ಸ್ಥಾನವಿದೆ. ಎಂದಾಕ್ಷಣ, ಮಕ್ಕಳನ್ನು ಕಲಾವಿದರನ್ನಾಗಿ ಮಾಡುವ ಶಿಕ್ಷಣ ಎಂದೇನೂ ಅರ್ಥವಲ್ಲ. ಆದರೆ ಈ ಕಲಾಶಿಕ್ಷಣದಿಂದ ಮಕ್ಕಳಲ್ಲಿ ತಮ್ಮ ಭಾವನೆಗಳಿಗೆ ರೂಪ ಕೊಡುವ ಒಂದು ಶಿಸ್ತು ಹಾಗೂ ಸರಣಿ ಬೆಳೆಯುತ್ತದೆ. ವಸ್ತು ಹಾಗೂ ಅದರ ಗುಣ, ರೂಪ ಹಾಗೂ ಸ್ವರೂಪ ಇವೆರಡನ್ನೂ ಅರ್ಥ ಮಾಡಿಕೊಳ್ಳುವ ಒಳ ಅರಿವು ಹಾಗೂ ಚೇತನ ಮೂಡುವಲ್ಲಿ ಸಹಕಾರಿಯಾಗುತ್ತದೆ. ಆದುದ್ದರಿಂದ ಶಿಕ್ಷಣ ಎಂದರೆ ನಿರ್ದೇಶಿಸುವುದಲ್ಲ.

ಸಂತೋಷದಲ್ಲಿ ಮುಕ್ತವಾಗಿ ಸಾಮರಸ್ಯದಿಂದ ಅಭಿವ್ಯಕ್ತಿಯನ್ನು ಕಂಡುಕೊಳ್ಳುವ ಪರಿಸರವನ್ನು ನಿರ್ಮಿಸುವುದು ನಿಜವಾದ ಶಿಕ್ಷಣ ಹಾಗೂ ಅಂತಹ ಸ್ಥಳವನ್ನು ವ್ಯವಸ್ಥಿತಗೊಳಿಸಿ ಮಗುವನ್ನು ಅಂಥಲ್ಲಿ ಸಂಘಟಿಸುವುದು ಶಾಲೆ ಆಗಬೇಕು. ಶಿಕ್ಷಕ ನಿರ್ದೇಶಕ, ಮಾರ್ಗದರ್ಶಿ ಸಲಹೆಗಾರ, ಸಹವಾಸಿ ಸಂಗಾತಿಯಾಗಬೇಕು. ಉತ್ತೇಜನ ಕೊಟ್ಟು ಮಗುವಿನ ಕಲ್ಪನಾ ಶಕ್ತಿ ಬೆಳಸಿ, ಸೃಷ್ಟಿಗೆ ಅವಕಾಶ ಕಲ್ಪಿಸುವ ಮನೋಭಾವದವನಾಗಿರಬೇಕು.[೧] ಇದರಿಂದ ಮಗುವಿನಲ್ಲಿ ಹೊಸ ಆಲೋಚನೆಗಳು ಮೈಗೂಡಿಸಲು ಶಿಕ್ಷಕರು ಮತ್ತು ಪೋಷಕರು ಪ್ರಯತ್ನಿಸಬೇಕು. ಚಿತ್ರ ಬರೆಯಲು ಅನುಕೂಲವಾಗುವ ವಸ್ತುಗಳು ಮಗುವಿಗೆ ಒದಗಿಸುವುದು ಬಹಳ ಮುಖ್ಯವಾಗಿದೆ.

ಚಿಕ್ಕ ಮಕ್ಕಳ ಚಿತ್ರಗಳ ಕಲಾ ಪರಿಕರಗಳು ಮತ್ತು ರಚನಾ ವಿಧಾನಗಳು : ಚಿಕ್ಕ ಮಕ್ಕಳು ಚಿತ್ರಕಲೆ ರಚಿಸುವಾಗ ಯಾವುದರ ಮೇಲೆ ರಚಿಸಬೇಕು ಎನ್ನುವ ಕಲ್ಪನೆ ಮಕ್ಕಳಲ್ಲಿ ಅರಿವಿಗೆ ತಂದುಕೊಂಡಿರುತ್ತವೆ. ಇಲ್ಲಿ ಬಳಸುವ ಮಾಧ್ಯಮ ಯಾವುದೇ ಆಗಿರಬಹುದು. ಚಿತ್ರಬಿಡಿಸುವ ಮಗು ತನ್ನಲ್ಲಿ ಅಡಿಗಿರುವ ಕಲೆ ಹೊರಹಾಕುತ್ತದೆ.

ಕಲಾ ಪರಿಕರಗಳು : "ಪುಟಾಣಿಗಳ ಬೆರಳುಗಳಿಗೆ ಹಿಡಿತ ಬಂದೊಡನೆ ಕೈಗೆ ಸಿಕ್ಕಿದ ಬಳಪ, ಸೀಮೆಸುಣ್ಣ, ಇದ್ದಿಲು, ಪೆನ್ಸಿಲ್ ಇತ್ಯಾದಿಗಳಿಂದ ಮನೆಯ ಗೋಡೆ, ನೆಲ, ಕೊನೆಗೆ ಸಿಕ್ಕಿದ ಪೇಪರ್, ಪುಸ್ತಕದ ಮೇಲೆ ವಿವಿಧ ರೀತಿಯ ವೈವಿಧ್ಯಮಯ ಗೆರೆಗಳನ್ನು ಗೀಚಬಹುದು. ದುಂಡನೆಯ ಆಕಾರದಲ್ಲಿ ಸುತ್ತಬಹುದು. ಸಣ್ಣ ಪುಟ್ಟ ಚಿತ್ರಗಳನ್ನು ರಚಿಸಿ ಇದು, ಕಾರು, ನಾಯಿ, ಬೆಕ್ಕು ಎಂದು ತೋರಿಸಿ ಚಪ್ಪಾಳೆ ತಟ್ಟುತ್ತಾ ಖುಷಿಯಿಂದ ನಗುತ್ತಾ ನಿಮ್ಮ ಪ್ರತಿಕ್ರಿಯೆಯನ್ನು ಅಪೇಕ್ಷಿಸಬಹುದು.

ಚಿಕ್ಕ ಮಕ್ಕಳು ತಮ್ಮ ಮನಸ್ಸಿನಲ್ಲಿ ಮೂಡಿದ ಚಿತ್ರಣವನ್ನು ಗೋಡೆ, ನೆಲ, ಇತ್ಯಾದಿಗಳ ಮೇಲೆ ಚಿತ್ರಿಸಿದಾಗ ಅಂತಹವುಗಳನ್ನು ಪೋಷಕರು ಅಸಹ್ಯಗೊಂಡು ಅಳಿಸಿ ಹಾಕಬೇಡಿ, ಹೀಯಾಳಿಸಬೇಡಿ, ಮಗುವಿನ ಮನಸ್ಸನ್ನು ನೋಯಿಸಿದರೆ ಸೃಜನಶೀಲ ಕ್ರಿಯೆ ಹಿನ್ನೆಡೆಗೆ ನಾವೇ ಕಾರಣವಾಗುತ್ತೇವೆ.

ಮಕ್ಕಳಲ್ಲಿರುವ ಸೃಜನ ಶಕ್ತಿಗೆ ಪ್ರೋತ್ಸಾಹಿಸಿ ಉತ್ಸಾಹ ತುಂಬಿದಾಗ ಮಗು ಸಂತೊಷಗೊಂಡು ತನ್ನಲ್ಲಿರುವ ಆಂತರಿಕ ಪ್ರತಿಭೆಯನ್ನು ಮತ್ತಷ್ಟು ಉಪಯೋಗಿಸಿಕೊಂಡು ಅನ್ವೇಷಣಾ ಮನೋಭಾವವನ್ನು ರೂಢಿಸಿಕೊಳ್ಳುತ್ತದೆ. ಎಳೆಯತನದಿಂದಲೇ ಮಕ್ಕಳಲ್ಲಿ ಚಿತ್ರಕಲೆಯ ಬಗ್ಗೆ ಒಲವು ಮೂಡಿಸಿದರೆ ಅವರಲ್ಲಿ ತಾಳ್ಮೆ, ಸಹನೆ, ಶಿಸ್ತು, ಸಂಯಮ, ಸಹಕಾರ ಮನೋಭಾವನೆ, ಸಂಶೋಧನಾ ಭಾವನೆಯೇ ಮೊದಲಾದ ಗುಣಗಳು ಸಹಜವಾಗಿಯೇ ಬೆಳೆಯುತ್ತದೆ.

---

೧. ಶಂಕರ ಪಾಟೀಲ: ಚಿತ್ರಕಲಾ ಚಿಂತನೆ– ಪುಟ–೬೮

ಚಿತ್ರಕಲಾ ತರಗತಿ ನಿಮ್ಮ ಮಗುವಿನಲ್ಲಿ ಕೊನೆಯ ಪಕ್ಷ ಸ್ವತಂತ್ರವಾಗಿ ಅಭಿವ್ಯಕ್ತಗೊಳಿಸಲಾದರೂ ಪ್ರೋತ್ಸಾಹಿಸಿ ಹುರಿದುಂಬಿಸುತ್ತದೆ. ಚಿತ್ರಕಲಾ ಹವ್ಯಾಸ, ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ಅವರಲ್ಲಿ ಆರೋಗ್ಯಕರವಾದ ವ್ಯಕ್ತಿತ್ವವನ್ನು ಪಡೆಯಲು ಜೀವನವನ್ನು ಶ್ರೀಮಂತಗೊಳಿಸಿಕೊಂಡು ಸೌಂದರ್ಯಯುತವಾಗಿ ಕಾಣುವಂತೆ ಮಾಡುತ್ತದೆ. ಅಲ್ಲದೆ, ಸತ್ಪ್ರಜೆಯಾಗಿ, ಶಾಂತಿ ಸಹಬಾಳ್ವೆ ಬೆಳಸಿಕೊಳ್ಳುವುದಲ್ಲದೆ, ತನ್ನಂತೆಯೇ ಇತರರಿಗೂ ಸ್ವತಂತ್ರವಾಗಿ ಜೀವಿಸಲು ಅಭಿವ್ಯಕ್ತಗೊಳಿಸಲು ಹಕ್ಕಿದೆ ಎಂಬ ಮನೋಭಿಪ್ರಾಯವನ್ನು ಹೊಂದಿ 'ಬಾಳಿ ಬದಕಲು' ಕಲಿಸುತ್ತದೆ.[೨]

ಮಕ್ಕಳಿಗೆ ಕಲಾ ಪರಿಕರಗಳು ಒದಗಿಸುವುದು : ಚಿಕ್ಕ ಮಕ್ಕಳು ಚಿತ್ರ ರಚಿಸುವಾಗ ಕಲಾ ಪರಿಕರಗಳು ತುಂಬ ಅವಶ್ಯಕವಾಗಿರುತ್ತದೆ.

* ದೊಡ್ಡ ದೊಡ್ಡ ಕುಂಚ (ಬ್ರೇಸ್)ಯಿರಬೇಕು. ಬಣ್ಣಗಳು, ಪ್ರಕರಣ ವರ್ಣಗಳು, ದೊಡ್ಡವಾದ ಪ್ಯಾಲಟ್, ಅನುಕೂಲವಾಗುವ ರೀತಿಯಲ್ಲಿ ಮಕ್ಕಳಿಗೆ ಕಲಾ ಪರಿಕರಗಳು ಒದಗಿಸಬೇಕು.

* ಎಲ್ಲಾ ಪರಿಕರಗಳು ಇರುತ್ತವೆ. ಆದರೆ ಬ್ರೆಸ್ ಹೇಗೆ ಬಳಸಬೇಕು, ಬಣ್ಣ ಹೇಗೆ ಹಾಕಬೇಕು ಎಂದು ಶಿಕ್ಷಕರು ಹೇಳಿಕೊಡಬೇಕು.

* ದೊಡ್ಡದಾದ ಡ್ರಾಯಿಂಗ್ ಪೇಪರ್ Free hend ಆಗಿ ಮಕ್ಕಳಿಗೆ ಚಿತ್ರ ರಚಿಸುವ ವ್ಯವಸ್ಥೆ ಕಲ್ಪಿಸಬೇಕು.

* ಡ್ರಾಯಿಂಗ್ ಬೋರ್ಡ್, ಡ್ರಾಯಿಂಗ್ ಪೆನ್ನುಗಳು, ಕಂಪಾಸ ಪೆಟ್ಟಿಗೆ, ಪೆನ್ಸಿಲ್, ರಬರ್, ಬಣ್ಣಗಳು, ಪೊಟು ಪಟ್ಟಿ, ಕುಂಚಗಳು, ಉಸಕಿನ ಕಾಗದ (ಪೆನ್ಸಿಲ್‌ಗಳನ್ನು ಮನುಚಗೊಳಿಸಲು) ಬಣ್ಣದ ಕಾಗದಗಳು, ಪೆಸ್ಟಲ್‌ಗಳು. ಮುಂತಾದವುಗಳನು ಒದಗಿಸಬೇಕು.

ಈ ರೀತಿಯಾಗಿ ಮಕ್ಕಳಿಗೆ ಕಲಾಪರಿಕರಗಳು ಅಗತ್ಯವಾಗಿ ಬೇಕಾಗುತ್ತದೆ. ಯಾವಾಗಲೂ ಓದು ಬರಹಗಳಲ್ಲಿಯೇ ಮಕ್ಕಳಿಗೆ ಒತ್ತಡ ಹೇರುವ ಪೋಷಕರಿಂದ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಓದು ಬರಹಕ್ಕಿಂತ ಬೇರೆ ವಿಷಯಗಳಲ್ಲಿ ಮಕ್ಕಳನ್ನು ತೊಡಗಿಸುವುದು ಬಹಳ ಮುಖ್ಯ ಚಿತ್ರ ರಚಿಸುವುದು, ಕರಕುಶಲಕಲೆಗಳು, ಹಾಡು, ನಾಟಕ, ನೃತ್ಯ ಇತ್ಯಾದಿ ಮಾಧ್ಯಮದಲ್ಲಿ ಮಕ್ಕಳಿಗೆ ಅವಕಾಶ ಕಲ್ಪಿಸಿ ಕೊಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಆಗಿದೆ. ಎಲ್ಲಾ ಕಲೆಗಳಲ್ಲೂ ಭಾಗವಹಿಸುವ ಮಗು ಚಿತ್ರ ಬರೆಯುವುದಕ್ಕೆ ಉತ್ಸಕುನಾಗಿ ಆನಂದ ಪಡುತ್ತದೆ. ಅದಕ್ಕೆ ಎಲ್ಲಾ ರೀತಿಯ ಅವಕಾಶ, ಚಿತ್ರಕಲೆ ಸಂಬಂಧಿಸಿದ ಪುಸ್ತಕ, ಡ್ರಾಯಿಂಗ್ ಬುಕ್ಸ್, ಬಣ್ಣದ ಕ್ರೆಯಾನ್ಸ್ ಇವುಗಳನ್ನು ಉಪಯೋಗಿಸಿ ಬರಿಯಲು ಅನುವು ಮಾಡಿಕೊಡಬೇಕು.

---

೨. ಎನ್. ವಿಶ್ವರೂಪಾಚಾರ್: ಕಲಾ ಮನೋವಿಜ್ಞಾನ–ಪುಟ–೨೬

ಜೊತೆಗೆ ಮಕ್ಕಳಿಗೆ ಒಳ್ಳೆಯ ಪಾಠ ಹೇಳುವುದು ಮುಖ್ಯವಾಗಿದೆ. ಪರಿಕರಗಳ ಬಗ್ಗೆ ಅರಿವು ಮೂಡಿಸುವುದು, ಚಿತ್ರ ಬರೆಯಲು ಯಾವುದೇ ಅವಶ್ಯಕ ಹೇಗೆ ರಚಿಸಬೇಕು ಎಂದು ಶಿಕ್ಷಕರು ಹೇಳಬೇಕು. ವಸ್ತುವಿನ ಆಕಾರ, ಪ್ರಮಾಣ, ಬಣ್ಣ ಮೊದಲಾದ ವಿವರಣೆಯನ್ನು ಮಕ್ಕಳಿಗೆ ತಿಳಿಸಿಕೊಡಬೇಕು.

ರಚನಾ ವಿಧಾನ : ಮೇಲೆ ತಿಳಿಸಿದ ಹಾಗೆ ಮಕ್ಕಳಿಗೆ ಚಿತ್ರ ಬರೆಯಲು ಕಲಾ ಪರಿಕರಗಳು ಎಷ್ಟು ಮುಖ್ಯವೋ ರಚನಾ ವಿಧಾನ ಸಹ ಅಷ್ಟೇ ಮುಖ್ಯ. ಯಾವುದರ ಮೇಲಾದರೂ ಸರಿ ಮಕ್ಕಳು ಪೆನ್ಸಿಲ್‌ನಿಂದ ಆಗಿರಬಹುದು, ಕಲರ್ ಪೆನ್ಸಿಲ್‌ನಿಂದ ಮಾಡಲಿ, ಬಣ್ಣಗಳಿಂದ ಮಾಡಲಿ ಅಥವಾ ಬ್ರಷ್‌ದಿಂದ ಮಾಡಲಿ, ಕ್ರೆಯನ್ಸ್ ಬಳಸಲಿ ಯಾವುದರಿಂದ ಉಪಯೋಗ ಮಾಡಲಿ ಅದರಿಂದ ಕಲಾಕೃತಿ ನಿರ್ಮಾಣ ಮಾಡುವುದರಿಂದ ಈ ರಚನಾ ವಿಧಾನಗಳು ಮಕ್ಕಳಿಗೆ ಅವಶ್ಯಕವಾಗಿ ಬಳಕೆಯಾಗುತ್ತವೆ.

ಮಕ್ಕಳಿಗೆ ಚಿತ್ರ ರಚಿಸುವ ವಿಧಾನ ತಿಳಿಸುವುದು : ಸಾಮಾನ್ಯವಾಗಿ ಮಕ್ಕಳ ಕೈಯಲ್ಲಿ ಡ್ರಾಯಿಂಗ್ ಪೇಪರ್ ಕೊಟ್ಟರೆ ಚಿತ್ರರಚಿಸಲು ಪ್ರಾರಂಭಿಸುತ್ತವೆ. ಯಾಕೆಂದರೆ ಅವುಗಳ ಮನಸ್ಸು ಹಾತೋರೆಯುತ್ತಿರುತ್ತದೆ. ಆಗ ಶಿಕ್ಷಕರು ಪ್ರವೇಶಿಸಿ ಕೆಲವು ಮಾಹಿತಿ ತಿಳಿಸಬೇಕು. ಅವಸರ ಬೇಡ ನಿಧಾನವಾಗಿ ಚಿತ್ರ ರಚನೆ ಮಾಡಿ, ಎಲ್ಲರೂ ಸುಂದರವಾಗಿ ಚಿತ್ರ ಬರೆಯಲು ಹೇಳುವುದು.

"ಮಕ್ಕಳು ಚಿತ್ರವನ್ನು ಚಿಕ್ಕದಾಗಿ ರಚಿಸುವುದುಂಟು. ಆಗ ಅವರೊಡನೆ ಚಿತ್ರವನ್ನು ದೊಡ್ಡದಾಗಿ ಮಾಡಲು ಹೇಳಬೇಕು. ಕೆಲವರ ಚಿತ್ರಗಳಲ್ಲಿ ದೋಷಗಳು ಕಂಡುಬಂದರೆ ಅವರನ್ನು ಆ ಬಗ್ಗೆ ಹೆಚ್ಚು ಹೀಯಾಳಿಸಬಾರದು. ಅವರಿಗೆ ಕಟುವಾಗಿ ಹೇಳಿದರೆ "ಹಾಗೆ ಮಾಡಬಾರದಂತೆ, ಹೀಗೆ ಮಾಡಬಹುದೋ? ಕೂಡದಾ? ನನಗಿದೆಲ್ಲ ತಿಳಿಯೋದಿಲ್ಲ" ಎಂಬ ಶಂಕೆಗಳುಂಟಾಗಿ ಆತ್ಮ ವಿಶ್ವಾಸ ಕಡಿಮೆಯಾಗುತ್ತದೆ. ಹಾಗೆ ಆಗಲು ಅವಕಾಶ ನೀಡಬಾರದು, ಕಲಾಶಿಕ್ಷಣದಲ್ಲಿ ಎಲ್ಲರಿಗೂ ಆತ್ಮ ವಿಶ್ವಾಸ, ಆಸಕ್ತಿ ಹೆಚ್ಚಿಸಿ ಭಾವಪ್ರಕಾಶನ ಮಾಡಿಸಬೇಕು.

ಒಂದು ಮಗುವು, ಹೂ-ಗಿಡ, ಹಣ್ಣು ತುಂಬಿದ ಹರಿವಾಣ, ತುಳಸಿಕಟ್ಟೆ ಅಥವಾ ಆನೆಯ ಚಿತ್ರ ಬರೆಯಬಹುದು. ಆದರೆ ಮತ್ತೊಬ್ಬನಿಗೆ ಅವುಗಳನ್ನು ಚಿತ್ರಿಸಲು ಇಷ್ಟವಾಗದೆ ಮಣ್ಣಿನಿಂದ ಅವೇ ಹಣ್ಣುಗಳನ್ನೂ ಗೊಂಬೆಗಳನ್ನೂ, ಆನೆಯನ್ನೂ ನಿರ್ಮಿಸಲು ಅಪೇಕ್ಷ ಪಡುವುದುಂಟು. ಇನ್ನೊಬ್ಬಳು ಅದನ್ನೇ ಹೊಲಿದು ರಚಿಸಲು ಆಶಿಸಬಹುದು. ನಾಲ್ಕನೆಯವನು ಆ ಮೂರು ಮಾಧ್ಯಮಗಳನ್ನೂ ಇಷ್ಟ ಪಡದೆ, ಕಾಗದ ಹರಿದು ಜೋಡಿಸಿ ಹಚ್ಚಿ ಅದನ್ನೇ ಮಾಡಲು

ಬಯಸಬಹುದು. ಆದುದರಿಂದ ಮಾಧ್ಯಮ ನಿರ್ಬಂಧಗಳಿಲ್ಲದೆ ಅವರವರ ಒಲವಿಗನುಗುಣವಾಗಿ ರಚನೆ ಮಾಡಲು ಅವಕಾಶವಿರಬೇಕು. ಆದರೆ ಯಾವುದಾದರೂ ಒಂದು ಕೃತಿರಚನೆ ಮಾಡುವಂತೆ ಪ್ರೇರಣೆಯನ್ನು ಉಂಟುಮಾಡಬೇಕು. ಆ ನಿರ್ಮಾಣ ಕಾರ್ಯಕ್ಕಾಗಿ ಮೂರು ಮೂಲಗುಣಗಳ ಅವಶ್ಯಕತೆ ಇದೆ.

೧. ಪ್ರೇರಿತವಾದ ಭಾವನೆಗಳು ೨. ಪರಿಶೀಲಿಸುವ ದೃಷ್ಟಿ ೩. ನಿರ್ಮಿಸಲು ಪಳಗಿದ ಕೈ

ಇವುಗಳಲ್ಲಿ ಮೊದಲನೆಯದಕ್ಕಾಗಿ ಕಲಾಶಿಕ್ಷಕನ ಪಾತ್ರ ಮಹತ್ವದು. ಬಾಕಿ ಎರಡು ಗುಣಗಳು ಹಿಂದಿನಿಂದ ತಾವಾಗಿ ಪ್ರಾಪ್ತವಾಗುತ್ತವೆ.."[೩] ಮಗು ಯಾರು ಹೇಳದೆ ಸ್ವಯಂ ಪ್ರೇರಿತವಾಗಿ ಚಿತ್ರ ರಚಿಸುತ್ತದೆ. ಭಾವನೆಗಳ ವ್ಯಕ್ತಪಡಿಸುತ್ತಾ ಚಿತ್ರ ಬರೆಯುವುದಕ್ಕೆ ಮನಸ್ಸು ವ್ಯಕ್ತಪಡಿಸುತ್ತದೆ.

ಮಕ್ಕಳಲ್ಲಿ ಸೃಜನಶೀಲತೆ : ಮಗು ಏನೇ ಗೀಚಿದರೂ ಚೆಂದ. ಅದಕ್ಕೆ ಯಾವುದೇ ಇತಿಮಿತಿಯಿರುವುದಿಲ್ಲ. ಪೋಷಕರು ಮಕ್ಕಳನ್ನು ಸ್ವತಂತ್ರವಾಗಿ ಆಟವಾಡುವುದಕ್ಕೆ ಕಲೆಯಲ್ಲಿ ಭಾಗವಹಿಸುವಿಕೆ, ಮನರಂಜನಾತ್ಮಕ ಕಾರ್ಯಕ್ರಮಗಳಲ್ಲಿ ಹೀಗೆ ಬೇರೆ ಬೇರೆ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವವುದರ ಮೂಲಕ ಅವಕಾಶ ಕಲ್ಪಿಸಬೇಕು. ಇದರಿಂದ ಮಕ್ಕಳಲ್ಲಿ ಸೃಜನಶೀಲತೆ, ಕ್ರಿಯಾತ್ಮಕ ಆಲೋಚನೆಗಳು, ಹುಟ್ಟಿಕೊಳ್ಳುವುದಕ್ಕೆ ಇದೊಂದು ವೇದಿಕೆಯಾಗುತ್ತದೆ. ಇದರಿಂದ ಮಕ್ಕಳು ಬೆಳೆಯುತ್ತವೆ.

"ಸೃಜನಾತ್ಮಕತೆಯ ಸದಭಿರುಚಿಯುಳ್ಳ ಮಕ್ಕಳು, ಸ್ವಸ್ಥ ಸಮಾಜದಲ್ಲಿನ ತಂದೆ-ತಾಯಿ ಮತ್ತು ಅಧ್ಯಾಪಕರುಗಳು ಹೆಮ್ಮೆಯಿಂದ ಧರಿಸುವ 'ಮೆಡಲ್'ಗಳಂತೆ ಅವರಿಗೆ ಭಾಷೆ, ಕಲೆ, ವಿಜ್ಞಾನ, ಗಣಿತ ಇತ್ಯಾದಿ ವಿಷಯಗಳಂತೆ, ವಿಶಿಷ್ಟವಾದ ಜೀವನ ಶೈಲಿ (Lifestyle) ಗಳ ವಿಷಯವನ್ನೂ ಕಲಿಸಬೇಕಾದದ್ದು ಎಲ್ಲರ ಕರ್ತವ್ಯ ಬುದ್ಧಿ ಮತ್ತು ದೇಹಗಳೆರಡನ್ನೂ ವಿಕಾಸಗೊಳಿಸಬಲ್ಲ, ಸೃಜನಶೀಲ ಚಿಂತನೆಗಳನ್ನು ಜಾಗೃತಿಗೊಳಿಸಬಲ್ಲ ಚಟುವಟಿಕೆಗಳಿಂದ ಬೆಳೆವ ಮಕ್ಕಳ ಬೇರಿಗೆ ಪೋಷಣೆ ಒದಗಿಸಿದಂತಾಗುತ್ತದೆ. ಮಕ್ಕಳೆಲ್ಲರೂ ಒಂದೇ ರೀತಿ ಇರುವುದಿಲ್ಲವಾದ ಕಾರಣ ವ್ಯಕ್ತಿ ಬದಲಾವಣೆ ವ್ಯಕ್ತಿತ್ವವೂ ಬದಲಾಗುತ್ತದೆಂಬ ಅರಿವು ಸದಾ ಇರಬೇಕು. ಒಬ್ಬರಂತೆ ಇನ್ನೊಬ್ಬರಿಲ್ಲದಿರುವ ಕಾರಣ ಅನವಶ್ಯಕವಾಗಿ ಹೋಲಿಕೆ ಮಾಡದೆ, ಅವರ ವೈಯಕ್ತಿಕ ಆಸೆ-ಅಭಿಪ್ರಾಯ ಹಾಗೂ ಉತ್ಸಾಹಗಳಿಗೆ ಬೆಲೆ ನೀಡಬೇಕು. ಹಾಗೆಯೇ ಅವುಗಳಿಗೆ ತಕ್ಕ ಪರಿಹಾರವನ್ನೂ ಒದಗಿಸಿಕೊಡಬೇಕು.[೪]

ಮಗುವಿನ ಮನಸ್ಸು "ಹಾಲಿನ ಕೆನೆ"ಯಂತೆ ಸ್ನೇಹ, ಪ್ರೀತಿ ನಿಷ್ಕಲ್ಮಶ ಮನಸ್ಸಿನಿಂದ ಕೂಡಿರುತ್ತದೆ. ಮುದ್ದು ಮುದ್ದಾದ ಮನಸ್ಸಿನಿಂದ ಹಿತವನ್ನು ನೀಡುವ ಆನಂದವೇ ಮಗು,

೩. ಬಿ.ಪಿ. ಬಾಯಿರಿ: ಚಿಕ್ಕ ಮಕ್ಕಳ ಚಿತ್ರಕಲೆ- ಪುಟ-೬೮

೪. ಡಾ. ಕಿಕ್ಕೇರಿ ವೀರನಾರಾಯಣ, ಮಕ್ಕಳಲ್ಲಿ ಸೃಜನಶೀಲತೆ ವೃದ್ಧಿಸುವುದು ಹೇಗೆ, ಪು-೭೩

ಯಾವಾಗಲೂ ಖುಷಿ ಖುಷಿಯಿಂದ ಹೊಳೆಯುವ ಮನಸ್ಸಿಗೆ ಹಿತವನ್ನು ನೀಡುವುದೇ ಮಗು ನಿಜವಾದ ನಿಸರ್ಗದ ಮಡಿಲಿನಲ್ಲಿ ಬೆಳೆಯುವ ಮಗು ಉತ್ತಮ ಸಂಸ್ಕಾರ ಹೊಂದಿರುತ್ತದೆ. ಚಿಕ್ಕ ಚಿಕ್ಕ ಮಕ್ಕಳ ಮನಸ್ಸು ಜೇಡಿಮಣ್ಣಿನ ಹಾಗೆ ಮಗುವನ್ನು ಗುರ್ತಿಸಿ ಯಾವ ಕಲೆಯಲ್ಲಿ ಆಸಕ್ತಿಯಿದೆ ಎಂದು ತಿಳಿದು ಅದರಲ್ಲಿ ಆ ಮಗುವನ್ನು ಉತ್ತೇಜಿಸುವುದು ಶಿಕ್ಷಕರ ಕರ್ತವ್ಯವಾಗಿದೆ. ಮಕ್ಕಳಿಗೆ ಮುದ ನೀಡುವಂತಹ ರೀತಿಯಲ್ಲಿ ಶಾಲಾ ಶಿಕ್ಷಣವೂ ದೊರೆಯಬೇಕಾಗಿದೆ. ನಾವು ಏನು ಮಾಡುತ್ತೀವೋ ಮಕ್ಕಳು ಅದನ್ನೇ ನೋಡಿ ಕಲಿಯುತ್ತವೆ. ಎಂಬುದನ್ನು ಮೊದಲ ಶಿಕ್ಷಕರು ಮತ್ತು ಪೋಷಕರು ಅರಿತಿರಬೇಕು.

ಮಗುವೂ ಪ್ರಕೃತಿಯಂತೆ ಅದು ಪ್ರಕೃತಿಯ ಅವಿಭಾಜ್ಯ ಅಂಗ ಮಗುವಿನ ಬೆಳವಣಿಗೆಯಲ್ಲಿ ಇನ್ನೇನು ತಾನೇ ಬೇಕು? ಮಗು ತನ್ನ ನಿಸರ್ಗ ಪ್ರೇಮವನ್ನು ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಅರ್ಥಮಾಡಿಕೊಂಡು ಹೋಗಬೇಕು. ಮಕ್ಕಳಲ್ಲಿ ಪ್ರಕೃತಿ ಮಾತೆಯ ವಿಶ್ವಾಸ, ಗೌರವ ಮೂಡುವಂತೆ ಮಾಡುವುದು ನಮ್ಮ ನಿಮ್ಮ ಕರ್ತವ್ಯವಾಗಿದೆ. ನಿಸರ್ಗದ ಮೂಲಭೂತ ಗುಣಗಳಾದ ಶಾಂತಿ, ಸಹನೆ, ಕ್ಷಮೆಗಳನ್ನು ಮಕ್ಕಳಲ್ಲಿ ಮೂಡಿಸಬೇಕು.

"ಚಿಕ್ಕ ಮಕ್ಕಳಿಗೆ ತಮ್ಮ ಸುಂದರವಾದ ಭಾವನೆಗಳನ್ನು ವ್ಯಕ್ತಪಡಿಸಲು ತಮ್ಮ ಕೌಶಲ್ಯವನ್ನು ಪಳಗಿಸಿ ಪ್ರಯೋಗ ಮಾಡುವ ಕಲೆಗಿಂತ ಉತ್ತಮವಾದದ್ದು ಯಾವುದು ಇರಲಾರದು. ಮಕ್ಕಳ ಭಾವನಾತ್ಮಕ ಬೆಳವಣಿಗೆಯಾಗಬೇಕಾದರೆ ಈ ಭಾವನೆಗಳನ್ನು ಅನೇಕ ಮಾಧ್ಯಮಗಳ ಮೂಲಕ ವ್ಯಕ್ತಪಡಿಸಲು ಮುಕ್ತ ಅವಕಾಶ ದೊರೆಯಬೇಕು. ಆದರೆ ಇಂಥ ಅವಕಾಶ ಬಾಲಕಾರ್ಮಿಕರಿಗೆ ಸಿಗುತ್ತಿಲ್ಲ. ಒಂದೊಂದು ಮಗುವು ತನ್ನ ಸ್ವಭಾವಕ್ಕೆ ಅನುಗುಣವಾಗಿ ವಿಭಿನ್ನ ಮಾಧ್ಯಮಗಳ ಮೂಲಕ ಭಾವನೆಗಳನ್ನು ಸೃಜನಶೀಲವಾಗಿ ವ್ಯಕ್ತಪಡಿಸಬಲ್ಲದು."[೫] ಮಕ್ಕಳಲ್ಲಿ ಜಾತಿ, ನೀತಿ, ಬೇದ, ಭಾವ ಯಾವುದೂ ಗೊತ್ತಿರದ ಮುಗ್ಧ ಮನಸ್ಸಿನವರು ತಮ್ಮ ಸಹಪಾಠಿಗಳ ಜೊತೆ ಆಡಿನಲಿಯಲು ಎಲ್ಲಿಲ್ಲದ ಖುಷಿ. ಅವರಿಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ಕಲಾ ಸ್ಪರ್ಧೆಗಳಲ್ಲಿ, ಸಂಗೀತ ಕಚೇರಿಗಳಲ್ಲಿ ಎಲ್ಲಾ ಜಾತಿಯ ಮಕ್ಕಳು ಒಂದಾಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತವೆ. ಮಗು ಒಂಟಿಯಾಗಿ ಇರಲೂ ಬಯಸುವುದಿಲ್ಲ. ಎಲ್ಲರೂ ಇರಬೇಕು ಅಂದರೆ ಅವುಗಳಿಗೆ ಆನಂದ. ಶಾಲೆಗಳಲ್ಲಿ ಚಿತ್ರಕಲಾ ಸ್ಪರ್ಧೆ ಅಥವಾ ಕ್ಲಾಸ್‌ಗಳು ನಡೆದರೆ ಎಲ್ಲರೂ ಒಟ್ಟಿಗೆ ಸೇರಿ ಸ್ಪರ್ಧೆಗಳಲ್ಲಿ ತಾರತಮ್ಯವಿಲ್ಲದೇ ಭಾಗವಹಿಸುತ್ತಾರೆ.

ಮಗು ಚಿತ್ರ ರಚಿಸುವುದಕ್ಕೆ ಅವಕಾಶ ಕಲ್ಪಿಸಿ ಅವುಗಳಿಗೆ ಕಲಾ ಪರಿಕರಗಳು ಒದಗಿಸುವುದು ನಮ್ಮೆಲ್ಲರ ಕರ್ತವ್ಯ. ಮುಕ್ತ ಮನಸ್ಸಿನಿಂದ ಕೂಡಿದ ಮಗುವಿನ ಆಸೆ, ಆಕಾಂಕ್ಷೆ, ಹೊಂದಿರುತ್ತವೆ.

೫. ಡಾ. ಯಮನೂರಪ್ಪ ಅಣ್ಣಗೇರಿ, ಬಾಲ ಕಾರ್ಮಿಕರು, ಪು–೮

ಮಕ್ಕಳಿಗೆ ಅತಿಯಾದ ಒತ್ತಡ ಸರಿಯಲ್ಲ. ಓದುವುದರ ಜೊತೆಗೆ ಕಲಾ ಚಟುವಟಿಕೆಯಲ್ಲಿ ತೊಡಗಿಕೊಳ್ಳುವಂತಹ ಅವಕಾಶ ಕಲ್ಪಿಸಬೇಕು.

ಶಿಕ್ಷಣದಲ್ಲಿ ಕಲೆ : ಶಿಕ್ಷಣಕ್ಕೆ ಇವತ್ತಿನ ಸಮಾಜದಲ್ಲಿರುವ ತಿಳುವಳಿಕೆಯು ಮಗುವು ಓದಿ ಬರೆದು ಪದವೀಧರನಾಗಿ Doctor, Engineer ಆಗಬೇಕೆಂಬುದೊಂದೇ ಉದ್ದೇಶದಿಂದ ಮಕ್ಕಳನ್ನು ಪಾಲಕರು ಶಾಲೆಗೆ ಕಳುಹಿಸುತ್ತಾರೆ. ಶಿಕ್ಷಕರು ಮಗುವು ಶಾಲೆಗೆ ಒಳ್ಳೆ ಫಲಿತಾಂಶ ತಂದರೆ ಸಾಕೆಂಬ ಒಂದೇ ಉದ್ದೇಶದಿಂದ ಕಲಿಸುತ್ತಾರೆ. ನಿಜವಾದ ಶಿಕ್ಷಣದ ಗುರಿಯನ್ನಾಗಲಿ ಇಂದಿನ ಸಮಾಜದಲ್ಲಿ ಶಿಕ್ಷಕರು ಹಾಗೂ ಪಾಲಕರು ಪಾಲಿಸದಿರುವುದು ನಮ್ಮ ಮಕ್ಕಳ ದುರಾದೃಷ್ಟವೇ ಸರಿ. ಯಾರು ಮಕ್ಕಳಲ್ಲಿ ಕ್ರಿಯಾತ್ಮಕ ಶಕ್ತಿಯನ್ನು ಬೆಳೆಸಬೇಕೋ ಅವರೇ ಅದರ ಬಗ್ಗೆ ಅಸಡ್ಡೆಯಾಗಿ ಕೇವಲ ಫಲಿತಾಂಶ ಒಂದೇ ಗುರಿಯನ್ನಾಗಿಟ್ಟು ಕಲಿಸಿದರೆ ಸಮಾಜದಲ್ಲಿ ಎಂತಹ ವಿದ್ಯಾವಂತರನ್ನು ಸೃಷ್ಟಿಸಲು ಸಾಧ್ಯ.

ಮಗುವು ಮನೆಯಲ್ಲಲ್ಲದೆ ಜೀವನದಲ್ಲಿ ಬದುಕಲು ಬೇಕಾದ ವಿಷಯಗಳ ಬಗ್ಗೆ ತಿಳಿಯಬೇಕಾದ ಸ್ಥಳ ಶಾಲೆ ತಿಳಿಸಬೇಕಾದವನ್ನು ಶಿಕ್ಷಕ ಆದರೆ ಇಂದಿನ ಶಿಕ್ಷಣದಲ್ಲಿ ಈ ಯಾವ ವಿಷಯಗಳಿಗೂ ಮಹತ್ವವಿಲ್ಲದೆಯೆ ಹೇಗೋ ಸಾಗುತ್ತಾ ಇದೆ. ಆದ್ದರಿಂದಲೇ ಎಲ್ಲರೆಡೆಯೂ ಅಸಮಾಧಾನ ವಾತಾವರಣ ಹರಡಿರುವುದು ಕಂಡು ಬರುತ್ತದೆ. ಸಮಾಜದಲ್ಲಿ ಈ ಕೊರತೆಗಳನ್ನು ತುಂಬಲು ಶಿಕ್ಷಕರು ಹಾಗೂ ಪಾಲಕರು ಅವರವರ ಜವಾಬ್ದಾರಿಯನ್ನರಿತು ಮಕ್ಕಳಲ್ಲಿರುವ ವಿಚಾರಾತ್ಮಕ, ಭಾವನಾತ್ಮಕ, ಮಾನಸಿಕ ಬೆಳವಣಿಗೆಗೆ ನಾಂದಿಯಾಗಿ ತನ್ನ ಬದುಕನ್ನು ಸುಂದರ ಹಾಗೂ ಜನೋಪಯೋಗಿ ಆಗುವಂತೆ ರೂಪಿಸಲು ಅದಕ್ಕೆ ಬೇಕಾದ ಪರಿಸರ ನಿರ್ಮಾಣ ಮಾಡಿ ಪಾಠಗಳೊಂದಿಗೆ ಮೇಲ್ಕಂಡ ಶಿಕ್ಷಣದ ಮೂಲ ಉದ್ದೇಶಗಳನ್ನು ಯಶಸ್ವಿಯಾಗಿ ನಡೆಸಲು ಪ್ರಯತ್ನಿಸಬೇಕು.

ಈ ಉದ್ದೇಶಗಳನ್ನು ಪೂರೈಸಲು ಕಲಾಮಾಧ್ಯಮದಿಂದಲೇ ಸಾಧ್ಯ. `Plato' ಮಹಾಶಯನು ಹೇಳಿದಂತೆ `the art Should be the basic of education' ಕಲಾ ಮಾಧ್ಯಮದಿಂದಲೇ ಆಗಬೇಕು. ಹೇಗೆಂದರೆ ಮಗುವು ತನ್ನ ವಿಚಾರಗಳನ್ನು ಅನಿಸಿಕೆಗಳನ್ನು ಭಾಷೆಗಿಂತಲೂ ಚಿತ್ರ ರಚನೆಯ ಮುಖಾಂತರ ಹಾಗೂ ಮಣ್ಣಿನಲ್ಲಿ ಆಕಾರ ನಿರ್ಮಾಣ ಮಾಡುವ ಮುಖಾಂತರ ಹೇಳುತ್ತವೆಯೋ ಹಾಗೆ ಅದೇ ಮಾಧ್ಯಮದಿಂದ ಬಂದ ವಿಚಾರಗಳನ್ನು ಸುಲಭವಾಗಿ ಸ್ವೀಕರಿಸುತ್ತವೆ. ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಣ ಕೊಡುವಾಗ ವಿದ್ಯಾರ್ಥಿಗಳು ತನ್ಮಯತೆಯಿಂದ, ಲವಲವಿಕೆಯಿಂದ ಆಕೃತಿ ರಚಿಸುವುದನ್ನು ನೋಡುತ್ತೇವೆ. ಮಕ್ಕಳು ಪಠ್ಯಪುಸ್ತಕದ ಬೇರೆ ವಿಷಯಗಳಿಗಿಂತ ಚಿತ್ರಕಲೆಯ

ವಿಷಯದಲ್ಲಿ ಅತಿ ಆಸಕ್ತರಾಗಿರುವುದನ್ನು ನೋಡಬಹುದು. ಈ ಆಸಕ್ತಿಯನ್ನು ಬೆಳೆಸುವುದರಿಂದ ಕೈ ಮನಸ್ಸು, ಇಂದ್ರಿಯಗಳು ಸದಾ ಜಾಗೃತವಾಗಿ ಒಂದಕ್ಕೊಂದು ನಿಕಟ ಸಂಬಂಧವನ್ನು ಹೊಂದುತ್ತದೆ."[೬] ಇದರ ಒಳಗೊಂಡಂತೆ ಮಕ್ಕಳಲ್ಲಿ ಹೊಸತನ ಆಲೋಚನೆಗಳು ಕಲೆಯಿಂದ ಉಂಟುಮಾಡುತ್ತದೆ.

ಮಕ್ಕಳ ಮನಸ್ಸು ಮಲ್ಲಿಗೆಯಂತಿರುತ್ತದೆ. ಅವುಗಳ ಮನಸ್ಸು ಲೋಕದೊಳಗೆ ಪ್ರವೇಶಿಸುವುದು ಸುಲಭದ ಮಾತೇನಲ್ಲ. ಅದೊಂದು ನಿರ್ಮಲ ಆನಂದ ನೀಡುವ ಸುಂದರ ಲೋಕವಾಗುತ್ತೆ. ಎಲ್ಲವೂ ಸರಿಯಾಗಿ ಕ್ರಮಬದ್ಧವಾಗಿ ನಡೆದು ಬಂದಿದ್ದರೆ ಮಾತ್ರ, ಇಲ್ಲದಿದ್ದರೆ ಸುಕೋಮಲ ಹೂ ಮನಸ್ಸುಗಳು ನಲುಗುವುದು ಬಲು ಬೇಗ, ಮತ್ತೊಂದು ಅಲ್ಲಿ ಹೂಗಳು ಅರಳಲಾರದಂತಾಗಲೂ ಬಹುದು. ಅಷ್ಟು ಸೂಕ್ಷ್ಮ ಹುಟ್ಟಿನಿಂದ ಐದು ವರ್ಷದೊಳಗಿನ ಬೆಳವಣಿಗೆ, ಸಾಮಾಜಿಕವಾಗಿ, ಭಾವನಾತ್ಮಕವಾಗಿ, ಭಾಷೆ ಪರಿಜ್ಞಾನದಿಂದಲೂ ವೇಗವಾಗಿ ಬೆಳೆಯುತ್ತದೆ. ಬಾಲ್ಯವಸ್ಥೆಯ ಪರಾವಲಂಬಿತ ಸ್ಥಿತಿಯಿಂದ ಸ್ವಾವಲಂಬಿತವಾಗಿ ಬೆಳೆಯುವ ಸಂಕ್ರಮಣ ಸ್ಥಿತಿಯೆಂದೇ ಹೇಳಬಹುದು. ಬಾಲ್ಯ ವರ್ತನೆಗಳು ಹದಿಹರೆಯಕ್ಕೂ ಮುಂದುವರೆಯುವುದು ಕಂಡುಬಂದುದರಿಂದ ಅಧ್ಯಯನಗಳು, ಬಾಲ್ಯವಸ್ಥೆಯ ಬೆಳವಣಿಗೆಯನ್ನು ಅತ್ಯಂತ ಆಸಕ್ತಿಯಿಂದ ಕುತೂಹಲದಿಂದ ಗಮನಿಸತೊಡಗಿದವು. ಮಕ್ಕಳು ತುಂಬಾ ತೀಕ್ಷ್ಣಸ್ವಭಾವದವರು. ಏನೇ ನೋಡಿದರು ನೆನಪಿನಲ್ಲಿ ಇಟ್ಟಿಕೊಳ್ಳುವ ಸಾಮರ್ಥ್ಯ ಅವುಗಳಿಗೆ ಇರುತ್ತದೆ.

ಮಕ್ಕಳು ರಚಿಸುವ ಚಿತ್ರ ನೋಡುಗರಿಗೆ ಖುಷಿ ಜೊತೆಗೆ ನಗು ತರುಸುವಂತಹ Drawingಗಳು ಕಂಡುಬರುತ್ತವೆ. ನನಗೆ ಆದ ಕೆಲವು ಅನುಭವ ನಾನು ಶಾಲೆಗೆ ಭೇಟಿನೀಡಿ ನನ್ನ ವಿಷಯಕ್ಕೆ ಸಂಬಂಧಿಸಿದ ಚಿಕ್ಕ ಮಕ್ಕಳ ಚಿತ್ರಕಲೆಯಾಗಿರುವುದರಿಂದ ನಾನು ಶಾಲೆಗೆ ಹೋಗಿ ಮಕ್ಕಳಿಂದ ಚಿತ್ರಗಳನ್ನು ತಗೆಸುವುದು ಬಹಳ ಮುಖ್ಯವಾಗಿತ್ತು. ಅಲ್ಲಿ ಎಲ್ಲಾ ಮಕ್ಕಳಿಗೂ ಪೇಪರ ಹಂಚಿದ ಮೇಲೆ ಎಲ್ಲಾ ವಿದ್ಯಾರ್ಥಿಗಳಿಗೂ ನಾನು ಹೇಳಿದ್ದು ನಿಮಗೆ ಯಾವ ಚಿತ್ರ ಅಥವಾ ನಿಮ್ಮ ಮನಸ್ಸಿಗೆ ಬಂದ ಚಿತ್ರಗಳನ್ನು ರಚಿಸಿ, ಪ್ರಾಣಿ, ಪಕ್ಷಿ, ಗಿಡ, ಮರ, ಮನುಷ್ಯ ಯಾವುದಾದರೂ ಚಿತ್ರ ತಗೆಯಿರಿ ಎಂದು ಹೇಳಿದೆ. ಕೆಲವು ನಿಮಿಷಗಳ ನಂತರ ಎಲ್ಲಾ ಮಕ್ಕಳ ಚಿತ್ರಗಳನ್ನೂ ಗಮನಿಸಿದೆ. ಅಲ್ಲಿ ೩೦ರಿಂದ ೪೦ ವಿದ್ಯಾರ್ಥಿಗಳು ಶೇಕಡಾ ೨೫ ಪ್ರತಿಶತ ಮಕ್ಕಳು ಎಲ್ಲರೂ ಧ್ವಜದ ಕಂಭ, ಮನೆ, ಇಂತಹ ಚಿತ್ರಗಳು ಸುಮಾರು ವಿದ್ಯಾರ್ಥಿಗಳು ರಚನೆ ಮಾಡಿದ್ದವು. ಈ ರೀತಿ ಯಾಕೇ ಎಲ್ಲಾ ಮಕ್ಕಳು ಒಂದೇ ರೀತಿ ಚಿತ್ರ ಬಿಡಿಸುವರು ಅಂತ ನನಗೆ ವಿಚಿತ್ರ ಎನಿಸಿತು. ಜೊತೆಗೆ ಆಶ್ಚರ್ಯ ಕೂಡಾ ಅಲ್ಲಿರುವ ಸಮಸ್ಯೆ ಎಂದರೆ ಹುಟ್ಟಿನಿಂದ ಬಂದ ಮಕ್ಕಳಲ್ಲಿ

೬. ಪಿ.ಆರ್. ತಿಪ್ಪೇಸ್ವಾಮಿ (ಸಂ), ಚಿತ್ರಕಲಾ ಪ್ರಪಂಚ, ಪು-೫೯೧

ಕಲೆಯು ಇದ್ದರು ಸಹ ಕೆಲವು ಸಂದರ್ಭದಲ್ಲಿ ಕಲೆಗೆ ಸಂಬಂಧಪಟ್ಟ ಶಿಕ್ಷಕರು ಪ್ರಕೃತಿ, ಪ್ರಾಣಿ, ಪಕ್ಷಿ ಇತ್ಯಾದಿ ಮಕ್ಕಳಿಗೆ ಚಿತ್ರಗಳನ್ನು ತೋರಿಸುವುದು, ಹೇಳುವುದು ಮಾಡುತ್ತಿದ್ದರೆ ಅವುಗಳಿಗೆ ಅರ್ಥವಾಗುತ್ತದೆ. ಮಕ್ಕಳಿಗೆ ವಾಸ್ತವದಲ್ಲಿ ಏನು ನಡಿತಿದೆ, ಪರಿಸರದಲ್ಲಿ ಏನೇನು ನೋಡುತ್ತವೆ ಎನ್ನುವುದರ ಬಗ್ಗೆ ಮಕ್ಕಳಿಗೆ ತಿಳಿಸುವುದರಿಂದ ಕಲೆಯು ಇನ್ನಷ್ಟು ಬೆಳೆಯುವ ಆಶಾ ಕಿರಣವಾಗುತ್ತದೆ. ಸೂಕ್ಷ್ಮ ಸಂವೇದನೆಯಿಂದ ಗಮನಿಸುವ ಮಗು ತನ್ನ ಪಕ್ಕದಲ್ಲಿ ತನ್ನ ಸಹಪಾಠಿ ಏನು ಚಿತ್ರ ಬಿಡಿಸುತಾನೊ ಅವನು ಅದೇ ಬಿಡಿಸುವನು ಇದಕ್ಕೆಲ್ಲ ಮೂಲ ಕಾರಣ ಸರಿಯಾಗಿ ಕಲೆಯ ಬಗ್ಗೆ ಬೋಧನೆ ಸಿಗದಿರುವುದಕ್ಕೆ ಇಂತಹ ಸಮಸ್ಯೆ ಬರುವುದು. ಅದೆಷ್ಟೋ ಮಕ್ಕಳಿಗೆ ಸ್ವಂತ ಬುದ್ಧಿಯಿಂದ ಚಿತ್ರ ಬರೆಯಬೇಕೆಂದು ಶಿಕ್ಷಕರು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು.

"ನಮ್ಮಲ್ಲಿ 'ಕಲೆ' ಇನ್ನೂ ಗಂಭೀರ ಶೈಕ್ಷಣಿಕ ಮಾಧ್ಯಮವಾಗಿ ಬೆಳೆದಿಲ್ಲ. ಇಂತಹ ಸಂದರ್ಭದಲ್ಲಿ ನಮ್ಮ ಸಮಾಜದ ಶೇ. ೯೦ರಷ್ಟು ತಂದೆ-ತಾಯಂದಿರು ತಮ್ಮ ಮಕ್ಕಳ ಚಿತ್ರಕಲೆಯ ಆಸಕ್ತಿಯನ್ನು ಪ್ರೋತ್ಸಾಹಿಸುವುದಿಲ್ಲ. ಪ್ರೋತ್ಸಾಹಿಸಿದರೂ ಹವ್ಯಾಸಕ್ಕಾಗಿ ಕಲಾಸ್ಪರ್ಧೆಗಳಿಗಾಗಿ ಮಾತ್ರ ಸೀಮಿತಗೊಳಿಸಿರುವುದು ಒಂದು ದುರಂತ. ಅನೇಕ ಅಧ್ಯಯನಗಳಿಂದ ತಿಳಿದುಬಂದ ಅಂಶವೇನೆಂದರೆ ಕೆಲವೆ ವಾರಗಳಲ್ಲಿ ಎಳೆಯ ಮಕ್ಕಳೂ ಕೂಡ ಅಮೂರ್ತ ಆಕಾರಗಳಿಗೆ ಕಣ್ಣುಗಳ ಚಲನೆಯ ಮೂಲಕ ಪ್ರತಿಕ್ರಿಯಿಸುತ್ತವೆ. ಬೆಳೆದಂತೆಲ್ಲ ಕ್ರಮೇಣ ತನ್ನ ಸುತ್ತಲಿನ ಪರಿಸರದಲ್ಲಿ ಆಪ್ತವಾಗುವ ಎಲ್ಲವನ್ನು ಕೇವಲ ದೃಶ್ಯಗ್ರಹಿಕೆಯ ಮೂಲಕ ಅರಿಯುವುದನ್ನು ಕಲಿಯುತ್ತವೆ. ಹೀಗಿರುವಾಗ ಪ್ರತಿಯೊಂದನ್ನು ಮಗು ನೋಡಿ ವಸ್ತು ವಿವರಗಳನ್ನು ಗ್ರಹಿಕೆಗೆ ತಂದುಕೊಳ್ಳುವ ಬದಲು ಅದರ ಬಗೆಗಿನ ವಿವರಗಳನ್ನು ನೇರ ಭಾಷೆಯ ಮೂಲಕ ಮಕ್ಕಳ ಅರಿವನ್ನು ಹೆಚ್ಚಿಸುವ ವ್ಯರ್ಥ ಪ್ರಯತ್ನವನ್ನು ನಮ್ಮಲ್ಲಿನ ಹೆಚ್ಚಿನ ತಂದೆ-ತಾಯಿಗಳು ಮಾಡುತ್ತಿದ್ದಾರೆ. ಉದಾ: 'ಸೇಬು' ಎಂಬ ಎರಡಕ್ಷರದಿಂದ ಹಣ್ಣನ್ನು ಕಲ್ಪಿಸಿಕೊಳ್ಳುವ ಕುರುಡು ಪಾಠದ ಮೂಲಕ ಮಗುವಿನ ಶಿಕ್ಷಣ ಪ್ರಾರಂಭವಾಗುತ್ತದೆ. ಇದರಿಂದ ಕಾಲ ಸರಿದಂತೆ ದೃಶ್ಯ ಭಾಷೆಯ ಅವಶ್ಯಕತೆ ಮರೆಯುವಂತಾಗುತ್ತದೆ. ಮಕ್ಕಳ ಶಿಕ್ಷಣ ಯಾವತ್ತೂ ದೃಶ್ಯ ಭಾಷೆಯ ಮೂಲಕ ಪ್ರಾರಂಭವಾಗಿ ಭಾಷೆಯ ಮೂಲಕ ಬೆಳೆಯಬೇಕು."[೭] ಪ್ರತಿಭಾವಂತ ಮಕ್ಕಳು ಅಸಾಧಾರಣವಾದ ಬುದ್ಧಿ ಶಕ್ತಿಯನ್ನು ಹೊಂದಿರುವ ಮಕ್ಕಳಾಗಿದ್ದು, ಇಂತಹ ಮಕ್ಕಳು ಪ್ರತಿ ಶಾಲೆಯಲ್ಲೂ ಇರುತ್ತಾರೆ. ಇವರ ಸಂಖ್ಯೆ ಕಡಿಮೆ ಇದ್ದರು ಇವರ ಕೊಡುಗೆ ರಾಷ್ಟ್ರದ ಪ್ರಗತಿಗೆ ಅತ್ಯಂತ ಅವಶ್ಯಕವಾಗಿದೆ. ಇವರಲ್ಲಿರುವ ಪ್ರತಿಭೆಯನ್ನು ಉಳಿಸುವುದು ಬೆಳೆಸುವುದು ಶಿಕ್ಷಣದ ರೂವಾರಿ ಶಿಕ್ಷಕ ಇಂತಹ ಜವಾಬ್ದಾರಿಯನ್ನು ಹೊತ್ತ ಶಿಕ್ಷಕನು ಪ್ರತಿಭಾವಂತರನ್ನು ಅರ್ಥಮಾಡಿಕೊಳ್ಳ ಬೇಕು. ಆ ಮೂಲಕ ಅವರ ಪ್ರತಿಭೆಯನ್ನು ಉಳಿಸಬೇಕು ಹಾಗೂ ಬೆಳೆಸಬೇಕು.

೭. ಎಂ.ಎಸ್. ಮೂರ್ತಿ, ದೇಶಿ ನಗು, ಪು-೪೦

ಇಂದಿನ ಆಧುನಿಕ ಯುಗದೊಳಗೆ ಓದು, ಬರಹ, ಇಷ್ಟರಲ್ಲೆಯೇ ಮಕ್ಕಳನ್ನು ಪೋಷಕರು ಬೆಳೆಸುತ್ತಿದ್ದಾರೆ. ಆದರೆ ಇದರ ಆಚೆ ಬೇರೆ ಪ್ರಪಂಚ ಇದೇ ಅವುಗಳಿಗೂ ಆಸೆ, ಆಕ್ಷಾಂಸೆಯಿರುತ್ತೆ, ಮಕ್ಕಳನ್ನು ಓದು, ಬರಹದ ಯಂತ್ರ ಎಂದು ಪರಿಗಣಿಸಿದ್ದಾರೆ. ಇವುಗಳ ಮೇಲೆ ಅತಿಯಾಗಿ ಒತ್ತಡ ಹೇರಿರುವುದರಿಂದ ಸರಿಯಾಗಿ ಓದು ಸಂಪೂರ್ಣಗೊಳಿಸುವುದಿಲ್ಲ. ಮತ್ತು ಬೇರೆ ಯಾವುದೇ ಚಟುವಟಿಕೆಯಲ್ಲಿ ತೊಡಗಿಕೊಳ್ಳವುದಕ್ಕೆ ಉತ್ಸಾಹ ಕಳೆದುಕೊಳ್ಳುತ್ತೆ ಮಗು. ಈ ರೀತಿ ಮಕ್ಕಳಿಗೆ ಹಿಂಸೆ ಯಾಕೆ ಅವುಗಳಿಗೆ ಮನಸ್ಸು ಅಂತ ಇರುತ್ತೆ ಅವುಗಳ ಆಸೆಯಂತೆ ಯಾವುದೇ ಮಾಧ್ಯಮ ಆಗಿರಲಿ ಮುಂದುವರೆಯುವುದಕ್ಕೆ ಅವಕಾಶ ನೀಡಬೇಕು. ಕೆಲವು ಮಕ್ಕಳಿಗೆ, ಸಂಗೀತದಲ್ಲಿ ಉತ್ಸಾಹ, ಹಾಡು, ಚಿತ್ರಕಲೆ, ನೃತ್ಯ, ಹೀಗೆ ಬೇಕಾದ ಮಾಧ್ಯದಲ್ಲಿ ಹೋಗುವುದಕ್ಕೆ ಅನುಮತಿ ನೀಡಬೇಕು. ಹೆಚ್ಚಾಗಿ ಇಷ್ಟಪಡುವ ಮಾಧ್ಯಮ "ಚಿತ್ರಕಲೆ" ಅದರಲ್ಲೇ ಮುಂದುವರಿಯುವಲ್ಲಿ ಸೃಜನಶೀಲವಾಗಿ, ಕ್ರಿಯಾತ್ಮಕವಾಗಿ ಬೆಳವಣಿಗೆ ಹೊಂದಲು ಈ ಮಾಧ್ಯಮ ತುಂಬಾ ಅವಶ್ಯಕ. ಮಕ್ಕಳ ಸೂಕ್ತ ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಬೀರುವುದು ಈ ಕಲೆ ಆಕರ್ಷಣೆಯವಾದ ಕಲೆಯು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಅಡಿಗಿಕೊಂಡಿರುತ್ತದೆ. ಮತ್ತು ಮಗುವಿನ ವಿಶೇಷವಾದ ಬೆಳವಣಿಗೆ ಹಂತದಲ್ಲಿ ಕಲೆಯು ಜೊತೆಯಲ್ಲಿ ಮೊಳಕೆಯೊಡದಿರುತ್ತೆ ಮಗು ಚಟುವಟಿಕೆಯಿಂದ, ಕೌಶಲ್ಯದಿಂದ ಸೃಜನಶೀಲತೆ, ಇರಬೇಕು ಎಂದರೇ ಚಿತ್ರಕಲೆ ಮಾಧ್ಯಮ ಅವಶ್ಯಕವಾಗಿದೆ. ಇಂತಹ ಕಲೆಯಿಂದ ಒಳ್ಳೆಯ ವ್ಯಕ್ತಿತ್ವ ಬೆಳೆಯುತ್ತದೆ. ಅಂದರೆ ಚಿತ್ರ ಕಲೆಗೆ ಪೋಷಕರು ಮಹತ್ವ ಕೊಡಬೇಕು. ಕಲೆಯು ಬೆಳೆಯಲು ಕೈ ಜೋಡಿಸಬೇಕು. ಮಕ್ಕಳ ತುಂಟಾಟಗಳನ್ನು ಕಸಿದುಕೊಳ್ಳುವುದು ನಾವು ಯಾರ ನೆಚ್ಚಿನ ಕಲೆಯನ್ನು ಇಷ್ಟಪಡುವ ಮಕ್ಕಳು ನೋಡಿ ಆನಂದಪಡಬೇಕು ಅಂತಹ ಮಕ್ಕಳನ್ನು ಪೋಷಿಸುವ ಕೆಲವು ಅಂಶಗಳು ಇಲ್ಲಿ ಗುರುತಿಸಲಾಗಿದೆ.

* ಪೋಷಕರಾದವರು ತಮ್ಮಿಂದ ಮಗು ಏನು ಅಪೇಕ್ಷೆಪಡುತ್ತಿದೆ ಎಂದು ತಿಳಿಯಲು ಪ್ರಯತ್ನ ಮಾಡಬೇಕು.

* ಮಗು ಆಟವಾಡುತ್ತಿದ್ದ ಸಂದರ್ಭವನ್ನು ಪೋಷಕರು ದೂರದಿಂದಲೇ ಗಮನಿಸುವುದು ಮತ್ತು ಅದಕ್ಕೆ ಆಟ ಯಾವುದು ಇಷ್ಟ ಅದನ್ನು ತಿಳಿದುಕೊಂಡು ಪರಿಕರಗಳನ್ನು ಒದಗಿಸಬೇಕು.

* ಕೆಲವು ಮಕ್ಕಳು ಆಟಿಕೆಗಳಲ್ಲಿ ಮಗ್ನವಾಗಿದ್ದರೆ ಇನ್ನೂ ಕೆಲವು ಮಕ್ಕಳು ಚಿತ್ರ ಬರೆಯುವುದು, ಬಣ್ಣದ ಜೊತೆ ಆಟವಾಡುವುದು ಖುಷಿಯಿಂದ ತೊಡಗಿಕೊಂಡಿರುತ್ತವೆ.

* ಚಿತ್ರ ಬರೆಯುವ ಮಗುವಿಗೆ ಚಿತ್ರಕ್ಕೆ ಸಂಬಂಧಿಸಿದ ಕಲಾ ಪರಿಕರಗಳು, ಬಣ್ಣ, ಡ್ರಾಯಿಂಗ್ ಬುಕ್ಸ್ ಮುಂತಾದ ವಸ್ತುಗಳು ಒದಗಿಸುವುದು ಮುಖ್ಯವಾಗಿ ಮಗುವಿಗೆ ಯಾವುದರಲ್ಲಿ

ಆಸಕ್ತಿಯಿಂದರುವುದು, ಓದುವುದರಲ್ಲಿ ಅಥವಾ ಡ್ರಾಯಿಂಗ್ ತೆಗೆಯುವುದರಲ್ಲಿ ಮುಂತಾ ಮಾಧ್ಯಮಗಳು ಆಗಿರಬಹುದು ಅವುಗಳಲ್ಲಿ ಮಗುವಿಗೆ ಇಷ್ಟವೆಂದು ತಿಳಿದುಕೊಂಡು ಮುಂದುವರಿಯಲು ಪ್ರೋತ್ಸಾಹಿಸಬೇಕಾಗಿರುವುದು ಪೋಷಕರ ಕರ್ತವ್ಯ.


* ಮಗು ಚಿತ್ರ ರಚನೆ ಮಾಡುವ ವಿಧಾನ, ಚಿತ್ರ ಬಿಡಿಸಲು ಆಸಕ್ತಿ ಬೆಳೆಸಿಕೊಂಡಿತ್ತು ಅಂದರೆ ಚಿಕ್ಕ ಹಾಳೆಯ ತುಂಡು ಸಿಕ್ಕರೆ ಸಾಕು ಅದರ ಮೇಲೆ ಗೀಚುವುದು ಚಿತ್ರ ಬರೆಯುವುದು ಮಾಡುತ್ತದೆ.

ಮಗುವಿಗೆ ಚಿತ್ರ ಬರೆಯಲು ಯಾವುದೇ ಸೀಮಿತ ಚೌಕಟ್ಟು ಅಂತ ಇರುವುದಿಲ್ಲ. ತನಗೆ ಏನೂ ತೋಚುತ್ತದೋ ಅದನ್ನು ಚಿತ್ರ ಬರೆಯುವ ಮುಖಾಂತರ ಹೊರಹಾಕುತ್ತದೆ. ಮಗು ಹಾಗೆ ಹಂತಹಂತವಾಗಿ ವಿಕಾಸ ಮೆಟ್ಟಿಲನ್ನು ಏರುತ್ತ ಹೋಗುತ್ತದೆ. ಕಾಲಕ್ರಮೇಣ ಅದು ಇನೊಂದು ಘಟ್ಟವನ್ನು ತಲುಪುತ್ತದೆ. ಪ್ರಪಂಚದ ಆಗುಹೋಗುಗಳನ್ನು ಭಾವನಾತ್ಮಕವಾಗಿ ಅರೆವಂಚಿತವಾಗಿ ನೋಡುವ ಕಣ್ಣು ಕ್ರಮೇಣ ವಸ್ತುನಿಷ್ಠವಾಗಿ ಕಾಣಲು ಪ್ರಾರಂಭಿಸುತ್ತದೆ. ಇದು ಅತ್ಯಂತ ಸೂಕ್ಷ್ಮವಾದ, ನಾಜೂಕಾದ, ಬಹಳ ಮುಖ್ಯವಾದ ಕಾಲ, ಕನಸು, ಕಲ್ಪನೆಗಳು ವಾಸ್ತವ ಪ್ರಪಂಚದ ಒರೆಗಲ್ಲಿನಲ್ಲಿ ಬೇರೆಯೇ ಬಣ್ಣ, ರೂಪ, ಧ್ವನಿ ಪಡೆಯುತ್ತವೆ. ನಂತರದಲ್ಲಿ ಪ್ರಕೃತಿಯಲ್ಲಿ ಕಾಣುವ ವಸ್ತುಗಳಿಗೆ ಆಕರ್ಷಣೆಗೆ ಒಳಗಾಗಿ ಕುತೂಹಲ ಅಲ್ಲಿಂದಲೇ ಪ್ರಾರಂಭವಾಗಿ ಹಂತಹಂತ ಬೆಳವಣಿಗೆ ಹೊಂದಿದ ಮೇಲೆ ಮಗು ಚಿತ್ರ ಬರೆಯಲು ಈ ಪರಿಸರ ಕೂಡ ಬಹಳ ಮುಖ್ಯವಾಗುವುದು.

ಶಿಕ್ಷಣ ಎನ್ನುವುದು ಬರೀ ಶಾಲೆಯ ಸೊತ್ತಲ್ಲ. ಅದು ಮನೆಯಲ್ಲೂ ನಡೆಯುತ್ತಿರುತ್ತದೆ. ಶಾಲೆಯಲ್ಲೂ ಇದೆ ಮುಂದೆ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಅವಿರತವಾಗಿ ಸಾಗುತ್ತಿರುತ್ತದೆ. ಮೊದಲಿಗೆ ಶಿಕ್ಷಣ ತಂದೆ-ತಾಯಿಯಿಂದ ಮನೆಯಲ್ಲಿ ಪ್ರಾರಂಭವಾಗುತ್ತದೆ. ಮಗುವಿನ ಮೂಲ ವರ್ತನೆಗಳು ಪರಿಸರದ ಅನುಕೂಲತೆ, ಪ್ರತಿಕೂಲತೆಗಳಿಗೆ ಸರಿ ಹೊಂದುವಂತೆ ಅಭ್ಯಾಸಗಳಾಗಿ ಪರಿವರ್ತನೆಗೊಳ್ಳಲು ಅಗತ್ಯವಾದ ಶಿಕ್ಷಣವನ್ನು ತಮಗರಿವಿಲ್ಲದೆಯೇ ಎಲ್ಲ ತಾಯಿ-ತಂದೆಯರು ನೀಡುತ್ತಿರುತ್ತಾರೆ. ಮಗುವಿನಲ್ಲಿ ಸೃಜನಶೀಲ ಮೈಗೂಡಿಸುವ ಹಾಗೆ ಮಕ್ಕಳನು ಬೆಳೆಸಬೇಕು.

ಅಧ್ಯಾಯ – ಐದು

ಚಿಕ್ಕ ಮಕ್ಕಳ ಚಿತ್ರಕಲೆಯ ವಸ್ತು ವಿಷಯಗಳು



ಅಧ್ಯಾಯ – ೫
ಚಿಕ್ಕ ಮಕ್ಕಳ ಚಿತ್ರಕಲೆಯ ವಸ್ತು ವಿಷಯಗಳು

ಮಗುವಿನ ಬೆಳವಣಿಗೆಯ ಹಂತದಲ್ಲಿ ನಿಸರ್ಗದಲ್ಲಿ ಕಾಣುವಂತಹ ವಸ್ತುಗಳಿಗೆ ಬೇಗ ಆಕರ್ಷಣೆಗೆ ಒಳಗಾಗುತ್ತದೆ. ಆಟಿಕೆಗಳು, ಬಣ್ಣದ ಚಿತ್ರಗಳು, ಪ್ರಾಣಿ, ಪಕ್ಷಿ, ಮನುಷ್ಯ ಮುಂತಾದ ಪ್ರಕೃತಿಯಲ್ಲಿ ಬದಲಾಗುವ ಸನ್ನಿವೇಷಗಳು ಮಗುವಿನ ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ. ಸೂಕ್ಷ್ಮ ಬದ್ಧಿಶಕ್ತಿ ಹೊಂದಿರುವ ಮಗು ಎಲ್ಲವೂ ವಿಶೇಷವಾಗಿ ಕಾಣುತ್ತದೆ. ಇದರ ಒಳಗೊಂಡಂತೆ ಚಿತ್ರಕಲೆ ಎಂದರೇ ಮಗುವಿಗೆ ಇಷ್ಟವಾದ ಮಾಧ್ಯಮ ಕೂಡಾ ಹೌದು. "ಮಗುವಿನ ಮಾನಸಿಕ ಶಕ್ತಿ ಬೆಳೆದ ಹಾಗೆಯೇ ಆಟಿಕೆಗಳ ಬೇಡಿಕೆಯಲ್ಲಿ ಬದಲಾವಣೆ ಕಂಡುಬರುವುದು, ಚಿಕ್ಕ ಮಕ್ಕಳಿಗೆ ದೊಡ್ಡ ಆಟದ ವಸ್ತುಗಳು ಬಹಳ ಇಷ್ಟ ಮತ್ತು ಬಿಡಿ ಭಾಗಗಳನ್ನು ಜೋಡಿಸಿ, ಅದಕ್ಕೊಂದು ಆಕಾರ ಕೊಟ್ಟು ಸಂತೋಷಪಡುವುದು ಮಕ್ಕಳ ಸಹಜ ಗುಣ. ಸ್ವಲ್ಪ ಬೆಳೆದ ಮಗುವಿಗೆ ಚಿತ್ರ ಬರೆಯುವುದು ಮತ್ತು ಕಿರಿಯ ಪ್ರಮಾಣದ ಗೃಹ ಬಳಕೆಯ ವಸ್ತುಗಳು ಉತ್ತಮವಾದ ಆಟಿಕೆಗೆಳಲ್ಲಿ ಹಾಗೂ ಮಗು ತನ್ನನ್ನು ತಾನು ಕಲೆಯಲ್ಲೂ ಸಹ ತೊಡಗಿಸಿಕೊಳ್ಳುವುದು.

ಮಗು ಕಲಿಯುವುದು ಅನುಕರಣೆಯಿಂದ ಆದ್ದರಿಂದ ನಿತ್ಯೋಪಯೋಗಿ ಸಾಧನಗಳನ್ನು ಹೋಲುವ ವಸ್ತುಗಳು ಆಟಿಕೆಗಳಾದರೆ ಮಗುವಿನಲ್ಲಿ ಕಲ್ಪನಾತ್ಮಕ ಹಾಗೂ ರಚನಾತ್ಮಕ ಕೌಶಲ್ಯ ಬೆಳೆಯಲು ದಾರಿಯಾಗುವುದು. ಮಕ್ಕಳ ಆಸಕ್ತಿಯನ್ನು ಕೆರಳಿಸುವ, ಮಕ್ಕಳ ಕ್ರಿಯಾತ್ಮಕ ಚಟುವಟಿಕೆಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗುವ, ಮಕ್ಕಳ ಮನಸ್ಸಿಗೆ ಆನಂದ ತಂದುಕೊಡುವ, ಅಗ್ಗದ ಬೆಲೆಯ ಗಟ್ಟಿಮುಟ್ಟಾದ ವಸ್ತುಗಳು ಉತ್ತಮ ಆಟಿಕೆಗಳೆಂದರೆ ತಪ್ಪಾಗಲಾರದು.[೧] ಇದರ ಜೊತೆಗೆ

೧. ಕೆ.ಆರ್.ಕೆ. ಮೂರ್ತಿ, ಮಕ್ಕಳ ಮನೋವಿಕಾಸ ಮಾರ್ಗ, ಪುಟ–೨೬

ಮಕ್ಕಳ ಆರ್ಟ್ಸ್ ಸಂಬಂಧಿಸಿದ (ಮೆಟಿರಿಲ್ಸ್) ಸಾಮಾನುಗಳನ್ನು ಒದಗಿಸುವುದು ತುಂಬಾ ಅವಶ್ಯಕವಾಗಿದೆ.

ಚಿತ್ರಕಲೆ :

"ಚಿತ್ರಕಲೆ ಪ್ರಕೃತಿಯಲ್ಲಿ ಅಸಾಮಾನ್ಯ ಆದರೆ ಅದನ್ನೇ ಪೂರ್ಣವಾಗಿ ಅನುಸರಿಸಿದೆಯೆಂಬ ಭ್ರಮೆ ಮೂಡಿಸುವುದು ಒಂದು ಚತುರ ಕೃತಿ ಪ್ರಕೃತಿಯಲ್ಲಿ ಪದಾರ್ಥಗಳಿಗೆ ತ್ರಿಪರಿಮಾಣಗಳಿವೆ. ಆದರೆ ಉದ್ದ-ಅಗಲ ಎರಡೇ ಪರಿಣಾಮಗಳಲ್ಲಿ ತ್ರಿಪರಿಣಾಮವನ್ನೂ ಸೂಚಿಸುವುದು ಚಿತ್ರಕಲೆಯ ಮುಖ್ಯ ಸೂತ್ರ. ಕಲೆಯಲ್ಲಿ ಮೂರು ತಂತ್ರಗಳು ಹಿಂದಿನಿಂದಲೂ ಬಳಕೆಯಲ್ಲಿವೆ. ಯಥಾ ದೃಷ್ಟಿ ರೂಪನ, ನೆರಳು-ಬೆಳಕಿನ ಸಂಯೋಜನೆ ಮತ್ತು ವರ್ಣವಿನ್ಯಾಸ. ಚಿತ್ರಕಲೆಯಲ್ಲಿ ಎರಡು ವಿಧ ವರ್ಣಚಿತ್ರ ಮತ್ತು ರೇಖಾಚಿತ್ರ, ಜಲವರ್ಣ, ತೈಲವರ್ಣ, ಪೆಸ್ಟಲ್ ಮುಂತಾದ ಮಾಧ್ಯಮಗಳಿಂದ ಚಿತ್ರ ರಚನೆ ಮಾಡುವರು. ಇತ್ತೀಚಿಗೆ ಚಿತ್ರಕಲೆಯಲ್ಲಿ ಅನೇಕ ಪ್ರಯೋಗಗಳು ನಡೆದು, ಅನೇಕ ಹೊಸ ವಿಧಾನಗಳನ್ನು ಅಳವಡಿಸಿದ್ದಾರೆ. ವಿಜ್ಞಾನದ ಹೊಸ ಅವಿಷ್ಕಾರಗಳನ್ನು ನಾನಾ ರೀತಿಯಲ್ಲಿ ಹೊಸ ತಂತ್ರಗಳಿಗಾಗಿ ಉಪಯೋಗಿಸಲಾಗುತ್ತದೆ."[೨] ಈ ವಿಷಯ ಒಳಗೊಂಡಂತೆ ಕಲಾಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆ ಕಂಡುಕೊಂಡಿದೆ. ಮೇಲೆ ಹೇಳಿದಂತೆ ಬಣ್ಣದ ಬಳಕೆಗಳು, ರೇಖೆಗಳು, ಸಂಯೋಜನಾ ಚಿತ್ರಗಳಲ್ಲಿಯು ಸಹ ಬಣ್ಣಗಳ ಬಳಕೆ ಮೊದಲ ಪ್ರಾಮುಖ್ಯತೆ ಕೊಡಲಾಗಿದೆ. ಬಣ್ಣಗಳು ಎಂತಹ ಸಾಮಾನ್ಯ ವ್ಯಕ್ತಿಗೂ ಆಕರ್ಷಣೆಯ ಕೇಂದ್ರ ಬಿಂದುವಂತಾಗಿವೆ. ಇಂತಹ ವರ್ಣಗಳಿಗೆ ಮಕ್ಕಳು ಸಹ ಪ್ರಭಾವಕ್ಕೆ ಒಳಗಾಗಿವೆ ಹಾಗೂ ಅದರ ಜೊತೆಗೆ "ಚಿತ್ರಕಲೆ"ಗೂ ಮನಸೋತಿವೆ. ಇಂತಹ ಕಲಾ ಮಾಧ್ಯಮಗಳು ಜೀವನದ ವಿಕಾಸನದ ಮುನ್ನುಡಿಯಾಗಿದೆ.

ಚಿತ್ರಕಲೆ ಎಂಬುದು ಒಂದು ಮಾಧ್ಯಮವಾದರೂ ಕೂಡ ಮನುಷ್ಯ ಸೃಜನಶೀಲವಾಗಿ ಬೆಳೆಯಬೇಕೆಂದರೆ ಕಲೆಯು ಉತ್ಸಾಹದ ಚಿಲುಮೆಯೆಂದು ಹೇಳಬಹುದು. ಹಾಗಾಗಿ ಮಕ್ಕಳನ್ನು ಚಿತ್ರಕಲೆಯಲ್ಲಿ ಆಸಕ್ತಿ ಬೆಳೆಸಲು ನಾವು ಸಿದ್ಧರಾಗಬೇಕು.

"ಕಲೆಯು ಮಕ್ಕಳ ಜ್ಞಾನಾಭಿವೃದ್ಧಿಯ ಮೊದಲ ಮೆಟ್ಟಲು. ಶಿಕ್ಷಣ ಕ್ಷೇತ್ರದಲ್ಲಿ ಚಿಕ್ಕಮಕ್ಕಳ ಕಲೆಯ ಸ್ಥಾನ ಮಹತ್ವಪೂರ್ಣವಾದದ್ದು; ಪ್ರತಿಯೊಬ್ಬ ಮಗುವಿನ ರಚನಾತ್ಮಕ ಶಕ್ತಿ, ಕ್ರಿಯಾತ್ಮಕ ಶಕ್ತಿ, ಸೌಂದರ್ಯಾನ್ವೇಷಕ ಬುದ್ಧಿ ಇವುಗಳ ಸಂವರ್ಧನೆಗೆ ಸಹಕಾರಿಯಾಗುವುದು. ಇದು ಕಲಾಶಿಕ್ಷಣದ ಗುರಿಯೇ ಹೊರತು, ಮಕ್ಕಳನ್ನು ಕಲಾವಿದರನ್ನಾಗಿ ಮಾಡುವ ಉದ್ದೇಶವಿಲ್ಲ.

ಮಕ್ಕಳಿಗೆ ಚಿತ್ರ ರಚನೆ ಇದೊಂದು ಮನರಂಜನೆಯಲ್ಲದೆ, ಅಭಿವ್ಯಕ್ತಿಗೆ ಮಾಧ್ಯಮ ಎನಿಸಿದೆ. ಮಕ್ಕಳು ತಮಗೆ ಇಷ್ಟ ಬಂದ ರೀತಿಯಲ್ಲಿ ಯಾರ ಸಹಕಾರವಿಲ್ಲದೇ ಚಿತ್ರಗಳನ್ನು ರಚಿಸುವ

೨. ಪಿ.ಆರ್. ತಿಪ್ಪೇಸ್ವಾಮಿ (ಸಂ), ಕಲಾಕೋಶ, ಪುಟ-೨೬೮

ವಿಧಾನವು "ಚಿಕ್ಕಮಕ್ಕಳ ಕಲೆ" ಎನಿಸಿದೆ. ಹಳದಿ, ಕೆಂಪು, ನೀಲಿ ಈ ಮೂಲ ಬಣ್ಣಗಳು ಮಕ್ಕಳ ಮನ ಸೆಳೆಯುವ ವೈವಿಧ್ಯಮಯ ವರ್ಣಗಳೆನಿಸಿವೆ. ಸರಳವಾದ ರೇಖೆ, ಆಕರ್ಷಕ ವರ್ಣಗಳ ಪ್ರಯೋಗ, ನೇರವಾದ ನಿರ್ಜೀವ ಹಾಗೂ ಸಜೀವ ವಸ್ತುಗಳ ವಿನ್ಯಾಸ, ವಕ್ರ ರೇಖೆಗಳು, ಬಿಂದುಗಳು ಇತ್ಯಾದಿ ಚಿಕ್ಕಮಕ್ಕಳ ಚಿತ್ರಗಳಲ್ಲಿ ಹೆಚ್ಚಾಗಿ ಕಂಡುಬರುವ ಪ್ರಮುಖ ಅಂಶಗಳು"[೩] ಈ ಪ್ರಕಾರವಾಗಿ ಮಕ್ಕಳ ಮನಸ್ಸಿನಲ್ಲಿ ಮೂಡುವ ಚಿತ್ರ ಅದನ್ನು ರಚಿಸುವ ಸಂದರ್ಭದಲ್ಲಿ ತನಗೆ ಎಷ್ಟು ಸಾಧ್ಯವೋ ಅಷ್ಟು ಚಿತ್ರಕ್ಕೆ ಜೀವಂತಿಕೆ ತರಲು ಪ್ರಯತ್ನದ ಮಾಡುತ್ತಾರೆ.

ಮಕ್ಕಳ ಕೈಗೆ ಕುಂಚ, ಬಣ್ಣಗಳನ್ನು ಕೊಟ್ಟಾಗ ಅವರು ಏನನ್ನು ಚಿತ್ರಿಸುವರು

"ತಮಗೆ ಪ್ರೀತಿಯಾದವರೆಂದರೆ ಅಮ್ಮ, ಅಪ್ಪ ಮುದ್ದು ಪ್ರಾಣಿಗಳನ್ನೂ, ಇಷ್ಟವಾದ ವಿಚಾರಗಳನ್ನು ಹೆಚ್ಚಾಗಿ ಚಿತ್ರಿಸುತ್ತಾರೆ. ಸಂತೋಷ, ಆಶ್ಚರ್ಯಗಳನ್ನು ಉಂಟುಮಾಡುವ ಅಂಗಡಿ, ಮನೆಗಳನ್ನೂ, ಆಟ ಕೆಲಸಗಳನ್ನೂ, ದೊಡ್ಡ ವಸ್ತುಗಳನ್ನೂ ಚಿತ್ರಿಸುತ್ತಾರೆ. ಬಣ್ಣಗಳೆಂದರೆ ಅವರಿಗೆ ಬಲು ಪ್ರೀತಿ. 'ಮೇಲಿನ ವಿಷಯಗಳನ್ನು ಚಿತ್ರಿಸಿರಿ' ಎಂದರೆ ಹಿರಿಯರು ಹಿಂಜರಿಯುತ್ತಾರೆ. ಮಕ್ಕಳು ಮುಂದೆ ಬಂದು ಚಿತ್ರಿಸುತ್ತಾರೆ. ಅದೇನು ಕಾರಣ? ಹಿರಿಯರಾದ ನಾವು ವಸ್ತುಗಳ ಹೋಲಿಕೆ ಇರುವುದನ್ನು ಮಾತ್ರ ಚಿತ್ರ ಎಂದು ತಿಳಿಯುತ್ತೇವೆ. ಹೀಗೆ ರೂಪಸಾದೃಶ್ಯವನ್ನು ತರಲು ಕಷ್ಟವಾಗಿರುವುದರಿಂದ ಚಿತ್ರಿಸಲು ಅಂಜುತ್ತೇವೆ. ಅಷ್ಟು ಮಾತ್ರವಲ್ಲ; ಈ ಭಾವನೆಯಿಂದ ಮಕ್ಕಳ ಚಿತ್ರಗಳೆಂದರೆ ತಪ್ಪುಗಳ ರಾಶಿ, ಅವರಿಗೆ ತದ್ರೂಪಚಿತ್ರ ಮಾಡಲು ಕಲಿಸಬೇಕು' ಎಂದು ಕೂಡ ನಮ್ಮ ನಂಬುಗೆಯಾಗಿದೆ. ಆದರೆ ಮಕ್ಕಳ ಈ ಚಿತ್ರಗಳನ್ನು ಉತ್ತಮ ಕಲಾವಿದರೂ, ವಿದ್ಯಾತಜ್ಞರೂ ಮೆಚ್ಚುತ್ತಾರೆ. ಆ ಚಿತ್ರಗಳೆಂದರೆ ಮಕ್ಕಳ ಆಲೋಚನೆಗಳ ಲೇಖನಗಳಾಗಿವೆ; ಆ ರಚನಾ ಕಾರ್ಯವು ಮಕ್ಕಳ ಮೇಲ್ಮೆಗೆ ಮಾರ್ಗವಾಗುತ್ತದೆ.[೪] ಇವುಗಳ ಕಲ್ಪನೆಯಲ್ಲಿ ಅರಳಿದ ಚಿತ್ರಗಳು ನೋಡುವುದಕ್ಕೆ ವಿಶೇಷವಾಗಿ ಕೂಡಾ ಕಾಣುತ್ತದೆ.

ಮಕ್ಕಳು ರಚಿಸುವ ಚಿತ್ರಗಳಲ್ಲಿ ವಸ್ತು ವಿಷಯ :

ಮಕ್ಕಳು ಬರೆಯುವ ರೇಖಾ ಚಿತ್ರಗಳು, ಬಣ್ಣದಿಂದ ರಚಿಸಿದ ಚಿತ್ರಗಳು, ಯಾವುದೇ ಚಿತ್ರಗಳು ಮಗು ಬರೆಯುವ ಶೈಲಿ ತುಂಬಾ ವಿಭಿನ್ನ ಪ್ರಕೃತಿಯಲ್ಲಿ ಕಂಡುಬರುವ ದೃಶ್ಯಗಳನ್ನು ಕಲ್ಪನೆ ಮುಖಾಂತರ ಅಥವಾ ನೋಡಿ ಆಕರ್ಷಣೆ ಒಳಗಾಗಿ ರಚಿಸುವ ಚಿತ್ರಗಳಾಗಿರಬಹುದು. ೧. ಮಕ್ಕಳು ಬರೆಯುವ ಮುಂತಾದ ರೇಖಾ ಚಿತ್ರಗಳು ವಸ್ತು ವಿಷಯಕ್ಕೆ ಅನುಗುಣವಾಗಿ ಚಿತ್ರ

೩. ಅಶೋಕ ಟಿ. ಅಕ್ಕಿ, ಕಲಾ ಚರಿತ್ರೆ, ಪುಟ–೧೧೯
೪. ಬಿ.ಪಿ. ಬಾಯಿರಿ: ಚಿಕ್ಕ ಮಕ್ಕಳ ಚಿತ್ರಕಲೆ– ಪುಟ–೧೯

ಬರೆಯುವರು ೨. ಅಂತಹ ಚಿತ್ರಗಳು ಯಾವುವು? ನಾಯಿ, ಬೆಕ್ಕು, ಮೊಲ, ನವಿಲು, ಗಿಳಿ, ಧ್ವಜದ ಕಂಬ, ಆನೆ, ಮನುಷ್ಯ ಕಾರಟೋನ್ ಚಿತ್ರ ಒಳಗೊಂಡಂತೆ ತಮ್ಮ ಎಳೆಯ ಬುದ್ಧಿ ಮಟ್ಟದಲ್ಲಿ ನೈಜವಾಗಿಯಿಲ್ಲದಿದ್ದರೂ ಇಂತಹದೆ ಪ್ರಾಣಿ, ವಸ್ತು, ಗಿಡ, ಮರ, ಅಂತ ಗುರುತಿಸುವಷ್ಟು ಚಿತ್ರಗಳನ್ನು ರಚಿಸಲು ಪ್ರಯತ್ನ ಮಾಡುತ್ತಾರೆ. ೩. ಮಗುವಿನ ಸಹಜದಿಂದ ಅರಳಿದ ಕೃತಿಗಳು ನೋಡಲು ಖುಷಿ ಕೊಡುತ್ತೆ ಹಾಗೆಯೇ ಚಿತ್ರಗಳ ನಿರ್ಮಾಣದಲ್ಲಿ ಎಲ್ಲಾ ರೀತಿಯ ಚಿತ್ರ ಬಿಡಿಸುವುದಕ್ಕೆ ಪ್ರಯತ್ನಶೀಲರಾಗಿ ಕಲಾಕೃತಿಗಳನ್ನು ರಚನೆಮಾಡುತ್ತಾರೆ. ೪. ತನ್ನ ಬೇಕು ಬೇಡಗಳನ್ನು ಅನಿಸಿಕೆ ಅಭಿಪ್ರಾಯಗಳನ್ನು ಮಾತು, ಬರಹ ಮತ್ತಿತರ ವಿಧಾನಗಳ ಮೂಲಕ ಪ್ರಕಟಿಸಲು ತರಬೇತಿ ಹಾಗೂ ಅವಕಾಶಗಳು, ನೇರವಾಗಿ, ಸ್ಪಷ್ಟವಾಗಿ ಸಂಪರ್ಕ ಸಾಧಿಸುವ ಸಾಮರ್ಥ್ಯ ದೊರೆಯಬೇಕು.

ಪಠ್ಯಕ್ರಮದ ಇತರ ವಿಷಯಗಳೊಂದಿಗೆ ಚಿತ್ರಕಲೆ ಸಂಬಂಧ :

"ಶಾಲೆಗಳಲ್ಲಿ ಕಲಿಸಲ್ಪಡುವ ಇತರ ವಿಷಯಗಳೊಂದಿಗೆ ಚಿತ್ರಕಲೆಯ ಸಂಬಂಧವು ಬಹುವಾಗಿ ಕಂಡುಬರುವುದು. ಪ್ರಾಥಮಿಕ ಶಾಲೆಯ ಪ್ರಾರಂಭದ ವರ್ಗಗಳಲ್ಲಿ ಹೆಚ್ಚಾಗಿ ಚಿತ್ರಗಳ ಮೂಲಕವೇ ಓದು ಬರಹಗಳ ಪ್ರಾರಂಭವಾಗುವದು, ಯಾವುದೊಂದು ವಸ್ತುವನ್ನು ಕುರಿತು ಕೊಡುವ ಉದ್ದುದ್ದವಾದ ವಿವರಣೆಗಳು ಮಕ್ಕಳ ಎಳೆಯ ಮನಸ್ಸನ್ನು ನಾಟಲಾರವು. ಆದ್ದುರಿಂದಲೇ ಪ್ರಾರಂಭದ ವರ್ಗಗಳಲ್ಲಿ ಜಾಣ ಶಿಕ್ಷಕನು ಯಾವುದೇ ವಸ್ತುವಿನ ಪರಿಚಯವನ್ನು ಚಿತ್ರ ಮುಖಾಂತರವೇ ಮಾಡಿಸುತ್ತಾನೆ. ಮಾದರಿಯ ಪಾಠಗಳನ್ನು ಕೊಡುವ ಶಿಕ್ಷಕನ ಜಾಣ್ಮೆಯು ಅವನು ಬಳಸುವ ಸಾಧನ ಸಲಕರಣೆಗಳನ್ನೇ ಅವಲಂಬಿಸಿರುತ್ತದೆ. ಪಾಠಕ್ಕೆ ಸಂಬಂಧಿಸಿದ ಚಿತ್ರವೂ ಅವನ ಸಾಧನ-ಸಲಕರಣೆಗಳಲ್ಲಿ ಅತಿ ಮುಖ್ಯವಾಗಿದೆ. ಆಕಳಿಗೆ ನಾಲ್ಕು ಕಾಲುಗಳಿರುತ್ತವೆ, ಎರಡು ಕಿವಿಗಳಿರುತ್ತವೆ, ಒಂದು ಬಾಲವಿರುತ್ತದೆ ಎಂದು ನಾವು ವಿವರಣೆ ಕೊಡುವುದರಿಂದ ಮಕ್ಕಳು ಒಂದು ವೇಳೆ ಅಲಕ್ಷ್ಯದಿಂದಲೋ, ತಿಳುವಳಿಕೆಯ ಅಭಾವದಿಂದಲೋ ಗೊಂದಲಕ್ಕೀಡಾಗಬಹುದು. ಆದರೆ ಆಕಳಿನ ಆಕರ್ಷಕವಾದ ಚಿತ್ರವೊಂದನ್ನು ನೇರವಾಗಿ ಮಗುವಿನ ಎದುರು ಹಿಡಿದಾಗ ಮಗುವು ಚಿತ್ರದಿಂದ ಆಕರ್ಷಿಸಲ್ಪಡುತ್ತದೆ. ಆಗ ಆಕಳಿನ ರೂಪವರ್ಣನೆಯನ್ನು ಕುರಿತು ವಿವರಗಳನ್ನು ಕೊಡುವ ಅಗತ್ಯತೆ ಕಂಡುಬರಲಾರದು. ಶಿಕ್ಷಕನು ಮಕ್ಕಳಿಗೆ ಆಕಳನ್ನು ಕುರಿತು ಏನನ್ನು ಕಲಿಸಬೇಕೆಂದುಕೊಂಡಿರುವನೋ ಆ ಎಲ್ಲ ವಿವರಗಳನ್ನು ಮಕ್ಕಳೇ ಕೊಡಲು ಆಕಳಿನ ಚಿತ್ರವು ಯೋಗ್ಯ ಸಾಮಗ್ರಿಯಾಗುತ್ತದೆ. ಇದನ್ನೇ ನಾವು ಶಿಕ್ಷಣ ಪದ್ಧತಿಯಲ್ಲಿ ಅಪರೋಕ್ಷ ಪದ್ಧತಿ ಎನ್ನುತೇವೆ. ಆದ್ದರಿಂದ ಆಕಳಿನ ಚಿತ್ರ ಮಹತ್ವದ ಸಲಕರಣೆಯೆಂದೇ ಶಿಕ್ಷಕನು ತಿಳಿದಿರುತ್ತಾನೆ.[೫] ಚಿತ್ರಕಲೆಯ ಮಹತ್ವದ ಬಗ್ಗೆ ದಿನಾಲು ಮಕ್ಕಳಿಗೆ ಮನವರಿಕೆ

೫. ಪ್ರ.ಟಿ. ಕಾಳೆ, ಚಿತ್ರಕಲಾ ಪರಿಚಯ, ಪುಟ-೯

ಮಾಡುವುದು ತುಂಬಾ ಅವಶ್ಯಕವಿದೆ. ಮಕ್ಕಳಲ್ಲಿ ಚಿತ್ರ ಬರೆಯಲು ಪ್ರೇರಪಿಸಬೇಕು. ಹೆಚ್ಚಾಗಿ ಪ್ರಕೃತಿಯಲ್ಲಿ ಕಾಣುವಂತಹ ಸಂದರ್ಭಗಳ ಬಗ್ಗೆ ತಿಳಿಹೇಳಬೇಕು.

೧. ಶಿಕ್ಷಕರು ಆದವರು ಕಲೆಯ ಸಾಮಾನ್ಯ ಜ್ಞಾನ ಮಕ್ಕಳಿಗೆ ತಿಳಿಸುವದರ ಜೊತೆಗೆ ವಸ್ತು ಅಥವಾ ಪ್ರಾಣಿ ಮುಂತಾದ ಚಿತ್ರಗಳ ಬಗ್ಗೆ ಪಾಠಹೇಳುವಾಗ ಆ ವಸ್ತುವಿನ ಬಿಡಿ ಭಾಗಗಳನ್ನು ಸರಳವಾಗಿ ಕಪ್ಪು ಹಲಗೆಯ ಮೇಲೆ ಮಕ್ಕಳಿಗೆ ತಗೆದು ತೋರಿಸುವುದು ತುಂಬಾ ಒಳ್ಳೆಯದು. ೨. ಇದರಿಂದ ಮಗುವಿಗೆ ಚಿತ್ರದ ಬಗ್ಗೆ ಕುತೂಹಲ ಇಮ್ಮಡಿಯಾಗುತ್ತದೆ. ೩. ತಾನು ಚಿತ್ರ ಬಿಡಿಸಲು ಆಸಕ್ತಿ ಬೆಳೆಯತೊಡಗುತ್ತದೆ. ಮಕ್ಕಳಿಗೆ ಕೆಲವು ಸಮಯದಲ್ಲಿ ಮಾರ್ಗದರ್ಶನ ಶಿಕ್ಷಕರಾದವರು ಚಿತ್ರಕ್ಕೆ ಪೂರಕವಾಗಿ ಮಾಹಿತಿ ಹೇಳಿಕೊಡಬೇಕು. ಈ ರೀತಿಯಾಗಿ ಹೇಳುವುದರಿಂದ ಮಕ್ಕಳು ಚಿತ್ರದಲ್ಲಿ ಬದಲಾವಣೆ ಕಂಡುಕೊಳ್ಳುತ್ತವೆ.

ಕಲ್ಪನೆಯ ಮುಖಾಂತರ ಚಿತ್ರ ರಚನೆ :

ಮಕ್ಕಳು ಹೆಚ್ಚಾಗಿ ಎದುರಿಗೆ ಇರುವ ವಸ್ತುಗಳನ್ನು ಗ್ರಹಿಸದೆ ಕಲ್ಪನೆಯ ಮೂಲಕ ಮೂಡಿದ ಚಿತ್ರಗಳನ್ನು ಕಾಗದದ ಮೇಲೆ ಗೀಚುತ್ತವೆ. ಇದಕ್ಕೆ ಮೂಲ ಕಾರಣ ಎದುರಿಗೆ ಕಾಣುವ ವಸ್ತುಕ್ಕಿಂತ ತಾನು ಕಲ್ಪನೆಯಲ್ಲಿ ನೋಡಿದ ಚಿತ್ರ ಅಥವಾ ಸನ್ನಿವೇಷ ತಲೆಯಲ್ಲಿ ಹಾಗೇ ಉಳಿದು ಕೊಂಡಿರುತ್ತ ಆದು ನೇರವಾಗಿ ಕಾಗದ ಮೇಲೆ ಚಿತ್ರ ಬರೆಯುವ ಸಮಯದಲ್ಲಿ ಎದುರುಗೆ ಇರುವ ವಸ್ತು ಗುಣವಾಗಿರುತ್ತದೆ. ಆಗ ತಾನು ಸ್ಮರಣೆಯ ಮೂಲಕ ಡ್ರಾಯಿಂಗ್ ಪೇಪರ್ ಮೇಲೆ ರೇಖಾಚಿತ್ರವನ್ನು ರಚನೆ ಮಾಡುತ್ತದೆ. "ಧ್ವನಿ, ರೇಖೆ, ಅಕ್ಷರ, ಇವು ಅಭ್ಯಾಸಕ್ಕೆ ಹೊಂದಿಕೊಳ್ಳುವಂತ ಹಾಗೂ ಅಭ್ಯಾಸಕ್ಕೆ ತಕ್ಕ ಮೌಲ್ಯಗಳನ್ನು ನೀಡುವಂತಹ ಅಂಶಗಳಾಗಿವೆ. ಇವುಗಳ ಬಳಕೆಯಿಂದ ಆಗುವ ಪ್ರಾರಂಭಿಕ ಹಂತದ ಅನುಭವ ಹಾಗೂ ಅಭ್ಯಾಸಗಳು ಶುದ್ಧ ಅರ್ಥಪೂರ್ಣ ಹಾಗೂ ಪ್ರೇರಣೆಯನ್ನು ನೀಡುವಂತಹ ಅಂಶಗಳಾಗಿರಬೇಕು. ಅನುಭವ ಹಾಗೂ ಅಭ್ಯಾಸ ಇವು ಕಲೆಯ ಪ್ರಾಥಮಿಕ ಹಂತ ಕೂಡಾ ಹೌದು. ಇನ್ನು ಮುಂದಿನ ಹಂತ ಕಲೆ. ಇಲ್ಲಿ ಮನಸ್ಸು ತನ್ನ ಚಿಂತನೆಯ ಮೂಲಕ ಹಲವು ವಿಚಾರಗಳ ಗುಣಗಳೊಂದಿಗೆ ಸುಳಿದಾಡಿಸಿ ವ್ಯವಸ್ಥಿತವಾದ ರೂಪುರೇಷೆಗಳನ್ನು ಸಿದ್ಧಪಡಿಸಿ ಹೊರಹೊಮ್ಮಿಸುವುದು".[೬]

ಮಗುವಿಗೆ ಚಲನ ಶೀಲ ವಸ್ತುಗಳು ಹೆಚ್ಚು ಆಕರ್ಷಣೆಗೆ ಒಳಗಾಗುತ್ತದೆ. ಜಡ ವಸ್ತುಗಳಿಗಿಂತ ಹೆಚ್ಚು ಇಷ್ಟಪಡುವ ವಸ್ತುಗಳೆಂದರೆ ನಾಯಿ, ಬೆಕ್ಕು, ಬಸ್ಸು, ಲಾರಿ, ಮನುಷ್ಯ, ಸೈಕಲ್, ಜಿರಾಫೆ ಹೀಗೆ ಮುಂತಾದ ಚಲನಶೀಲ ವಸ್ತುಗಳಾಗಿರಬಹುದು ಅಥವಾ ಪ್ರಾಣಿಗಳಾಗಿರಬಹುದು. ಮಕ್ಕಳು

೬. ಶಾಂತವೀರಣ್ಣ ಬುಸನೂರು, ಕಲಾಶಿಕ್ಷಣ, ಪುಟ–೩

ಕಲ್ಪನೆಯ ಮೂಲಕ ಚಿತ್ರ ಬರೆಯುತ್ತವೆ. ಚಿತ್ರ ಬರೆಯುತ್ತಾ ಮಗು ತನ್ನದೇಯಾದ ಸ್ಮರಣೆಯಿಂದ ಹೊಸ ರೀತಿಯಲ್ಲಿ ಕಲಾಕೃತಿ ನಿರ್ಮಾಣ ಮಾಡುತ್ತದೆ. ಇವುಗಳಿಗೆ ಯಾವುದೇ ಚಿತ್ರ ಬರೆಯುವಾಗ ಒತ್ತಡವಾಗಲಿ, ಅಡೆತಡೆಯಾಗಲಿ ಇರುವುದಿಲ್ಲ. ಮುಕ್ತವಾಗಿ ಚಿತ್ರಗಳನ್ನು ಬರೆಯುತ್ತಾರೆ.

ನಿಮ್ಮ ಮಗುವನ್ನು ಚಿತ್ರಕಲಾ ಸ್ಪರ್ಧೆಗೆ ಹಾಗೂ ತರಗತಿಗೆ ಕಳಿಸಬಹುದೇ?

"ಸ್ವತಂತ್ರವಾಗಿ ಅಭಿವ್ಯಕ್ತಿಗೊಳಿಸಲು ಅವಕಾಶ ಕೊಡುವ ಸ್ಪರ್ಧೆಗಳಿಗೆ ಕಳಿಸಬಹುದೇ ಹೊರತು, ಬಹುಮಾನಕ್ಕಾಗಿಯೇ ಇರುವಂತಹ ಸ್ಪರ್ಧೆಗಳಿಗೆ ಕಳಿಸದಿದ್ದರೆ ಕ್ಷೇಮ. ಏಕೆಂದರೆ ಸ್ಪರ್ಧಾತ್ಮಕ ಮನೋಭಾವನೆಯಿಂದ ಆತನ ಸಹಪಾಠಿಗಳು ಚಿತ್ರಗಳ ಬಗ್ಗೆ ಅಸಡ್ಡೆ ನೋಡಿ, ಅಸೂಯೆ ಮೂಡಬಹುದು. ಆದುದರಿಂದ ಮತ್ತೊಬ್ಬರ ಚಿತ್ರಗಳ ಬಗ್ಗೆ ಉತ್ತಮ ಗೌರವ ಮೂಡಿಸುವುದರ ಜೊತೆಗೆ ಅವನ ವ್ಯಕ್ತಿತ್ವಕ್ಕೆ ಕುಂದುಂಟಾಗದಂತೆ ಎಚ್ಚರವಹಿಸಬೇಕು.

ಮಕ್ಕಳು ಚಿತ್ರಕಲಾ ತರಗತಿಯಲ್ಲಿ ಸ್ವತಂತ್ರವಾಗಿ ಅಭಿವ್ಯಕ್ತಗೊಳಿಸಲು ಪ್ರೋತ್ಸಾಹಿಸಲಾಗುತ್ತದೆ. ಅಲ್ಲದೆ, ಸಹಕಾರ ಮನೋಭಾವನೆಯನ್ನು ಕಲಿಯುತ್ತಾರೆ. ಚಿತ್ರಕಲಾ ತರಗತಿ, ಮಕ್ಕಳ ಪಾಲಿಗೆ ವರದಾನವಿದ್ದಂತೆ. ಆದುದರಿಂದ ಪೋಷಕರು ತಮ್ಮ ಮಕ್ಕಳು ಆ ತರಗತಿಯ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಮಕ್ಕಳು ರಚಿಸುವ ವಿಧಾನ ಬಹಳ ಕ್ರಿಯಾತ್ಮಕವಾಗಿ ಕಲೆಯನ್ನು ಹೊರಹಾಕುತ್ತಾರೆ."[೭] ಇದರ ಒಳಗೊಂಡಂತೆ ಮಗುವಿನಲ್ಲಿ ಚುರುಕುತನ ಬೆಳೆಯಬೇಕಾದರೆ ಪೋಷಕರು ಇಂತಹ ಕಲಾ ತರಬೇತಿಗಳಿಗೆ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಶ್ಯಕವಾಗಿ ಅನುವು ಮಾಡಿಕೊಡಬೇಕು.

ಮಕ್ಕಳು ಹಾಳೆಯ ಮೇಲೆ ಎಳೆಯುವ ರೇಖೆ ಅಥವಾ ಗೀಚುವ ರೇಖೆ ತುಂಬಾ ಸರಳಾಗಿ ಕಂಡರೂ ಕೂಡಾ ಬರೆಯಲು ಆಗುವುದಿಲ್ಲಾ ಉದಾ: ಒಬ್ಬ ಕಲಾವಿದ ಮಕ್ಕಳು ಬರೆದ ರೇಖಾಚಿತ್ರವನ್ನು ನೋಡಿ ಮಕ್ಕಳಂತೆ ಬರೆಯಲು ಆಗಾಲ್ಲ. ಏಕೆಂದರೆ ಮಕ್ಕಳ ಚಿತ್ರಗಳು ಕೇವಲ ಚಿತ್ರಗಳಾಗಿ ಕಂಡರೂ ಅವುಗಳಲ್ಲಿ ಅರ್ಥವಿರುತ್ತದೆ. ಕಲಾವಿದ ಎಷ್ಟೇ ಮಕ್ಕಳಂತೆ ರಚಿಸಲು ಹೋದರೂ ಸಾಧ್ಯವಾಗುವುದಿಲ್ಲ ಸ್ವಲ್ಪವಾದರೂ ಚಿತ್ರದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಒಬ್ಬ ಕಲಾವಿದರು ಚಿತ್ರಿಸಿದ ಚಿತ್ರವನ್ನು ಮಕ್ಕಳು ಬರೆಯಲು ಪ್ರಯತ್ನಿಸುತ್ತಾರೆ. ಆದರೆ ಮಕ್ಕಳಂತೆ ನಾವು ಚಿತ್ರ ಬರೆಯಲು ಹೋದರೆ ಅವುಗಳಂತೆ ಬರೆಯಲು ನಮಗೆ ಆಗಲ್ಲ ಚಿತ್ರದಲ್ಲಿ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ. ಮಕ್ಕಳು ಯಾವುದೇ ವಸ್ತುವಾಗಿರಲಿ, ಪ್ರಾಣಿಗಳಾಗಿರಲಿ ಚಿತ್ರ ಬರೆಯುವಾಗ ನೈಜವಾಗಿ ರಚಿಸುವ ಆಸೆಯಿರುತ್ತದೆ. ಆದರೆ ಅಲ್ಲಿ ಅನುಭವ ಮತ್ತು ಬುದ್ಧಿ ಬೆಳೆದಿರುವುದಿಲ್ಲ. ಆದರೂ ಡ್ರಾಯಿಂಗ್ ಪೇಪರ್ ಮೇಲೆ ನೈಜವಾಗಿ ಚಿತ್ರ ಬರೆಯುವುದಕ್ಕೆ

೭. ವಿಶ್ವರೂಪಾಚಾರ್, ಕಲಾ ಮನೋವಿಜ್ಞಾನ, ಪುಟ–೨೬

ಆಗದೇ ಇದ್ದರೂ ಕೂಡ ಸತ್ಯಕ್ಕೆ ಸ್ವಲ್ಪ ಹತ್ತಿರವಾಗುವ ರೀತಿಯಲ್ಲಿ ಚಿತ್ರವನ್ನು ಬರೆಯುತ್ತದೆ. ಮಗುವಿನ ಕಲ್ಪನೆಯಲ್ಲಿ ಮೂಡಿದ ದೃಶ್ಯ ಚಿತ್ರವಾಗಿ ರೂಪಗೊಳ್ಳುತ್ತದೆ. ಮಗುವು ಬೆಳೆದಂತೆಲ್ಲ ದೈಹಿಕವಾಗಿ, ಮಾನಸಿಕವಾಗಿ ಬುದ್ಧಿ ಬೆಳೆವಣಿಗೆಯಾಗುತ್ತದೆಂದು ಭಾವಿಸಬೇಕು. ಎಲ್ಲ ಮಕ್ಕಳು ಒಂದೇ ರೀತಿಯಲ್ಲಿ ಬೆಳೆಯುವುದಿಲ್ಲ. ಕೆಲವು ಮಕ್ಕಳು ಬೆಳವಣಿಗೆ ಚುರುಕಾಗಿದ್ದು, ಕೆಲವರಲ್ಲಿ ನಿಧಾನವಾಗಿರಬಹುದು. ಸ್ವಲ್ಪಮಟ್ಟಿಗೆ ಏರುಪೇರುಗಳು ಸಹಜ. ಆದ್ದುರಿಂದಲೇ ತಾವು ಕಲಿತ ಹೊಸ ವರ್ತನೆಗಳನ್ನು ಹೊಸ ಕೌಶಲ್ಯಗಳನ್ನು ಮಕ್ಕಳು ಆನಂದಿಸುತ್ತವೆ.

ಮಕ್ಕಳ ಕಲಿಕೆಯ ಕಡೆಗೆ ಗಮನ :

ಮಕ್ಕಳಿಗೂ ಒಂದು ಮನಸ್ಸು ಅಂತಿರುತ್ತದೆ. ಅದಕ್ಕೂ ಸಾವಿರಾರು ಕನಸು ಕಾಣುತ್ತವೆ. ಮಕ್ಕಳನ್ನು ಚೆನ್ನಾಗಿ ನೋಡಿಕೊಂಡರೆ ಸಾಲದು ಅದಕ್ಕೆ ಏನು ಬೇಕು, ಏನು ಬೇಡ ಸೂಕ್ಷ್ಮವಾಗಿ ತಿಳಿದುಕೊಳ್ಳಬೇಕು.

* ಇಂದಿನ ಆಧುನಿಕ ಯುಗದೊಳಗೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ತಂದೆ-ತಾಯಿ ಇಬ್ಬರು ಕೆಲಸಕ್ಕೆ ಹೋಗುತ್ತಾರೆ. ಮಕ್ಕಳನ್ನು ಬೇಬಿ ಸಿಟಿಂಗ್‌ನಲ್ಲೂ ಮತ್ತು ಆಯಾಗಳನ್ನು ನೇಮಿಸಿ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ನೇಮಿಸಿ ಬಿಡುತ್ತಾರೆ.

* ಪೋಷಕರಲ್ಲಿ ಬೆಳೆಯುವುದುಕ್ಕಿಂತ ಹೆಚ್ಚಾಗಿ ಇವರ ಕೈಯಲ್ಲಿ ಮಕ್ಕಳು ಬೆಳೆಯುತ್ತವೆ. ಮಕ್ಕಳಿಗೆ ತಂದೆ-ತಾಯಿಯರ ಪ್ರೀತಿವಾತ್ಸಲ್ಯ ಗೊತ್ತಿರುವುದಿಲ್ಲ. ಇಷ್ಟೆಲ್ಲಾ ತೊಂದರೆಯಿರುವ ಮಗು ಖುಷಿಯಿಂದ ಇರಲು ಹೇಗೆ ಸಾಧ್ಯ.

* ತನಗೆ ಇಷ್ಟವಾದ ವಸ್ತು ಬೇಕಾದರೂ ಮನೆಯ ಕೆಲಸದವರಲ್ಲೇ ಕೇಳಬೇಕು. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳು ಮಾನಸಿಕವಾಗಿ ಹಿಂಸೆಗೆ ಒಳಗಾಗುತ್ತವೆ. ಈ ರೀತಿಯಾಗಬಾರದು. ಪೋಷಕರು ಮಕ್ಕಳಿಗಾಗಿಯೇ ಕೆಲವು ಸಮಯ ಮೀಸಲಿಡಬೇಕು. ಮಕ್ಕಳನ್ನು ಹೊರಗಡೆ ಕರೆದುಕೊಂಡು ಹೋಗಬೇಕು ಮತ್ತು ಅವುಗಳಿಗೆ ಇಷ್ಟವಾಗುವಂತಹ (ಡ್ರಾಯಿಂಗ್ ಬುಕ್ಸ್) ಬಣ್ಣ, ಆಟಿಕೆಗಳು ಇತ್ಯಾದಿ ಸೃಜನಶೀಲ ವ್ಯಕ್ತಿತ್ವ ಬೆಳೆಯುವುದಕ್ಕೆ ಮಕ್ಕಳಿಗೆ ಪೂರಕವಾದ ವಸ್ತುಗಳನ್ನು ಒದಗಿಸಿಕೊಡಬೇಕು. ಮಕ್ಕಳು ದೇಶದ ಸಂಪತ್ತು. ಅವುಗಳಿಗೆ ಇಷ್ಟವಾದ ಮಾಧ್ಯಮದಲ್ಲಿ ಮುಂದುವರೆಯಲು ಅವಕಾಶ ಕಲ್ಪಿಸಬೇಕು. ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ಮತ್ತು ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ತಾಯಿ-ತಂದೆಯರು ಉಳಿದೆಲ್ಲಗಿಂತ ಬಹಳ ಮುಖ್ಯವಾದ ಪಾತ್ರ, ಮಕ್ಕಳು ಪರಿಸರ, ಆಟದ ಸ್ಥಳ, ಶಾಲೆ ಇತ್ಯಾದಿ ಹೀಗಾಗಿ ಪೋಷಕರು ಮಗುವಿನ ಲಾಲನೆ-ಪಾಲನೆ ಮಾಡುವುದು ಅವಶ್ಯಕವಾಗಿದೆ.

ಇಂದಿನ ಶಾಲಾ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ಸಮಗ್ರ ಮತ್ತು ಸರ್ವತೋಮುಖ ಅಭಿವೃದ್ಧಿಗಾಗಿ ಶಿಕ್ಷಣ ನೀಡಬೇಕಾಗಿರುವುದು ಮುಖ್ಯ. ಮಕ್ಕಳಲ್ಲಿ ಹೇಳಿಕೊಡುವ ಪಾಠ ವಿಷಯಕ್ಕೆ ಪೂರಕವಾಗಿ ಹೇಳುವುದರಿಂದ ಬೇಗನೆ ಕಲಿತು ಕೇಳುವ ಬುದ್ಧಿ ಮಗುವಿನಲ್ಲಿ ಅಡಕವಾಗಿರುತ್ತದೆ. ಚಿಕ್ಕಮಕ್ಕಳಲ್ಲಿ ಚಿತ್ರದ ಬಗ್ಗೆ ಹೇಳುತ್ತ ಹೋದರೆ ಕುತೂಹಲದಿಂದ ಗ್ರಹಿಸುತ್ತವೆ. ಆದ್ದರಿಂದ ಶಿಕ್ಷಕರು ಚಿತ್ರದ ಕುರಿತು ಹೇಳುವಾಗ ಯಾವ ವಸ್ತುವಿಟ್ಟುಕೊಂಡು ಪಾಠ ಬೋಧನೆ ಮಾಡಲಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಬೇಕು. ಅಂತಹ ಕೆಲವು ಅಂಶಗಳು ಈ ರೀತಿಯಾಗಿ ಕಂಡುಬರುತ್ತವೆ.

೧. ಮಗುವಿಗೆ ಚಿತ್ರದ ಬಿಡಿ ಭಾಗಗಳನ್ನು ಹೇಳುವುದು ಮತ್ತು ವಸ್ತುವಿನ ಮುಖ್ಯವಾದ ಲಕ್ಷಣಗಳು ಯಾವುವು ಎಂದು ಗುರುತಿಸಿ ವಿವರವಾಗಿ ಹೇಳುವುದು ಉದಾ: ನಾಯಿ, ಮೇಕೆ, ಕೋಳಿ ಮುಂತಾದ ಆಕರಗಳ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಿಕೊಡುವುದು.

೨. ಚಿಕ್ಕಮಕ್ಕಳು ಏನೇ ಗೀಚಿದರು ಅದು ಚಿತ್ರವಾಗಿ ಹೊರಹೊಮ್ಮುತ್ತದೆ. ಅಂತಹ ಚಿತ್ರಗಳನ್ನು ಶಿಕ್ಷಕರಾದವರು ನೋಡಿ ಮಗುವಿಗೆ ಪ್ರೋತ್ಸಾಹ ನೀಡಬೇಕು.

೩. ವಾರದಲ್ಲಿ ಕೊನೆಯ ದಿನ ಚಿತ್ರಕಲಾ ಸ್ಪರ್ಧೆ ಆಯೋಜನೆ ಮಾಡಬೇಕು. ಇದರಿಂದ ಮಗುವಿನ ಚಿತ್ರದ ಬಗ್ಗೆ ಆಸಕ್ತಿ, ಒಲವು ಹೆಚ್ಚಾಗುತ್ತದೆ.

೪. ಮಗು ಯಾವುದೇ ವಸ್ತುವನ್ನು ನೋಡಿದರು ನೆನಪಿನಲ್ಲಿ ಉಳಿಯುವಂತೆ ಸಾಮರ್ಥ್ಯ ಹೊಂದಿರುತ್ತದೆ. ಆದ್ದರಿಂದ ಶಿಕ್ಷಕರಾದವರು ಯಾವುದೇ ಚಿತ್ರದ ಬಗ್ಗೆ ಹೇಳುವಾಗ ವಸ್ತುನಿಷ್ಠವಾಗಿ ಪಾಠ ಬೋಧನೆ ಮಾಡುವುದು ಒಳ್ಳೆಯದು. ಈ ರೀತಿಯಾಗಿ ಮಕ್ಕಳಿಗೆ ಮಾರ್ಗದರ್ಶನ ಮಾಡುವುದು ಶಿಕ್ಷಕರ ಜವಾಬ್ದಾರಿಯಾಗಿದೆ. ಇದರಿಂದ ಚಿತ್ರಕಲೆಯ ಕುರಿತು ಹೊಸತನ ಅವರಲ್ಲಿ ಆಸಕ್ತಿ ಮೂಡುತ್ತದೆ. ಮಕ್ಕಳ ಚಿತ್ರಗಳು ಅಮೂಲ್ಯವಾದವು, ಇವರು ಚಿತ್ರಗಳನು ನೋಡಿ ಚಿತ್ರಿಸುವುದಿಲ್ಲ, ಕಲ್ಪನೆಯಿಂದಲೇ ಚಿತ್ರಿಸುತ್ತಾರೆ. ಇದರಲ್ಲಿ ಆಸಕ್ತಿಯಿರುವುದರಿಂದ ನೋಡಿ ಚಿತ್ರಿಸುವುದಕ್ಕಿಂತ ಸ್ಮರಣೆಯಲ್ಲಿ ಮೂಡಿದ ಚಿತ್ರಗಳೇ ಹೆಚ್ಚು ಮಗುವಿನ ಮೇಲೆ ಪರಿಣಾಮ ಬೀರುತ್ತದೆ.

"ಕಲ್ಪನೆಗಳು ಅಥವಾ ಪ್ರತಿಮೆಗಳು ಸುಪ್ತ ಮನಸ್ಸಿನಿಂದ, ಜಾಗೃತ ಮನಸ್ಸಿಗೆ ವರ್ಗಾವಣೆಗೊಳ್ಳುವಾಗ ಮಹತ್ತರವಾದ ಸೃಜನಾತ್ಮತಕೆಯಲ್ಲಿ ತೊಡಗುತ್ತವೆ. ಇದು ನೇರವಾದ ಅಥವಾ ಒಂದೇ ವಿಧದ ಪ್ರಕ್ರಿಯೆ ಚಲನೆಯಾಗಿರುತ್ತದೆ. ಸೃಜನಾತ್ಮಕ ಪ್ರಕ್ರಿಯೆ ಸುಪ್ತ ಮನಸ್ಸಿನಿಂದ ಜಾಗೃತ ಮನಸ್ಸಿಗೆ ಅನಂತರ ಸೂಪರ್ ಜಾಗೃತ ಮನಸ್ಸಿಗೆ ಪುನಃ ಸುಪ್ತ ಮನಸ್ಸಿಗೆ ಹಿಂದಿರುಗುತ್ತದೆ. ಸುಪ್ತ ಮನಸ್ಸಿಗೆ (ಒಳ ಮನಸ್ಸು) ಹಿಂತಿರುಗಿ ಹೊಸ ಕಲ್ಪನೆಗಳು ಮತ್ತು ಪ್ರತಿಮೆಗಳು ಗರಿ ಕಟ್ಟಿಕೊಳ್ಳುತ್ತವೆ"[೮]

ಈ ರೀತಿ ಹೇಳುವುದಾದರೆ ಮಗುವಿನ ಕಲ್ಪನೆ ಮತ್ತು ಸುಪ್ತ ಮನಸ್ಸಿನಿಂದ ನೆನಪಿನಲ್ಲಿ ಉಳಿಯುವಂತೆ ತನ್ನ ಮೆದಳುನಲ್ಲಿ ಶೇಕರಣೆ ಮಾಡಿಕೊಳ್ಳುತ್ತದೆ. ತಾನು ಬರೆಯುವ ಚಿತ್ರ ಹಲವಾರು ದೃಶ್ಯಗಳು

೮. ಎಸ್. ಮರಿಶಾಮಾಚಾರ್, ಕಲಾ ಮನೋವಿಜ್ಞಾನ, ಪುಟ–೧೮

ಮಗುವಿನ ಕಣ್ಣಿಗೆ ಬಿದ್ದು ಆ ದೃಶ್ಯ ತನ್ನ ಮನಸ್ಸಿಗೆ ಹತ್ತಿರವೆನಿಸಿದರೆ ಚಿತ್ರ ಬರೆಯುವುದರ ಮೂಲಕ ಅಥವಾ ಹಾಳೆಗಳ ಮೇಲೆ ಗೀಚುವುದರ ಮೂಲಕ ಕಲೆಯನ್ನು ಅಭಿವ್ಯಕ್ತಿಸುತ್ತದೆ.

ಮಗು ಚಿತ್ರ ಬರೆಯುವಾಗ ವಸ್ತು ವಿಷಯವಾಗಿ ಇಂತದ್ದೇ ಅಂತ ಇಟ್ಟುಕೊಂಡು ಚಿತ್ರ ಬರೆಯುತ್ತದೆ ಎಂದು ಹೇಳುವುದು ಕಷ್ಟ. ಅವುಗಳಿಗೆ ಏನು ತಿಳಿಯುವುದು ಅದನ್ನೇ ಸಿಕ್ಕ ಜಾಗಗಳಲ್ಲಿ ಅಂದರೆ ಗೋಡೆಯಾಗಿರಬಹುದು, ನೆಲ, ಡ್ರಾಯಿಂಗ್ ಪೇಪರ್, ಕರಿ ಹಲಗೆ ಹೀಗೆ ಮುಂತಾದ ಸ್ಥಳಗಳಲ್ಲಿ ಚಿತ್ರ ಬರೆಯಲು ಮುಂದಾಗುತ್ತದೆ. ವಿಶೇಷವಾದ ಕೌಶಲ್ಯ ಮಗುವಿನಲ್ಲಿ ಅಡಗಿಕೊಂಡಿರುತ್ತದೆ.

ಒಟ್ಟಿನಲ್ಲಿ ಶೈಕ್ಷಣಿಕವಾಗಿ ಮಕ್ಕಳು ಪ್ರಗತಿ ಆಗಬೇಕಾದರೆ ಪೋಷಕ, ಶಿಕ್ಷಕರ ಪಾತ್ರ ಮುಖ್ಯವಾಗಿದೆ. ಪೋಷಕರು ತಮ್ಮ ಮಕ್ಕಳ ಜವಾಬ್ದಾರಿಯನ್ನು ಶಿಕ್ಷಕರ ಮೇಲಿದೆ ಎಂದು ಭಾವಿಸಬಾರದು. ಒಂದು ಕೈಯಿಂದ ಚಪ್ಪಾಳೆ ತಟ್ಟಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಶಿಕ್ಷಕರು ಪೋಷಕರ ಮೇಲೆ, ಪೋಷಕರು ಶಿಕ್ಷಕರ ಮೇಲೆ ಹೇಳದೆ ಮಕ್ಕಳ ಶಿಕ್ಷಣದ ಜವಾಬ್ದಾರಿ ಪೂರ್ಣ ಇಬ್ಬರಿಗೂ ಸೇರಿದೆ ಎಂದು ಭಾವಿಸಿ ಮಕ್ಕಳ ಕಲಿಕೆಯ ಕಡೆಗೆ ಗಮನ ನೀಡಬೇಕು. ಆಗಲೇ ಮಕ್ಕಳ ಭವಿಷ್ಯ ಉಜ್ವಲವಾದೀತು. ಇದರಿಂದ ವ್ಯಕ್ತಿ ಶಾಲೆ ಸಮುದಾಯ, ರಾಷ್ಟ್ರದ ಅಭಿವೃದ್ಧಿಯೂ ಸಾಧ್ಯವಾದೀತು. ಮಕ್ಕಳು ಖುಷಿಯಾಗಿಯರಲೋ ಮತ್ತು ಮಾನಸಿಕವಾಗಿ ನೆಮ್ಮದಿಯಿಂದಲು ಚಿತ್ರಕಲಾ ಶಿಕ್ಷಣ ಅವಶ್ಯಕ ಕೂಡ ಹೌದು. ನಾನು ತಿಳಿದುಕೊಂಡಿರುವ ಪ್ರಕಾರ ಇಂದಿನ (ಸಿ.ಬಿ.ಎಸ್.ಸಿ.) ಶಿಕ್ಷಣ ಸಂಸ್ಥೆಗಳಲ್ಲಿ, ಪ್ರಾಥಮಿಕ ಶಾಲೆ (ಇಂಗ್ಲೀಷ್ ಮಿಡಿಯಮ್)ಗಳಲ್ಲಿ "ಚಿತ್ರಕಲೆ" ಒಂದು ವಿಷಯವಾಗಿ ಪರಿಗಣಿಸಿ ಚಿತ್ರಕಲಾ ಶಿಕ್ಷಕರನ್ನು ಬೋಧನೆಗೆ ಅವಕಾಶ ಸಿಗುವಂತಾಗಿದೆ. ಈ ರೀತಿ "ಕಲೆ"ಗೆ ಗೌರವ ಸಿಕ್ಕರೆ ಚಿತ್ರಕಲಾ ಕ್ಷೇತ್ರ ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆಯಲು ಯೋಗ್ಯವಾದ ಸಂಸ್ಥೆಗಳು ಮುಂದೆ ಬರಬೇಕು ಮತ್ತು ವಸ್ತುನಿಷ್ಠವಾಗಿ ಚಿತ್ರಕಲೆ ಹಲವಾರು ಕ್ಷೇತ್ರಗಳಲ್ಲಿ ಅವಕಾಶ ದೊರಕುವ ಹಾಗೆ ಮಾನ್ಯತೆ ನೀಡಬೇಕು.

ಅಧ್ಯಾಯ – ಆರು
ಚಿಕ್ಕ ಮಕ್ಕಳ ಚಿತ್ರಕಲೆಯ ಒಂದು ತೌಲನಿಕ ಅಧ್ಯಯನ



ಅಧ್ಯಾಯ – ೬
ಚಿಕ್ಕ ಮಕ್ಕಳ ಚಿತ್ರಕಲೆಯ ಒಂದು ತೌಲನಿಕ ಅಧ್ಯಯನ

ಚಿಕ್ಕ ಮಕ್ಕಳ ಚಿತ್ರಕಲೆ ನೋಡಲು ಸರಳ ಅಷ್ಟೇ ಕುತೂಹಲಕರ. ಮಕ್ಕಳ ಆಲೋಚನೆಯಲ್ಲಿ ಮೂಡಿದ ಕಲೆಯೂ ವಿಭಿನ್ನವಾಗಿ ವ್ಯಕ್ತಿ ಪಡಿಸುತ್ತವೆ. ಸ್ವಚ್ಚ ಮನಸ್ಸಿನಿಂದ ಕೂಡಿದ ಮಕ್ಕಳು ಚಿತ್ರ ಬರೆಯುವದರಿಂದ ಹೊಸ ಚೈತನ್ಯ ಮೈಗೂಡಿಸಿಕೋಳ್ಳುವುದಕ್ಕೆ ಈ ಮಾಧ್ಯಮ ಮಕ್ಕಳಿಗೆ ತುಂಬಾ ಉಪಯುಕ್ತ. ಕಲೆಯು ಎಲ್ಲಾ ಮಗುವಿನಲ್ಲಿ ಚಿಗುರುವಡೆದಿರುತ್ತದೆ. ಆದರೆ ಒಂದು ಮಗುವಿನಲ್ಲಿ ಇದ್ದ ಭಾವನೆ, ವ್ಯಕ್ತಪಡಿಸುವ ರೀತಿ ಇನ್ನೊಂದರಲ್ಲಿ ಇರುವುದಿಲ್ಲಾ. ಕೆಲವು ಮಕ್ಕಳು ಹಾಡು, ನೃತ್ಯ, ಓದುವದರಲ್ಲಿ ಮುಂದೆಯಿದ್ದರೆ, ಇನ್ನು ಕೆಲವು ಮಕ್ಕಳು ಚಿತ್ರಕಲೆ, ನಾಟಕ, ಬರಹ ಇತ್ಯದಿ ಕಲೆಗಳಲ್ಲಿ ತೊಡಗಿಸಿಕೊಂಡಿರುತ್ತವೆ. ಲಲಿತ ಕಲೆಗಳಲ್ಲಿ ಚಿತ್ರಕಲೆ ತುಂಬಾ ವಿಶೇಷ ಎಲ್ಲಾ ಮಾಧ್ಯಮಗಳು ಬೆಳವಣಿಗೆ ಹೊಂದಿರು ಕೂಡಾ ಮಕ್ಕಳು ಮೊದಲು ಚಿತ್ರಕಲೆಗೆ ಪ್ರಭಾವಕ್ಕೆ ಒಳಗಾಗುತ್ತವೆ. ಅಂತಹ ಶಕ್ತಿ ಈ ಕಲೆಗೆ ಇದೆ.

"ಚಿತ್ರಕಲೆ" ಎಂದಾಕ್ಷಣ ಅದೊಂದು ಪ್ರತಿಭೆ ಎಂತಲೂ ಅದನ್ನು ಎಲ್ಲರೂ ಕಲಿಯಲಾಗುವುದಿಲ್ಲ. ಕೇವಲ ಕೆಲವೇ ಮಕ್ಕಳು ಮಾತ್ರ ಕಲಿಯಲು ಸಾಧ್ಯ. ಅದು ಅನುವಂಶಿಕವಾಗಿ ಬರಬೇಕು ಇತ್ಯಾದಿಯಾಗಿ ಅನೇಕ ವರ್ಷಗಳಿಂದ ಅನೇಕರು ಮಾತನಾಡುವುದನ್ನು ಕೇಳಿದ್ದೇವೆ. ಚಿತ್ರಕಲಾ ಮಾಧ್ಯಮ ಕೇವಲ ಪ್ರತಿಭೆಯಲ್ಲಿ, ಮಕ್ಕಳು ಶೈಶಾವಸ್ಥೆಯ ಹಂತದಿಂದಲೂ ತಮ್ಮ ಸುಪ್ತಚೇತನದಲ್ಲಿನ ಅಸಂಖ್ಯಾತ ಉಚಿತ, ಅನುಚಿತ ನೆನಪುಗಳಿಗೆ ರೂಪ ನೀಡಿ ಬಾಹ್ಯ ಪ್ರಪಂಚದೊಂದಿಗೆ ಸಂವಾದಿಸುವ 'ಸಂವಹನ' ಮಾಧ್ಯಮ. ಮಗುವಿನ ತಹತಹ ಮನಸ್ಸು ತಾನು ಅಭಿವ್ಯಕ್ತಿಗೊಳಿಸಿದ ಚಿತ್ರದ ಮೂಲಕ ತನ್ನನ್ನೇ ತಾನು ಸಂತೈಸಿಕೊಳ್ಳುವ ಒಂದು ಸಂಕೀರ್ಣ ಪ್ರಕ್ರಿಯೆ. ಮಗು ಈ

ಮೂಲಕ ಹೊರ ಜಗತ್ತಿಗೆ ಕಾಣಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಹೀಗೆ ಚಿತ್ರಗಳು ಕಲಾ ಪ್ರಕಾರಗಳ ಮೂಲಕ ಸೃಷ್ಟಿಯಾಗುವ ಮಕ್ಕಳ ಕಲಾಕೃತಿಗಳನ್ನು ಅಧ್ಯಯನ ಮಾಡಿದಲ್ಲಿ ಮುಂದಿನ ಪೀಳಿಗೆಯನ್ನು ಅರಿತು, ಭವಿಷ್ಯ ರೂಢಿಸುವಲ್ಲಿ ಸಹಕಾರಿಯಾಗಬಲ್ಲದು. ಮಕ್ಕಳ ಚಿತ್ರಗಳು ಅವರ ಮನಸ್ಸನ್ನು ಅರಿಯುವ ಒಂದು ಅಮೂಲ್ಯ ಸಾಧನವಾಗಿ ಗೋಚರಿಸುತ್ತವೆ."[೧] ಎಂದು ಹೇಳುತ್ತಾರೆ ಹಾಗಾಗಿ ಮಗುವಿನ ಆಲೋಚನೆಗಳು, ಗುರಿಗಳೂ, ವರ್ತನೆಗಳೂ, ಧ್ಯೇಯೋದ್ದೇಶಗಳು, ಪರಿಸರದ ಪ್ರಭಾವದಿಂದಲೇ ರೂಪಿಸಲ್ಪಡುತ್ತವೆ. ಹೀಗಾಗಿ ಮಗುವನ್ನು ಸಕಾರಾತ್ಮಕವಾಗಿ ಚಿಂತಸಲು, ಉತ್ತಮವಾದ ಸೌಲಭ್ಯವುಳ್ಳದ್ದನ್ನು ಒದಗಿಸುವುದು ಚಿತ್ರ ಬರೆಯುವ ಮಗುವನ್ನು ಪ್ರೋತ್ಸಾಹಿಸುವುದು ಪೋಷಕರ ಕರ್ತವ್ಯವಾಗಿದೆ.

ಚಿಕ್ಕ ಮಕ್ಕಳ ಚಿತ್ರಕಲೆ ಆ ಹೆಸರೇ ಹೇಳುವಂತೆ ಎಲ್ಲಾ ರೀತಿ ಚಟುವಟಿಕೆಯಿಂದ ಇರಲು ಈ ಚಿತ್ರಕಲೆ ಉತ್ತಮವಾಗಿದೆ. ಮಕ್ಕಳು ಯಾವ ವಯಸ್ಸಿಸಲ್ಲಿ ಹೇಗೆ ಚಿತ್ರ ಬರೆಯುತ್ತವೆ, ಎಂತಹ ಚಿತ್ರಗಳು ಒಂದನೇ ವಯಸ್ಸಿನಲ್ಲಿ ಚಿತ್ರ ಹೇಗೆಯಿರುತ್ತದೆ. ೨ರಿಂದ ೫ರ ವಯಸ್ಸಿನಲ್ಲಿ ಯಾವ ಯಾವ ಚಿತ್ರಗಳು ಮೂಡುತ್ತವೆ, ೫ರಿಂದ ೧೦ ವಯಸ್ಸಿನಲ್ಲಿ ಬುದ್ದಿ ಚಿಗುರು ಒಡೆದಾಗ ಯಾವ ರೀತಿ ಪ್ರಸ್ತುತ ಪಡಿಸುತ್ತವೆ, ೧೦ರಿಂದ ೧೨ರ ಪ್ರೌಢಿಮೆ ಹಂತದಲ್ಲಿ ಹೇಗೆ ಚಿತ್ರ ರಚನೆ ಮಾಡುತ್ತವೆ ಎನ್ನುವ ಕುರಿತು ತೌಲನಿಕವಾಗಿ ಮಕ್ಕಳ ಚಿತ್ರಗಳ ಸ್ಥೂಲವಾಗಿ ವಯಸ್ಸಿನ ಹಂತದಲ್ಲಿ ರಚನೆ ಮಾಡುವ ಮಗುವಿನ ಚಿತ್ರಗಳು ಯಾವ ರೀತಿಯಿರುತ್ತದೆ. ಇವರ ಚಿತ್ರಗಳಲ್ಲಿ ಹೊಸದಾಗಿ ಏನು ಗುರುತಿಸುವುದಕ್ಕೆ ಸಾಧ್ಯ. ಇಂತಹ ಹಲವಾರು ಮಕ್ಕಳ ಕಲೆಯಲ್ಲಿ ಕಂಡುಕೊಳ್ಳಬಹುದು. ಮತ್ತು ಯಾವ ರೀತಿ ಬರೆಯುತ್ತವೆ ಅಂತಹವುಗಳ ಕುರಿತು ಹೇಳಲಾಗುವುದು.

ಕಲಾ ವಿಮರ್ಶೆಗೆ ತೌಲನಿಕ ದೃಷ್ಟಿಕೋನ :

"ಕಲಾ ಇತಿಹಾಸ ಹಾಗೂ ಕಲಾ ವಿಮರ್ಶೆಗೆ ತೌಲನಿಕ ದೃಷ್ಟಿಕೋನವನ್ನು ತಂದವರು **ಹ್ಯಾವೆಲ್, ಆನಂದ ಕುಮಾರ ಸ್ವಾಮಿ, ಹೆನ್ರಿಕ್ ಜಿಮ್ಮರ್, ಸ್ಟೆಲಾ ಕ್ರಾಮರಿಷ್** ಮೊದಲಾದವರು ಕಲಾ ಇತಿಹಾಸ ನಿರೂಪಣೆಯಲ್ಲಿ ಹಿಂದೆಂದೂ ಕಾಣದಿದ್ದ ತೀಕ್ಷ್ಣ ವಿಮರ್ಶಾದೃಷ್ಟಿಯನ್ನು ಅಂತರ್ ದೃಷ್ಟಿಯನ್ನು ಇವರು ತೋರಿದರು. ಭಾರತೀಯ ದೃಶ್ಯಕಲೆಯ ಮಹತ್ವವನ್ನು ವಿವರಿಸುವಲ್ಲಿ ಭಾರತೀಯ ಕಲೆಯ ಪ್ರಭಾವ ಇತರ ದೇಶಗಳ ಮೇಲೆ ಆದ ಬಗೆಯನ್ನೂ, ಪರಿವರ್ತನೆ, ಪರಿಣಾಮಗಳನ್ನೂ ಗುರುತಿಸಿದರು."[೨] ತೌಲನಿಕ ಎನ್ನುವುದು ವಿಮರ್ಶೆ ಕಲಾಕೃತಿಯಾಗಿರಬಹುದು, ಸಾಹಿತ್ಯ ಆಗಿರಬಹುದು, ನಾಟಕ, ಸಿನಿಮಾ, ಇನ್ಯಾವುದೇ ವಿಷಯವಾಗಿರಬಹುದು ಇಲ್ಲಿ

೧. ಎಂ.ಎಸ್. ಮೂರ್ತಿ, ದೇಸಿ ನಗು, ಪುಟ-೩೬
೨. ಪಿ.ಆರ್. ತಿಪ್ಪೇಸ್ವಾಮಿ (ಸಂ), ಚಿತ್ರಕಲಾ ಪ್ರಪಂಚ ಪುಟ-೪೪೪-೪೪೫

ತೌಲನಿಕವಾಗಿ (comparative study) ಇವುಗಳನ್ನು ವಿಮರ್ಶೆ ಮಾಡುವುದು ಒಬ್ಬ ಹಿರಿಯ ಕಲಾವಿದ ಮತ್ತು ಯುವ ಕಲಾವಿದರಗಳ ಕಲಾಕೃತಿಗಳನ್ನು ಎರಡು ಪಕ್ಕದಲ್ಲಿ ಇಟ್ಟು ಕಲಾಕೃತಿಯಲ್ಲಿ ಏನೇನು ಅಂಶಗಳು ಒಲಗೊಂಡಿವೆ. ಯಾವ ಕೃತಿಯಲ್ಲಿ ದೋಷವಿದೆ, ಅಥವಾ ಇದರಲ್ಲಿ ಗುಣ ವಿಶೇಷತೆಯನ್ನು ಸಾಮಾಜಕ್ಕೆ ಏನು ಸಂದೇಶ ಕೊಡುತ್ತದೆ. ಹೀಗೆ ಮುಂತಾದ ಅಂಶಗಳು ಕಲಾಕೃತಿಯ ಬಗ್ಗೆ ಎರಡರಲ್ಲಿ ವ್ಯತ್ಯಾಸವನ್ನು ತೌಲನಿಕವಾಗಿ ವಿಮರ್ಶೆ ಮಾಡುವುದು, ಇಲ್ಲಿ ಹಿರಿಯ ಮತ್ತು ಕಿರಿಯ ಕಲಾವಿದ ಅಂತ ನೋಡುವದಕ್ಕಿಂತ ಕಲಾಕೃತಿ ನೋಡುವುದು ಬಹಳ ಸಮಂಜಸವಾಗಿದೆ. ತೌಲನಿಕ ಎನ್ನುವುದು ವಿಮರ್ಶೆಯ ರೂಪ ಪಡೆದುಕೊಳ್ಳುವ ಒಂದು ವಿಧಾನ. ವ್ಯಕ್ತಿಗತ ಆಗಿರಬಹುದು ಅಥವಾ ಸಾಧನೆ ರೂಪದಲ್ಲಾದರು ಆಗಿರಬಹುದು. ಅದರ ಒಳಗಿನ ಕೆಲವು ಅಂಶಗಳು ಈ ಸಮಾಜಕ್ಕೆ ಏನು ಕೊಡುತ್ತವೆ ಎಂಬುದು ಮುಖ್ಯ. ಮಗುವಿನ ಕಲೆಯು ಸಹ ಚಿತ್ರಗಳು ಎಂತಹ ಕಲ್ಲು ಹೃದಯವಿದ್ದರೂ ಕೂಡ ಮಗುವಿನ ಆಕ್ಷಣದ ಚಿತ್ರಗಳನ್ನು ನೋಡಿ ಕರಗಿ ನೀರಾಗಲುಬಹುದು. ಅಂತಹ ಶಕ್ತಿ ಮತ್ತು ಆಕರ್ಷಿಸುವ ಸಾಮರ್ಥ್ಯ ಈ ಕಲೆಗಿದೆ.

ಒಟ್ಟಿನಲ್ಲಿ ಈ ತೌಲನಿಕ ಎನ್ನುವ ಪದ ಬಳಿಕೆ ತಂದವರು ಮೇಲೆ ಹೇಳಿದ ಹಾಗೆ ಮಹನಿಯರಾಗಿದ್ದಾರೆ. ಈ ನಿಲುವಿಗೆ ಅಪವಾದ ಎಂಬಂತೆ ವಿಮರ್ಶೆಯ ವ್ಯವಸಾಯ ನಡೆಸಿದವರು ಮುಲ್ಕರಾಜ್ ಆನಂದ, ನಿಹಾರರಂಜನ ರಾಯ್ ಮುಂತಾದವರು. ನಿಹಾರರಂಜನ ರಾಯ್ ಕಲೆಗೆ ಆಯಾ ಕಾಲದ ಅಥವಾ ಪ್ರದೇಶದ ಸಾಮಾಜಿಕ ಹಿನ್ನೆಲೆ ಹೇಗೆ ಪ್ರೇರಕವಾಯಿತು ಎಂಬುದನ್ನು ವಿವೇಚಿಸಿದರು. ಕನ್ನಡಲ್ಲಿ ಡಾ. ಶಿವರಾಮ ಕಾರಂತರು ಈ ಬಗೆಯ ಕಲಾವಿಮರ್ಶೆಯನ್ನು, ಅದರಲ್ಲೂ ಕಾಲ ಮತ್ತು ಕಲಾ ಸೌಂದರ್ಯ ದೃಷ್ಟಿಯಿಂದ ಬರೆದಿದ್ದಾರೆ ಹಾಗೆಯೇ ಅನೇಕ ಕಲಾವಿದರು ಇದ್ದಾರೆ. ಅವರುಗಳು ಬಿನೋದ ಬಿಹಾರಿ ಮುಖರ್ಜಿ, ಕೆ.ಜಿ. ಸುಬ್ರಮಣಿಯನ್, ಸ್ವಾಮಿನಾಥನ್ ಮುಂತಾದವರು. ಕನ್ನಡದಲ್ಲಿ ಪತ್ರಿಕಾ ಪ್ರಪಂಚದಿಂದ ಮಾತ್ರವಲ್ಲ, ಕಲಾವೃತ್ತಿಯಲ್ಲೂ ಇಲ್ಲದಿದ್ದ ಶಿವರಾಮಕಾರಂತ, ವಿ.ಸೀ., ಅ.ನ.ಕೃ. ಮುಂತಾದವರು ಹೆಚ್ಚಾಗಿ ಕಲಾ ವಿಮರ್ಶೆಯಲ್ಲಿ ತೊಡಗಿದ್ದು ಕುತೂಹಲಕಾರಿಯಾಗಿದೆ. ಇದರ ಒಳಗೊಂಡಂತೆ ಮಕ್ಕಳ ಕಲೆಯಲ್ಲೂ ತೌಲನಿಕವಾಗಿ ನೋಡವದಾದರೆ ಇವರ ಕಲಾಕೃತಿಗಳಲ್ಲಿ ಯಾವುದಕ್ಕೆ ಹೆಚ್ಚು ಮಹತ್ವವಿದೆ. ಇಲ್ಲಿಯ ಮಕ್ಕಳ ವಯೋಮಾನಕ್ಕೆ ತಕ್ಕಂತೆ ಚಿತ್ರಗಳ ಕುರಿತು ತೌಲನಿಕವಾಗಿ ಅಧ್ಯಯನ ಮಾಡುವುದು. ಮಕ್ಕಳ ಕಲೆಯಲ್ಲಿ ವಸ್ತು ವಿಷಯವಾಗಿರಬಹುದು, ರಚನಾ ವಿಧಾನವಾಗಿರಬಹುದು, ಇತ್ಯಾದಿ ತಂತ್ರಗಳನ್ನು ಬಳಸಿ ಕಲಾಕೃತಿಗಳನ್ನು ನಿರ್ಮಿಸುವ ಮಕ್ಕಳು ಚಿತ್ರಗಳಿಗೆ ಮಹತ್ವ ಕೊಟ್ಟಿರುವುದನ್ನು ಗಮನಿಸುವುದು. ಇವುಗಳ ಕಲೆಯನ್ನು ವಿಮರ್ಶೆ

ಮಾಡುವುದಕ್ಕಿಂತ ಪ್ರಸ್ತುತ ಸಂದರ್ಭದಲ್ಲಿ ಏನು ನಡೆದಿದೆ ಎಂದು ಮಕ್ಕಳಿಗೆ ಕಲೆಯ ಕುರಿತು ಹೇಳುವುದು ತುಂಬಾ ಅವಶ್ಯಕವಾಗಿದೆ.

ವಯೋಮಾನಕ್ಕೆ ತಕ್ಕಂತೆ ಮಕ್ಕಳಲ್ಲಿ ಮೂಡಿದ ಚಿತ್ರಕಲೆ :

ಸಾಮಾನ್ಯವಾಗಿ ಎಲ್ಲಾ ಮಕ್ಕಳು ಚಿತ್ರಗಳನ್ನು ಬರೆಯುತ್ತಾರೆ. ಕಲೆಗೆ ಯಾವುದೇ ಬೇದ ಬಾವ ಎನ್ನುವುದಿಲ್ಲ. ಎರಡು ವರ್ಷದಿಂದ ಹಿಡಿದು ಪ್ರೌಢಾವಸ್ಥೆಗೆ ಬರುವರಿಗೂ ಮಗುವಿಗೆ ತುಂಬಾ ಇಷ್ಟವಾದ ಮಾಧ್ಯಮ ಚಿತ್ರಕಲೆ ಅಥವಾ ಮಗು ಚಿತ್ರಕಲೆಯನ್ನು ಮುಂದುವರಿಸಿಕೊಂಡು ಹೋಗಲುಬಹುದು. ಇಲ್ಲಿ ವಯೋಮಾನಕ್ಕೆ ತಕ್ಕಂತಹ ಚಿತ್ರಗಳನ್ನು ಮಕ್ಕಳು ಬರೆಯುತ್ತಾ ಚಿತ್ರದಲ್ಲಿ ವ್ಯತ್ಯಾಸ ಕಂಡುಬರುತ್ತವೆ. ಸುಮಾರು ಐದರಿಂದ ಏಳು ವರ್ಷಗಳ ನಡುವೆ ಮೊದಲೇ ಸಂಘಟಿತವಾದ ವ್ಯಕ್ತಿಯು ಇನ್ನಷ್ಟು ವಿಕಸಿತಗೊಳ್ಳುವ ಹಂತದಲ್ಲಿ ಮಗುವಿಗೆ ತನ್ನತನ ಬೆಳೆಯುತ್ತದೆ. ಆತ ತನ್ನ ಶಕ್ತಿ, ಸಾಮರ್ಥ್ಯ, ಜ್ಞಾನಗಳನ್ನು ಬೆಳೆಸಿಕೊಳ್ಳವ ಸಾಧಕನಾಗುತ್ತಾನೆ. ಸೃಜನಶೀಲವಾಗಿ ಮತ್ತು ಹೊಸ ಚೈತನ್ಯ, ಆವಿಷ್ಕಾರಗಳು ಕಂಡುಹಿಡಿಯುವ ಚುರುಕುತನ ಮಗುವಿನಲ್ಲಿ ಉಂಟಾಗಬೇಕಾದರೆ ಕಲೆಯು ತುಂಬಾ ಅವಶ್ಯಕವಾಗಿದೆ. ಮನಸ್ಸಿನಲ್ಲಿ ಉಂಟಾಗುವ ಭಾವನೆ ಯಾವುದಾದರೂ ಮಾಧ್ಯಮಗಳ ಮುಖಾಂತರ ಸಂಗೀತ, ಹಾಡು, ಚಿತ್ರಕಲೆ, ನಾಟಕ, ನೃತ್ಯ ಮುಂತಾದ ಮಾಧ್ಯಮಗಳಿಂದ ವ್ಯಕ್ತಪಡಿಸುವುದೇ ಚಿತ್ರಕಲೆಯಾಗಿದೆ.

ಚಿತ್ರ ಬರೆಯುವ ಮಗು ತನಗೇ ಇಷ್ಟವಾದ ಚಿತ್ರ ಬರೆಯಲು ತುಂಬಾ ಶ್ರಮಪಡುತ್ತಾ ಯಾಕೆ? ಮಗುವಿನ ಮನಸ್ಸಿನಲ್ಲಿ ಮೂಡಿದ ದೃಶ್ಯ ಹಾಳೆಗಳ ಮೇಲೆ ಗೀಚುತ್ತಾ ಆ ಚಿತ್ರ ತನ್ನ ಮನಸ್ಸಿಗೆ ಸ್ವಲ್ಪ ಸಮಾದಾನ ಆಗುವರೆಗೂ ಚಿತ್ರ ಪೂರ್ಣವಾಗುವರೆಗೂ ಪ್ರಯತ್ನ ನಿಲ್ಲುಸುವುದಿಲ್ಲಾ. ಮಗು ಹಾಳೆಯ ಮೇಲೆ ಬರೆಯುವುದರಲ್ಲೆ ಉದಾ: ಕೋಳಿಯ ಚಿತ್ರ ಬರೆಯಬೇಕು ಅಂದಕೊಂಡು ಚಿತ್ರ ಬರೆಯಲು ಪ್ರಾರಂಭ ಮಾಡುವ ಮಗು ನೈಜವಾಗಿ ಇಲ್ಲದಿದ್ದರೂ ಕೋಳಿ ಎಂದು ಗುರುತಿಸುವಷ್ಟು ಚೆನ್ನಾಗಿ ಚಿತ್ರರಚಿಸಲು ಸಾಕಷ್ಟು ತನ್ನ ಬುದ್ಧಿಯಿಂದ ಖರ್ಚು ಮಾಡುತ್ತದೆ. ಅದಾದ ನಂತರ ಚಿತ್ರವು ತಕ್ಕಮಟ್ಟಿಗೆ ಬಂದರೆ ಖುಷಿಯಲ್ಲಿ ತೆಲಾಡುತ್ತದೆ.

“ಶಿಕ್ಷಣವು ಒಂದು ಸಂಸ್ಕಾರ. ಅದು ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಬೇಕು. ಶಿಕ್ಷಣವು ಪರಿಣಾಮಕಾರಿಯಾಗಬೇಕಾದರೆ ಅದು ಮಕ್ಕಳ ವಯೋಮಾನ, ಅವರ ದೈಹಿಕ ಬೆಳವಣಿಗೆ ಮತ್ತು ಮಾನಸಿಕ, ಬೌಧಿಕ ವಿಕಾಸದ ಅವಸ್ಥೆಗಳಿಗೆ ಅನುಗುಣವಾಗಿ ಸಾಗಬೇಕು. ಬಾಲ್ಯದಲ್ಲಿಯ ಕಾಲ್ಪನಿಕತೆಯನ್ನು ತೊರೆದು ಜೀವನದಲ್ಲಿ ವಾಸ್ತವಿಕತೆಯನ್ನು ಗುರುತಿಸಿ ಅನುಭವಿಸಲು ಇಚ್ಚಿಸುತ್ತಾರೆ. ಸಂಪ್ರದಾಯವನ್ನು ವಿರೋಧಿಸುವ, ಸ್ವತಂತ್ರವಾಗಿ ವಿಚಾರಿಸಿ ವರ್ತಿಸುವ ಮನೋಭಾವ ಬೆಳೆಯುತ್ತದೆ.[೩]

೩. ಪ್ರೊ. ಎನ್.ಜಿ. ಕರೂರ, ಶಿಕ್ಷಣ ಮಾರ್ಗ, ಪುಟ–೭೪

ಮಗುವಿಗೆ ಬುದ್ಧಿ ಬೆಳದಹಾಗೆ ಚಿತ್ರಗಳನ್ನು ಗುರುತಿಸುವುವು. ಯಾವುದಾದರೂ ಘಟನೆಯಾಗಲಿ, ಪ್ರವಾಸಕ್ಕೆ ಹೋದ ಸಂದರ್ಭಗಳಲ್ಲಿ, ಅಲ್ಲಿ ನೋಡಿದ ಅನೇಕ ದೃಶ್ಯಗಳು ಮುಂತಾದ ಸಂದರ್ಭಗಳು ಮಗುವಿನ ಮನಸ್ಸಿನಲ್ಲಿ ಹೆಚ್ಚು ಹಸಿರಾಗಿ ಉಳಿದಿರುತ್ತೆ ನಂತರ ಕೈಗೆ ಹಾಳೆ ಸಿಕ್ಕರೆ ತಾನು ನೋಡಿದ ದೃಶ್ಯ ಎಲ್ಲವನ್ನು ಚಿತ್ರ ಬರೆಯಲು ಮುಂದಾಗುತ್ತದೆ. ಕಲೆಯಲ್ಲಿ ಒಳ್ಳೆಯ ಕಲೆ ಕೆಟ್ಟಕಲೆ ಎನ್ನುವುದಿಲ್ಲ, ಎಲ್ಲ ಕಲೆ ಒಳ್ಳೆ ಕಲೆಯೇ ಆಗಿರುತ್ತದೆ. ತೌಲನಿಕವಾಗಿ ನೋಡುವುದಾದರೆ ಮಕ್ಕಳ ಚಿತ್ರಗಳಲ್ಲಿ ವ್ಯತ್ಯಾಸ ಕಂಡುಕೊಳ್ಳುವುದು ಮತ್ತು ಆಯಾ ವಯಸ್ಸಿನಲ್ಲಿ ಮೂಡಿದ ಚಿತ್ರ ಬೇರೆ ಬೇರೆಯಾಗಿ ಕ್ರೋಢಿಕರಿಸಿ ವಿಮಾರ್ಶೆಯಾತ್ಮಕವಾಗಿ ಕಲಾಕೃತಿಗಳನ್ನು ಒಂದಕ್ಕಿಂತ ಒಂದು ವ್ಯತ್ಯಾಸ ಕಂಡುಕೊಳ್ಳುವುದು ಈ ಮಕ್ಕಳ ಕಲೆಯನ್ನು ನೋಡಿ ಒಳ್ಳೆಯ ಪ್ರಶಂಸಿಸುವುದು, ಆರೈಕೆ ಮಾಡುವುದು ಮುಖ್ಯ. ಹಾಗೇ ಮಗುವಿನ ಇತಿಹಾಸವು ಕೂಡ ಕುತೂಲಹವಾಗಿದೆ.

ಶಿಶುಚಿತ್ರಕಲೆಯ ಇತಿಹಾಸ :

"ಶಿಶು ಚಿತ್ರಕಲೆಗೂ ಒಂದು ಇತಿಹಾಸವೇ? ಪಾಶ್ಚತ್ಯ, ಪೌರ್ವಾತ್ಯ ಚಿತ್ರಕಲೆಗಳು ಮತ್ತು ಅಜಂತಾ, ರಜಪೂತ, ಮೊಗಲ್ ಮೊದಲಾದ ಕಲೆಗಳ ಹೆಸರುಗಳನ್ನು ಹಿಂದಿನಿಂದಲೂ ಕೇಳುತ್ತಿದ್ದೇವೆ ಅವುಗಳಲ್ಲಿ ಅಲ್ಲಲ್ಲಿ ನೋಡಲು ಸಿಗುತ್ತವೆ. ಈಗ ನವ್ಯ ಚಿತ್ರಕಲಾಕೃತಿಗಳು ವಿಶೇಷವಾಗಿ ಗೋಚರಿಸುತ್ತವೆ. ಈ ಎಲ್ಲ ಚಿತ್ರಕಲೆಗಳಿಗೆ ಶತಮಾನಗಳ ಇತಿಹಾಸವಿದೆ. ಹತ್ತು-ಹದಿನೈದು ಸಾವಿರ ವರುಷಗಳ ಹಿಂದಿನ ಆದಿಕಾಲದ ಮನುಷ್ಯನ ಕೃತಿಗಳು ಕೂಡ ಉಳಿದಿವೆ; ರಕ್ಷಿಸಲ್ಪಟ್ಟಿವೆ. ಆದರೆ ಒಂದು ಶತಮಾನಕ್ಕಿಂತ ಹಿಂದಿನ ಮಕ್ಕಳ ಕಲಾಕೃತಿಗಳನ್ನು ಉಳಿಸಿರುವುದು ಕಂಡುಬರುವುದಿಲ್ಲ. ಎಲ್ಲೋ ಅಲ್ಲೊಂದು ಇಲ್ಲೊಂದು ಉಂಟೆಂದು ಹೇಳಬಹುದು. ಅವು ಕೂಡ ವಿಶ್ವಾಸಕ್ಕೆ ಪಾತ್ರವಾದವುಗಳೇ? ಇತರರಿಂದ ತಿದ್ದಲ್ಪಟ್ಟಿರಬೇಕು. ಈ ಹಿಂದಿನ ಪರಿಶುದ್ಧವಾದ ಶಿಶು ಕಲಾಕೃತಿಗಳು ದುರ್ಬಲವಾಗಿವೆ; ಮಕ್ಕಳು ಚಿತ್ರಸಬಲ್ಲರೇ? ಮಕ್ಕಳದ್ದು ಚಿತ್ರಕಲೆಯೇ? ಎಂಬ ತಾತ್ಸಾರ ಭಾವನೆಯ ಹಿಂದಿನಿಂದಲೂ ಜನರಲ್ಲಿ ಬೇರೂರಿತ್ತು. ಆದಕಾರಣ ಶಿಶುಚಿತ್ರ ಕಲಾಸಂಗ್ರಹವು ಇಲ್ಲವಾಗಿದೆ; ಶಿಶುಚಿತ್ರ ಕಲೆಯ ಇತಿಹಾಸವೂ ಚಿಕ್ಕದಾಗಿದೆ. ಪ್ರತಿಯೊಂದು ಮಗುವೂ ಹುಟ್ಟು ಕಲಾವಿದನೆಂಬುದಾಗಿ, ಈ ಶತಮಾನದ ಆರಂಭದ ತನಕ ಯಾರಿಗೂ ಭಾವನೆ ಬಂದಿರಲಿಲ್ಲ. ಇದರ ಅರ್ಥ 'ಎಲ್ಲ ಮಕ್ಕಳು ಚಿತ್ರ ಕವಿದರಾಗಬಲ್ಲರು' ಎಂಬುದಾಗಿ ಅಲ್ಲ. 'ಮಗುವಿಗೆ ಕೂಡ ಒಂದು ವ್ಯಕ್ತಿತ್ವ ಇದೆ. ಅದಕ್ಕೆ ಅದರದ್ದೇ ಆದ ನಿಯಮಗಳಿವೆ' ಎಂದು ತಿಳಿಯುವುದುದರೊಂದಿಗೆ ಶಿಶುಚಿತ್ರ ಕಲೆಯ ಇತಿಹಾಸದ ಆವಿರ್ಭಾವವಾಯಿತು. ಇದು ಮಕ್ಕಳ ಮಾನಸಿಕ ಬೆಳವಣಿಗೆಯ ದೃಷ್ಟಿಯಿಂದ ವಿಚಾರಾರ್ಹ ವಿಷಯವಾಗಿದೆ."[೪] ಇದರ ಒಳಗೊಂಡಂತೆ ಕಲೆಯಲ್ಲಿ ಚಿಕ್ಕವರು

೪. ಬಿ.ಪಿ. ಬಾಯರಿ, ಚಿಕ್ಕಮಕ್ಕಳ ಚಿತ್ರಕಲೆ, ಪುಟ-೪೨

ದೊಡ್ಡವರು ಅಂತ ಇರುವುದಿಲ್ಲ, ಎಲ್ಲರು ಸಮಾನರು. ಕೆಲವು ಮಕ್ಕಳು ಚಿಕ್ಕ ವಯಸ್ಸಿನಲ್ಲಿ ಅಮೋಘ ಸಾಧನೆ, ದೊಡ್ಡವರನ್ನು ಮಿರಿಸುವಷ್ಟು ಚಿತ್ರಕಲೆಯಲ್ಲಿ ಬೆಳೆದಿರುತ್ತವೆ. ಮಗುವಿನ ಕಲೆಗಳಲ್ಲಿ ಏನು ನಿರೀಕ್ಷಿಸುವುದು ಸಾಧ್ಯ. ಇವರ ಚಿತ್ರದಲ್ಲಿ ಯಾವುದಕ್ಕೆ ಒತ್ತುಕೊಡಲಾಗುತ್ತೆ, ಮತ್ತು ಬೇರೆತರಹ ಚಿತ್ರ ಬರೆಯಲು ಪ್ರಯತ್ನಸುತ್ತಾ, ಹೀಗೆ ಹಲವಾರು ದೃಷ್ಟಿ ಕೋನಗಳನ್ನು ಇಟ್ಟು ಕೊಂಡು ತೌಲನಿಕವಾಗಿ ಹೇಳಲಾಗುವುದು.

ವಿಮರ್ಶಾತ್ಮಕವಾಗಿ ನೋಡುವುದಾದರೆ ಮಕ್ಕಳಲ್ಲಿ ಹೊಸ ಆವಿಷ್ಕಾರ ಸೃಷ್ಟಿಸುವ ಬುದ್ದಿ ಅವರಲ್ಲಿ ಇರುವುದು. ಆದರೆ ಅದನ್ನು ಗುರುತಿಸಿ ಉತ್ತೇಜನ ತುಂಬುವ ಕೇಲಸ ಒಳ್ಳೆಯ ಮಾರ್ಗದರ್ಶನ ಅವಶ್ಯಕ ಇವರ ಚಿತ್ರಗಳಲ್ಲಿ ಯಾವುದೂ ಮುಖ್ಯ, ಯಾವುದೂ ಮುಖ್ಯ ಅಲ್ಲ ಎಂಬುದು ಸೂಕ್ಷ್ಮವಾಗಿ ಗಮನಿಸಿ ವಿಮರ್ಶಿಸಿ ಹೇಳುವುದು ಒಳ್ಳೆಯದು. ಮಕ್ಕಳು ಹೇಳಿದ ಚಿತ್ರಗಳಲ್ಲಿ ತಪ್ಪು ತಿದ್ದಕೊಳ್ಳವ ಆಸಕ್ತಿ ಮಕ್ಕಳಿಗಲ್ಲಿದೆ. ಮತ್ತು ಕಲಿಯುವ ಆಸಕ್ತಿ ಕೂಡಾ ಇರುತ್ತದೆ. ಇಂತಹ ತೌಲನಿಕತೆ ಎರಡು ರೀತಿಯಲ್ಲಿ ಕಂಡುಕೊಳ್ಳಬಹುದು. ಎರಡು ವರ್ಷದ ಮಕ್ಕಳು ಚಿತ್ರ ಬರೆಯುವ ಶೈಲಿ ಮತ್ತು ಐದು ವರ್ಷದ ಮಕ್ಕಳಲ್ಲಿ ಏನು ವಿಭಿನ್ನತೆ ಕಾಣಬಹುದು. ವಯಸ್ಸಿನ ಅಂತರದಲ್ಲಿ ವ್ಯಕ್ತಪಡಿಸುವ ಚಿತ್ರಗಳಲ್ಲಿ ಗೋಚರವಾಗುವ ರೀತಿಯಲ್ಲಿ ಚಿತ್ರಗಳನ್ನು ಪ್ರಸ್ತುತ ಪಡುಸುತ್ತಾರೆ.

ಚಿಕ್ಕಮಕ್ಕಳ ಚಿತ್ರಕಲೆಯಲ್ಲಿ ತೌಲನಿಕ ನೋಟ :

ಚಿತ್ರಕಲೆಯಲ್ಲಿ ತೌಲನಿಕ ಅಧ್ಯಯನವು ವಯಸ್ಸಿನ ಅನುಗುಣವಾಗಿ ಮಕ್ಕಳ ಚಿತ್ರಗಳನ್ನು ನೋಡುವುದು. ಚಿತ್ರಕಲಾ ಪ್ರಪಂಚದಲ್ಲಿ ತೌಲನಿಕವಾಗಿದ್ದು, ಹಾಗೆಯೇ ಚಿಕ್ಕ ಮಕ್ಕಳ ಚಿತ್ರಗಳಲ್ಲಿ ಅನ್ವಯಿಸುವುದು ಕೂಡ ಹೌದು. ಎರಡು ವರ್ಷದ ಮಗು ಗೀಚುವ ಪ್ರವೃತಿ ಬೆಳೆಸಿಕೊಂಡರೆ. ಅದೇ ಬುದ್ದಿ ಚಿಗುರಿದ ಆರು ವರ್ಷದ ಮಗು ಚಿತ್ರಗಳು ಗುರುತಿವಷ್ಟು ಬರೆಯುವ ಶೈಲಿ ಈ ಹಂತದಲ್ಲಿ ಸ್ವಲ್ಪ ಮಟ್ಟಿಗೆ ಪ್ರಯತ್ನದಲ್ಲಿ ತೊಡಗಿರುತ್ತದೆ. ಹಾಗೆಯೇ ಎಂಟು ವರ್ಷದ ಮಗು ಆರು ವರ್ಷದ ಮಗುವಿಗಿಂತ ಬುದ್ದಿಮಟ್ಟ ಹೋಲಿಕೆ ಮಾಡಿದರೆ ಚಿತ್ರದಲ್ಲಿ ಸ್ಪಷ್ಟತೆ ಆಕಾರ ಕಾಣಬಹುದು. ಈ ವಯಸ್ಸಿನ ಮಗು ಹೆಚ್ಚಾಗಿ ಯಾವುದಾದರೂ ಚಿತ್ರ ನೋಡಿ ಬರೆಯುವುದು ಮತ್ತು ಅನುಕರಣೆ ಮುಖಾಂತರ ರಚನೆ ಮಾಡುತ್ತವೆ. ಎಂಟು ಮತ್ತು ಹನ್ನೇರಡು ವರ್ಷದ ಮಕ್ಕಳಲ್ಲಿ ತೌಲನಿಕವಾಗಿ ಹೇಳುವುದಾದರೆ. ಎಂಟು ವರ್ಷದ ಮಗುವಿಗಿಂತ ಹನ್ನೇರಡು ವರ್ಷದ ಮಗು ಪ್ರೌಢಾವ್ಯಸ್ಥೆ ಹಂತದಲ್ಲಿ ಬಂದು ತಲುಪಿರುತ್ತದೆ. ಈ ಹಂತದ ಮಗು ಚಿತ್ರ ಬರೆಯುವ ಶೈಲಿ ತುಂಬಾ ವಿಭಿನ್ನ ರೀತಿಯಲ್ಲಿ ಚಿತ್ರ ನಿರ್ಮಾಣದಲ್ಲಿ

ತೊಡಗಿಸಿಕೊಂಡಿರುತ್ತದೆ. ಯಾವುದಾದರೂ ದೃಶ್ಯ ತನ್ನ ಕಣ್ಣಿಗೆ ಆಕರ್ಷಣೀಯವಾಗಿ ಅಥವಾ ಮನಸ್ಸಿಗೆ ಹತ್ತಿರವಾಗಿದ್ದರೆ ಹಾಳೆಯ ಮೇಲೆ ನೈಜವಾಗಿ ಚಿತ್ರಿಸಲು ಪ್ರಯತ್ನಪಡುತ್ತದೆ. ಇಲ್ಲಿ ಎಂಟು ವರ್ಷದ ಮತ್ತು ಹನ್ನೆರಡು ವರ್ಷದ ಮಕ್ಕಳ ಚಿತ್ರಗಳನ್ನು ನೋಡಿದರೆ ವಸ್ತು, ಪ್ರಾಣಿ ನೋಡಿ ಚಿತ್ರ ಬರೆಯುತ್ತವೆ. ಆದರೆ ಹನ್ನೆರಡು ವರ್ಷದ ಮಗು ಬುದ್ಧಿಮಟ್ಟ ಬೆಳೆದ ಕಾರಣ ಇವರ ಆಲೋಚನೆ ಬೇರೆಯಾಗಿ ವಿಷಯ ಪೂರಕವಾದ ಸಂಗತಿಗಳನ್ನು ಆಯ್ಕೆ ಮಾಡಿಕೊಂಡು ಚಿತ್ರ ನಿರ್ಮಾಣ ಮಾಡುತ್ತದೆ. ಇನ್ನೂ ಹದಿನಾಲ್ಕು ವಯಸ್ಸಿನ ಮಕ್ಕಳಲ್ಲಿ ಚಿತ್ರ ಬರೆಯುವ ವಿಧಾನ ವಸ್ತುನಿಷ್ಠವಾಗಿ, ನೈಜವಾಗಿ, ದೇವರ ಚಿತ್ರಗಳು, ಕಾರಟೋನ್, ಪ್ರಕೃತಿ ಚಿತ್ರಗಳು ಹೀಗೆ ಮುಂತಾದ ಈ ವಯಸ್ಸಿನ ಮಕ್ಕಳು ಸುಂದರವಾಗಿ ಚಿತ್ರಬರೆಯುವ ಪ್ರಯತ್ನದಲ್ಲಿ ಮುಳಗಿರುತ್ತವೆ. ಇವುಗಳಿಗೆ ಬೌಧಿಕ ಸಾಮರ್ಥ್ಯ ಬೆಳವಣಿಗೆ ಯಾಗಿರುವುದರಿಂದ ಚಿತ್ರ ರಚಿಸುವ ವಿಧಾನ ಹನ್ನೆರಡು ವರ್ಷದ ಮಗುವಿನಕ್ಕಿಂತಲೂ ಹದಿನಾಲ್ಕು ವರ್ಷದ ಮಗುವಿನ ವಿಚಾರಗಳು, ಪಳಗಿದ ಕೈ, ರಚನೆ ಮಾಡುವ ವಿಧಾನ, ಎಲ್ಲವೂ ಈ ವಯಸ್ಸಿನ ಮಗು ಚಿತ್ರದಲ್ಲಿ ಹೊಸತನಕ್ಕೆ ಹೆಚ್ಚು ಆದ್ಯತೆ ನೀಡುತ್ತದೆ.

ಈ ರೀತಿಯಾಗಿ ಮೇಲೆ ತಿಳಿಸಿದ ಹಾಗೆ ಆಯಾ ವಯಸ್ಸಿನ ಮಕ್ಕಳು ಬುದ್ದಿಗೆ ತಕ್ಕಂತಹ ಚಿತ್ರಗಳನ್ನು ಬರೆಯುವರು ವಯಸ್ಕರ ಮತ್ತು ಮಕ್ಕಳ ಚಿತ್ರಗಳಲ್ಲಿ ಕಾಣುವಂತಹ ವ್ಯತ್ಯಾಸಗಳು ಬೇರೆ ಬೇರೆಯಾಗಿರುತ್ತದೆ. ವಯಸ್ಕರರು ಚಿತ್ರಗಳನ್ನು ನೋಡಿ ಅನುಭವಿಸಿ ಚಿತ್ರ ರಚಿಸುವರು. ಆದರೆ ಮಕ್ಕಳು ಅನುಭವದ ಬುದ್ದಿಮಟ್ಟ ಕಡಿಮೆಯಿದ್ದರೂ ಕೂಡಾ ಚಿತ್ರ ರಚನೆ ಮಾಡುತ್ತವೆ. ಮನಸ್ಸಿನ ಭಾವನೆಗಳ ಅಭಿವ್ಯಕ್ತಿಗೆ ಚಿತ್ರಕಲೆ ಒಂದು ಪ್ರಬಲವಾದ, ನೈಸರ್ಗಿಕವಾದ ಮಾಧ್ಯಮ ಎಂದು ತಿಳಿದಿದ್ದೇವೆ. ಕೈಗಳನ್ನು ಬಳಸಲು ಕಲಿಯುತ್ತಿದ್ದಂತೆ ಮಗು ಕೈಗೆ ಸಿಕ್ಕಿದ ಸುಣ್ಣ, ಇದ್ದಿಲು, ಪೆನ್ಸಿಲ್‌ನಿಂದ ಚಿತ್ರ ರಚನೆಯಲ್ಲಿ ತೊಡಗುತ್ತದೆ. ಭಾಷೆಯನ್ನು ಕಲಿಯುವ ಜೊತೆ ಜೊತೆಗೆ ಚಿತ್ರ ಬಿಡಿಸಲೂ ಮಗು ಕಲಿಯುತ್ತದೆ. ಆ ಹಂತದಿಂದಲೇ ಮಗುವಿನಲ್ಲಿ ವ್ಯತ್ಯಾಸ ಕಂಡುಕೊಳ್ಳಬಹುದು. ಮಕ್ಕಳ ಚಿತ್ರಗಳನ್ನು ಮುಂದೆಯಿಟ್ಟುಕೊಂಡು ಅದರಲ್ಲಿರುವ ವ್ಯತ್ಯಾಸ ನೋಡುವುದು. ಉದಾ: ಎರಡು ವರ್ಷದ ಮಗು ಬರೆದ ಚಿತ್ರ ಮತ್ತು ಎಂಟು ವರ್ಷದ ಮಗು ಬರೆದ ಚಿತ್ರ ಎರಡನ್ನೂ ಹೋಲಿಕೆ ಮಾಡಿದರೆ ವ್ಯತ್ಯಾಸ ಕಂಡುಕೊಳ್ಳಬಹುದು. ಎರಡು ವರ್ಷದ ಮಗು ಚಿತ್ರದಲ್ಲಿ ಚಿತ್ರ ವಿಚಿತ್ರವಾದ ಆಕಾರಗಳು ಇದ್ದರೆ ಅದೇ ಎಂಟು ವರ್ಷದ ಮಗುವಿನ ಚಿತ್ರದಲ್ಲಿ ಪ್ರಾಣಿ, ಪಕ್ಷಿ, ಮನುಷ್ಯ ಹೀಗೆ ಯಾವುದೇ ಚಿತ್ರವಾದರೂ ಸರಿ ಸ್ವಲ್ಪಮಟ್ಟಿಗೆ ಗುರುತಿಸುವಷ್ಟು ಚಿತ್ರ ಗೀಚಿರುತ್ತದೆ. ಎರಡು ವರ್ಷದ ಮಗುವಿನಲ್ಲಿ ಮೂಡಿದ ಭಾವನೆ ಚಿತ್ರ ಬರೆಯಬೇಕು ಎಂದು ಅದಕ್ಕೆ

ಬುದ್ಧಿಯಿಲ್ಲದಿದ್ದರೂ ಕೂಡ ಕೈಗೆ ಚಿಕ್ಕ ಪೆನ್ಸಿಲ್‌ನಿಂದ ಹಾಳೆಯ ಮೇಲೆ ಗೀಚುಬೇಕು. ಅದು ಮೂಡುತ್ತದೆ ಪ್ರಜ್ಞೆಯಿಲ್ಲದಿದ್ದರೂ ಚಿತ್ರ ಬರೆಯಲು ಪ್ರಯತ್ನಪಡುತ್ತಿರುತ್ತದೆ. ಹಾಗೆಯೇ ಎಂಟು ವರ್ಷದ ಮಗು ತನ್ನ ಹಿಂದಿನ ವಯಸ್ಸಿನಲ್ಲಿ ಗೀಚದ, ಬರೆದ ಗೇರೆಗಳೇ ಮುಂದೆ ಅದೇ ಚಿತ್ರ ಬರೆಯಲು ಪ್ರೇರಣೆಯಾಗುವ ಹಂತ ಕೂಡ ಆಗಿದೆ. ಉತ್ತಮವಾದ ಪರಿಸರ, ಒಳ್ಳೆಯ ಅಭ್ಯಾಸಗಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಮಗುವೊಂದರ ದೈಹಿಕ ಮತ್ತು ಭಾವನಾತ್ಮಕ ಬೆಳವಣಿಗೆಗಳು ಆ ಮಗುವಿನ ಭವಿಷ್ಯ ರೂಪಿಸುವಲ್ಲಿ ನೇರವಾದ ಪ್ರಭಾವ ಬೀರುತ್ತದೆ.

ಸಮಾನಾಂತರವಾಗಿ ಮಕ್ಕಳು ಬರೆದ ಚಿತ್ರಗಳನ್ನು ವೀಕ್ಷಿಸುವುದು ಶಿಕ್ಷಕರ ಕರ್ತವ್ಯ. ಅವರಲ್ಲಿರುವ ಸೃಜನಶೀಲವಾದ ವ್ಯಕ್ತಿತ್ವ ಗುರುತಿಸಿ ಸ್ನೇಹ ಪೂರ್ವಕವಾಗಿ ಮಾತನಾಡುವುದು, ಚಿತ್ರದ ಬಗ್ಗೆ ಒಳ್ಳೆಯ ಅಂಶಗಳನ್ನು ತಿಳಿಸಿಕೊಡುವುದು ಈ ಕಲೆಯು ಸೂಕ್ಷ್ಮ ನಿರೀಕ್ಷಣಾಶಕ್ತಿ, ಸ್ವಚ್ಛತೆ, ಅಚ್ಚುಕಟ್ಟುತನ ಮೊದಲಾದ ಗುಣಗಳನ್ನು ಕಲಿಸುತ್ತದೆ. ಇತರರ ಚಿತ್ರ ಹಾಗೂ ಪ್ರಕೃತಿ ಸೌಂದರ್ಯಗಳನ್ನು ನೋಡಿ ಸಂತೋಷ ಅನುಭವಿಸಲು ಚಿತ್ರ ಜ್ಞಾನವು ಬೇಕು ಎಂಬುದಾಗಿ ಅಂದಿನವರ ಭಾವನೆಗಳಾಗಿದ್ದವು. ಹೀಗಾಗಿ ಹುಟ್ಟಿದ ಮಗುವಿಗೆ ಮೊದಲು ಮಾತು ಹೇಗೆ ಮುಖ್ಯವೋ ಹಾಗೇ ಜೀವನದಲ್ಲಿ ವಿಕಾಸ ಹೊಂದಲು ಚಿತ್ರಕಲೆಯೂ ಅಷ್ಟೇ ಮುಖ್ಯವೆಂದು ಹೇಳಲಾಗಿದೆ.

ಚಿಕ್ಕ ಮಕ್ಕಳು ರಚಿಸಿದ ಚಿತ್ರಗಳು :


ಮಕ್ಕಳ ಕಲೆಯ ಕುರಿತು ತೌಲನಿಕವಾಗಿ ಮೇಲೆ ಹೇಳಿದ ಹಾಗೆ ಅವರದೆ ನೆಲೆಯಲ್ಲಿ, ಜ್ಞಾನದ ಮಟ್ಟದಲ್ಲಿ, ತೌಲನಿಕವಾಗಿ ಚಿತ್ರಕಲೆಯನ್ನು ಗುರುತಿಸಬಹುದು. ಶೈಶಾವಸ್ಥೆಯಲ್ಲಿ ಗೀಚುವ ಮಗು ಮತ್ತು ಪ್ರೌಢಾವಸ್ಥೆಯಲ್ಲಿರುವ ಚಿತ್ರ ಬರೆಯುವ ಮಗು ಹಲವಾರು ವಿಷಯಗಳು ಈ ತೌಲನಿಕ ಅಧ್ಯಯನದಲ್ಲಿ ಹೇಳಲಾಗಿದೆ. ವಿಭಿನ್ನತೆಯಲ್ಲಿ ಏಕತೆಯ ಸಂವಾದಕ್ಕೆ ಕಾರಣವಾಗುವ ಸಮಾನ ತಂತುಗಳನ್ನು ಹಿಡಿದು ನೋಡುವುದು ಈ ತೌಲನಿಕತೆಯ ಆಶಯವಾಗಿದೆ. ಮುದ್ದು ಮಕ್ಕಳ ಕಲೆಯು ನೋಡಲು ಸುಂದರ ಅವರ ಮನಸ್ಸಿನ ಹಾಳೆಯಲ್ಲಿ ಮೂಡಿದ ಕಲೆಯು ನೋಡಲು ಆನಂದ. ಇದಕ್ಕೆ ಹಿನ್ನೆಲೆಯಾಗಿ ಪ್ರಾರಂಭದಲ್ಲಿ ಮಕ್ಕಳ ಕುರಿತು ತೌಲನಿಕವಾಗಿ ಕಲೆಯ ಬಗ್ಗೆ ಚರ್ಚಿಸಿ ಈ ಪ್ರಮುಖ ಬೆಳವಣಿಗೆಯ ಹೆಜ್ಜೆಗಳನ್ನೂ, ಮಕ್ಕಳ ಚಿತ್ರಗಳ ಕಂಡುಕೊಂಡು ಸಾಮಾನ್ಯ ತತ್ವಗಳ ಸಮಾನ ಅಂಶಗಳನ್ನೂ ಗಮನಿಸಲಾಗಿದೆ.

ಚಿಕ್ಕ ಮಕ್ಕಳ ಚಿತ್ರಕಲೆಯ ಕುರಿತ ಹಿಂದಿನ ಅಧ್ಯಯನಗಳಲ್ಲಿ ಚರ್ಚಿಸುತ್ತಾ ಬಂದಿದೆ. ಮಕ್ಕಳ ಕಲೆಯ ಬಗ್ಗೆ ಮುಖ್ಯವಾಗಿ ಈ ಅಧ್ಯಾಯದಲ್ಲಿ ಚಿಕ್ಕ ಮಕ್ಕಳು ಗೀಚುವ ಚಿತ್ರಗಳು, ವಯೋಮಾನಕ್ಕೆ ತಕ್ಕಂತಹ ಹಾಗೆ ಬರೆದ ಚಿತ್ರಗಳು ಹಾಗೂ ಒಂದನೆಯ ವರ್ಗದಿಂದ ಹಿಡಿದು ಏಳನೆಯ

ವರ್ಗದವರೆಗೂ ಮಕ್ಕಳು ರಚಿಸಿದ ಚಿತ್ರಗಳನ್ನು ವ್ಯವಸ್ಥಿತವಾಗಿ ಸಮಾನಾಂತರರಗೊಳಿಸಿ ಜೋಡಿಸಿ ಹಂತಹಂತವಾಗಿ ವಯಸ್ಸಿನ ಅನುಗುಣವಾಗಿ ನಿರ್ಮಿಸಿದ ಕಲಾಕೃತಿಗಳನ್ನು ಛಾಯಾ ಚಿತ್ರಗಳ ಮುಖಾಂತರ ಸೆರೆಹಿಡಿದು ಎಲ್ಲ ವರ್ಗದ ಮಕ್ಕಳ ಚಿತ್ರಗಳನ್ನು ಇಲ್ಲಿ ಸೂಚಿಸಲಾಗಿದೆ.

ಒಂದನೇಯ ವರ್ಗದ ಚಿಕ್ಕ ಮಕ್ಕಳ ರೇಖಾ ಚಿತ್ರಗಳು










ಎರಡನೇಯ ವರ್ಗದ ಚಿಕ್ಕ ಮಕ್ಕಳ ಬಣ್ಣದ ಚಿತ್ರಗಳು









ಮೂರನೇಯ ವರ್ಗದ ಚಿತ್ರಗಳು







ನಾಲ್ಕನೇಯ ವರ್ಗದ ಚಿತ್ರಗಳು











ಐದನೇಯ ವರ್ಗದ ಚಿತ್ರಗಳು











ಆರನೇಯ ವರ್ಗದ ಚಿತ್ರಗಳು












ಏಳನೇಯ ವರ್ಗದ ಚಿತ್ರಗಳು











ಅಧ್ಯಾಯ - ಏಳು

ಸಮಾರೋಪ



ಅಧ್ಯಾಯ - ೭

ಸಮಾರೋಪ

ಮಕ್ಕಳ ಕಲಿಕೆ ಕೇವಲ ಶಾಲೆ ಮತ್ತು ಮನೆಗೆ ಮಾತ್ರ ಸೀಮಿತವಾಗಿಲ್ಲ. ಮಗುವನ್ನು ಆವರಿಸಿರುವ ಸುತ್ತಲಿನ ಪ್ರಪಂಚವೆಲ್ಲಾ ಅದರ ಪಾಠಶಾಲೆ. ಮಗುವು ಮೊದಲು ತನ್ನ ಪರಿಸರಕ್ಕೆ ಸ್ಪಂದಿಸಿ ಅನುಭವ, ಅನುಕರಣೆಯಿಂದ ಕಲಿಯುತ್ತದೆ. ತನ್ನ ಆಸಕ್ತಿಯ ಸುಳಿಯಲ್ಲಿ ಮಗುವು ಸದಾ ಒಂದಲ್ಲ ಒಂದು ಯೋಚನೆ, ಕ್ರಿಯೆ, ಭಾವನೆಗಳ ಸುಳಿಯಲ್ಲಿರುತ್ತದೆ. ಯಾವುದೇ ಹೊಸದನ್ನು ತಿಳಿಯುವ ಕೌಶಲ್ಯ ಮಗುವಿನ ದೈಹಿಕ ಮತ್ತು ಭಾವನಾತ್ಮಕ ಮಟ್ಟಕ್ಕೆ ನಿಲುಕುವಂತಿರಬೇಕು. ಆಗ ವೇಗವಾಗಿ ಕಲಿಯುತ್ತಾರೆ. ಶಾಲೆಗಳಲ್ಲಿ ಶಿಕ್ಷಕ ಮತ್ತು ಮಕ್ಕಳು ಕೇಂದ್ರ ಬಿಂದುವಾದರೂ ಶಿಕ್ಷಕನ ಪಾತ್ರ ಮಹತ್ವದ್ದಾಗಿರುತ್ತದೆ. ಶಿಕ್ಷಕರಲ್ಲಿರುವ ಕಾಳಜಿ, ಆತ್ಮವಿಶ್ವಾಸ, ಬೋಧನೆಯಲ್ಲಿ ಸಮಗ್ರ ಪಾಲ್ಗೊಳ್ಳುವಿಕೆಯ ಮೇಲೆ ಮಕ್ಕಳ ಕಲಿಕೆಯ ಗುಣಮಟ್ಟ ಉತ್ತಮವಾಗಿರುತ್ತದೆ. ಇದನ್ನು ಒಳಗೊಂಡಂತೆ ಕಲೆಯ ಮಹತ್ವದ ಬಗ್ಗೆ ಮಕ್ಕಳಿಗೆ ಮನವರಿಕೆಯಾಗುವ ರೀತಿಯಲ್ಲಿ ಶಿಕ್ಷಕನು ಹೇಳುವುದು ಬಹಳ ಮುಖ್ಯ ಕೂಡ ಹೌದು.

ಮಗುವಿನ ಮನಸ್ಸು ಕೋಮಲ. ನಾವು ಏನೇ ಹೇಳಿದರು ಹಾಗೇ ಗ್ರಹಿಸುವ ಸ್ವಭಾವ ಅವುಗಳಿಗೆ ಹುಟ್ಟಿನಿಂದ ಬಂದಿರುತ್ತದೆ. ಪ್ರತಿ ಮಗುವು ಕಲೆಯಲ್ಲಿ ತನ್ನನ್ನು ತಾನು ಆಕರ್ಷಣೆ ಮಾಡಿಕೊಂಡಿರುತ್ತದೆ. ನಾವು ಪ್ರಸ್ತುತ ಸಂದರ್ಭದಲ್ಲಿ ಏನು ನಡೆದಿದೆ ಎಂದು ತಿಳಿದುಕೊಂಡು ಮಗುವಿಗೂ ತಿಳಿಸಲು ಪ್ರಯತ್ನಿಸಬೇಕು. ಚಿತ್ರಕಲಾ ಕ್ಷೇತ್ರದಲ್ಲಿ ಅನೇಕ ಹಿರಿಯ ಕಲಾವಿದರು ಈ ಕ್ಷೇತ್ರದಲ್ಲಿ ಗುರುತಿಸಿಕೊಂಡವರು. ಇವರು ತಮ್ಮ ಬಾಲ್ಯದಲ್ಲಿ ಚಿತ್ರಕಲೆಯ ಪ್ರಭಾವಕ್ಕೆ ಒಳಗಾಗಿ ಬಾಲ್ಯಾವಸ್ಥೆಯಲ್ಲಿಯೇ ಕಲೆಯನ್ನು ಮೈಗೂಡಿಸಿಕೊಂಡು ಹಂತಹಂತವಾಗಿ ಬೆಳವಣಿಗೆ ಹೊಂದಿ

ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಚಿತ್ರಕಲೆಯನ್ನು ಪ್ರೀತಿಯಿಂದ ಕಾಣುತ್ತಾರೆ. ಹಾಗೆಯೇ ಮಗುವಿಗೂ ಸಹ ಚಿತ್ರಕಲೆ ಎಂದರೆ ಆರಾಧ್ಯ ದೈವ ಇದ್ದಂತೆ. ಮಗು ನಡೆದಾಡಲು ಸಮರ್ಥವಾಗಿ ಆದನಂತರ ಮಗುವಿಗೆ ಪೆನ್ಸಿಲ್ ಸಿಕ್ಕರೆ ಗೀಚಲು ಪ್ರಾರಂಭಿಸುತ್ತದೆ. ಅಲ್ಲಿಂದಲೇ ಕಲೆಯು ಪ್ರಾರಂಭವಾಗುತ್ತದೆ. ಇಂತಹ ಮಕ್ಕಳ ಕಲೆಯ ಕುರಿತು ನಮಗೆ ಸುದೀರ್ಘವಾಗಿ ಅಧ್ಯಯನದಲ್ಲಿ ಕೈಗೊಂಡಾಗ ಕಲೆಯು ಕೇವಲ ದೊಡ್ಡವರಿಗೆ ಮೀಸಲು ಎನ್ನುವ ಸಂಶಯ ದೂರವಾಗಿ ಮಕ್ಕಳು ಕೂಡ ದೊಡ್ಡವರನ್ನು ಮೀರಿಸುವರು ಎಂಬ ನಂಬಿಕೆ ನಿಜವಾಗಿದೆ.

ಕಲೆ ಎನ್ನುವುದು ಹೊಸ ಚಿಲುಮೆ, ಚೈತನ್ಯ ಕೊಡುವ ಒಂದು ಮಾಧ್ಯಮ. ಇಂತಹ ಕಲೆಯು ನಾಡಿನ ಜನರಿಗೆ ಇಷ್ಟವಾಗುವ ಈ ಚಿತ್ರಕಲೆಯಾಗಿದೆ. ಚಿತ್ರಗಳನ್ನು ನೋಡಿ ಸಂತೋಷ ಪಡುವ ಜನರು ಹಲವಾರು ಸಂದರ್ಭಗಳಲ್ಲಿ ಮಗು ಚಿತ್ರ ಗೀಚುತ್ತಿದ್ದರೆ ಅದಕ್ಕೆ ಬೈಯುವುದು ಸಾಮಾನ್ಯ. ಯಾಕೇ ಈ ಕಲೆಗೆ ಗೌರವ ಕಡಿಮೆಯಾಗುತ್ತಿದೆ. ಮುಖ್ಯವಾದ ಕಾರಣಗಳು ಏನಿರಬಹುದು ಮುಂತಾದ ವಿಚಾರಗಳು ತಲೆ ಕೆಡಿಸುತ್ತವೆ. ಹೀಗೆ ಆಗಲು ಮೂಲ ಕಾರಣ ಕಲಾವಿದನಾದವನಿಗೆ ಬೇಗ ನೆಲೆ ಕಂಡುಕೊಳ್ಳಲು ಆಗದಿರುವುದು. ಕಲೆಗೆ ಸಂಬಂಧಿಸಿದ ಸ್ನಾತಕೋತ್ತರ, ಪಿಎಚ್.ಡಿ.ಯಂತಹ ಉನ್ನತವಾದ ಶಿಕ್ಷಣ ಪಡೆದರೂ ಕೂಡ ಶಿಕ್ಷಣಕ್ಕೆ ತಕ್ಕಂತಹ ಕೆಲಸಗಳು ಸಿಗದಿರುವುದು, ಇದರಿಂದ ಕಲೆಗೆ ಬೆಲೆ ಕಡಿಮೆಯಾಗಿರುವುದರಿಂದ ಕಲಾ ಕ್ಷೇತ್ರಕ್ಕೆ ಬರುವವರು ಕಡಿಮೆಯಾಗಿದ್ದಾರೆ. ಪೋಷಕರು ಸಹ ಮಗು ಚಿತ್ರ ಬರೆಯುತ್ತಿದ್ದರೆ ಅದನ್ನು ತಡೆಯಲು ಮುಂದಾಗುತ್ತಾರೆ. ಇದಕ್ಕೆ ಮೂಲ ಕಾರಣ ಕಲೆಯನ್ನು ನಂಬಿಕೊಂಡರೆ ನೆಲೆ ಕಟ್ಟಿಕೊಳ್ಳಲು ಸಾಧ್ಯವಿಲ್ಲ ಎಂದು ಅವರ ಮನಸ್ಸಿನಲ್ಲಿ ಬೇರೂರಿದೆ. ಇಂತಹ ಮನಸ್ಥಿತಿವುಳ್ಳ ಜನರಿಗೆ ಅರಿವು ಮೂಡಿಸವುದು ಕಷ್ಟ. ಕಲೆಯು ಜೀವನದ ಉತ್ತೇಜನ ತುಂಬುವ ಮಾಧ್ಯಮ. ಇಂತಹ ಕಲೆಗಳನ್ನು ಉಳಿಸಿ–ಬೆಳೆಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಕೂಡ ಹೌದು. ಮಕ್ಕಳು ದೇವರ ಸಮಾನ ಅವರಿಗೆ ಒಳ್ಳೆಯ ಸಂದೇಶ ತುಂಬುವ ಕೆಲಸ ಮಾಡಬೇಕು. ಕಲೆಯಲ್ಲಿ ಮುಂದುವರಿಯಲು ಚಿತ್ರ ಬರೆಯಲು ಪ್ರೋತ್ಸಾಹಿಸಬೇಕು.

ಚಿಕ್ಕಮಕ್ಕಳ ಚಿತ್ರಕಲೆ ಎನ್ನುವುದು ಕೇವಲವಾಗಿ ಪರಿಗಣಿಸಬಾರದು. ಒಂದು ಮಗು ಜೀವನದಲ್ಲಿ ಸಾಧನೆ ಮಾಡಬೇಕೆಂದರೆ ಅದಕ್ಕೆ ಸೃಜನಶೀಲತೆ ಮತ್ತು ಕ್ರಿಯಾತ್ಮಕತೆ ಈ ಎರಡು ಅಂಶಗಳು ಮಗುವಿನಲ್ಲಿ ಹುಟ್ಟಬೇಕೆಂದರೆ ಚಿತ್ರ ತೆಗೆಯಲು ಮಗುವಿಗೆ ಪ್ರೇರೆಪಿಸಿ ಇದರಿಂದ ಹೊಸತನ ಮೈಗೂಡಿಸಿಕೊಂಡು ಮಗುವು ಎಲ್ಲ ಕೆಲಸಗಳಲ್ಲಿ ಚಟುವಟಿಕೆಯಿಂದ ಪಾಲ್ಗೊಳ್ಳುವುದು. ಇಂತಹ ಮಕ್ಕಳ ಕಲೆಯು ಕುರಿತು ಹೇಳುವುದಾದರೆ ಕಲೆಯು ಮಗುವಿನ ಸೂಪ್ತ ಮನಸ್ಸಗಳನ್ನು ಎಚ್ಚರಿಸುವ ಮಾಧ್ಯಮ ಎಂದು ಹೇಳಬಹುದು. ಮಕ್ಕಳ ಬಗ್ಗೆ ಮತ್ತು ಅವರ ಕಲೆಯ ಕುರಿತು

ಎಷ್ಟು ಹೇಳಿದರೂ ಮುಗಿಯದು. ಇಂತಹ ಮಕ್ಕಳ ಚಿತ್ರಕಲೆಯ ಕುರಿತು ಯಾವುದೇ ರೀತಿಯ ಗಂಭೀರವಾದ ಅಧ್ಯಯನಗಳು ಹೆಚ್ಚಿನ ಪ್ರಮಾಣದಲ್ಲಿ ನಡೆದಿಲ್ಲ. ಈ ಕೊರತೆಯನ್ನು ತುಂಬಿಕೊಡುವ ನಿಟ್ಟಿನಲ್ಲಿ ಪ್ರಸ್ತುತ ಚಿಕ್ಕಮಕ್ಕಳ ಚಿತ್ರಕಲೆಯ ಬಗೆಗಿರುವ ಈ ಅಧ್ಯಯನವನ್ನು ಒಟ್ಟು ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಪ್ರತಿಯೊಂದು ಅಧ್ಯಾಯಗಳಲ್ಲಿ ಹೊರಹೊಮ್ಮಿರುವ ಫಲಿತಗಳ ಸಂಕ್ಷಿಪ್ತ ನೋಟ ಕೆಳಗಿನಂತಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ ಕುರಿತಾಗಿ ಹೇಳಲಾಗಿದೆ. ಪ್ರಸ್ತುತ ಅಧ್ಯಯನವನು ಕೈಗೊಳ್ಳಲು ಇರುವ ಕಾರಣಗಳು, ಅವಶ್ಯಕತೆಗಳು, ಪ್ರಾಮುಖ್ಯತೆ ಮತ್ತು ಮಹತ್ವವನ್ನು ಬಿಂಬಿಸಲಾಗಿದೆ. ಚಿಕ್ಕಮಕ್ಕಳ ಚಿತ್ರಕಲೆಯ ಸ್ವರೂಪತೆ, ಮಹತ್ವವೇನು ಮುಂತಾದ ವಿಷಯಗಳು ಮೊದಲನೆಯ ಅಧ್ಯಯನದಲ್ಲಿ ಮಕ್ಕಳ ಬಗ್ಗೆ ಮತ್ತು ಕಲೆಯ ಕುರಿತು ವಿಷಯಗಳನ್ನು ಬಿಚ್ಚಿಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಚಿಕ್ಕಮಕ್ಕಳ ಚಿತ್ರಕಲೆಯ ನೆಲೆ–ಹಿನ್ನೆಲೆಗಳನ್ನು ಮತ್ತು ಕಲೆ ಬೆಳೆದು ಬಂದ ಬಗೆ ಹೇಳಲಾಗಿದೆ. ಚಿಕ್ಕಮಕ್ಕಳ ಚಿತ್ರಕಲಾ ಶಿಕ್ಷಣ, ಮಕ್ಕಳ ಕಲೆಯ ಕುರಿತು ಹೇಳಿದ ಶಿಕ್ಷಣ ತಜ್ಞರ ಬಗ್ಗೆ ಹಲವಾರು ವಿಷಯಗಳು ಈ ಅಧ್ಯಾಯನದಲ್ಲಿ ಹೇಳಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಚಿಕ್ಕಮಕ್ಕಳ ಚಿತ್ರಕಲೆಗಳ ವರ್ಗೀಕರಣ : ಮಕ್ಕಳ ಮನಸ್ಸುಗಳ ಕುರಿತು ಮತ್ತು ಯಾವ ರೀತಿ ಚಿತ್ರ ಪ್ರಸ್ತುತ ಪಡೆಸುವುದು ಹಾಗೂ ಯಾವ ವಯಸ್ಸಿನವರಿಗೆ ಮಕ್ಕಳು ಎಂದು ಕರೆಯಬಹುದು ಎನ್ನುವ ಹಲವಾರು ಪ್ರಮುಖ ಅಂಶಗಳು ಇಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಚಿಕ್ಕಮಕ್ಕಳ ಕಲಾ ಪರಿಕರಗಳು ಮತ್ತು ರಚನಾ ವಿಧಾನಗಳು ಮಕ್ಕಳಿಗೆ ಕಲಾ ಪರಿಕರಗಳು ಎಷ್ಟು ಅವಶ್ಯಕ, ಅವರು ಬರೆಯುವ ಚಿತ್ರಗಳ ರಚನಾ ವಿಧಾನ ಹೇಗಿರುತ್ತದೆ ಎನ್ನುವ ಮುಖ್ಯವಾದ ಸಂಗತಿಗಳು ಈ ಅಧ್ಯಯನದಲ್ಲಿ ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಚಿಕ್ಕಮಕ್ಕಳ ಚಿತ್ರಕಲೆಗಳ ವಸ್ತು ವಿಷಯಗಳು ಮಗುವಿನ ಬೆಳವಣಿಗೆಯ ಹಂತದಲ್ಲಿ ಯಾವ ವಸ್ತುವಿಗೆ ಆಕರ್ಷಣೆಯಾಗುವುದು, ಯಾವ ವಿಷಯದಲ್ಲಿ ಆಸಕ್ತಿ ಹೊಂದುವುದು ಮತ್ತು ಯಾವ ವಿಷಯವನ್ನು ಇಟ್ಟುಕೊಂಡು ಚಿತ್ರ ಬರೆಯುವುದು ಮುಂತಾದ ಮುಖ್ಯ ಅಂಶಗಳು ಚಿಕ್ಕಮಕ್ಕಳ ಕಲೆಯ ಬಗೆಗಿನ ವಿಚಾರಗಳನ್ನು ಸಹ ಈ ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಚಿಕ್ಕಮಕ್ಕಳ ಚಿತ್ರಕಲೆಯ ಒಂದು ತೌಲನಿಕ ಅಧ್ಯಯನ: ಮಕ್ಕಳ

ಮನಸ್ಥಿತಿ ಯಾವ ವಯಸ್ಸಿನಲ್ಲಿ ಚಿತ್ರಗಳು ಹೇಗಿರುತ್ತದೆ. ಒಂದಕ್ಕೊಂದು ಸಮಾನಾಂತರಗೊಳಿಸಿ ಚಿತ್ರಗಳಲ್ಲಿನ ವ್ಯತ್ಯಾಸವನ್ನು ಕಂಡುಕೊಳ್ಳುವುದು ತೌಲನಿಕವಾಗಿ ಉದ್ದೇಶ ನೀಡಲಾಗಿದೆ. ಒಂದರಿಂದ ಐದನೆಯ ವಯಸ್ಸಿನ ಮಗು ಚಿತ್ರ ಹೇಗೆ ಬರೆಯುತ್ತದೆ. ಐದರಿಂದ ಎಂಟು ವಯಸ್ಸಿನಲ್ಲಿ, ಎಂಟರಿಂದ ಹನ್ನೆರಡು ವಯಸ್ಸಿನಲ್ಲಿ ಮಕ್ಕಳ ಮನಸ್ಥಿತಿಯಲ್ಲಿ ಮೂಡಿದ ಚಿತ್ರಗಳನ್ನು ತೌಲನಿಕವಾಗಿ ಹೋಲಿಕೆಮಾಡಿ ಚಿತ್ರಗಳನ್ನು ಒಳಪಡಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಅಧ್ಯಯನದ ಫಲಿತಗಳನ್ನು ಸಮೀಕ್ಷಿಸಲಾಗಿದೆ.

ಪ್ರಸ್ತುತ ಅಧ್ಯಯನದಿಂದ ಕೆಲವು ಫಲಿತಗಳನ್ನು ಕಂಡುಕೊಳ್ಳಲಾಗಿದೆ :

* ಪ್ರಸ್ತುತ ಅಧ್ಯನವು ಚಿಕ್ಕಮಕ್ಕಳ ಚಿತ್ರಕಲೆ ಒಳಗೊಂಡಿದ್ದಾಗಿದೆ. ಚಿಕ್ಕಮಕ್ಕಳ ಕುರಿತು ಜನರಲ್ಲಿ ಪ್ರೀತಿ ಭಾವನೆಯಿದೆ. ಆದರೆ ಈ ಅಧ್ಯಯನದಲ್ಲಿ ವಯಸ್ಸಿಗೆ ಅನುಗುಣವಾಗಗಿ ವಿಶಿಷ್ಟ ಜ್ಞಾನ, ಕೌಶಲ್ಯ, ಅಭಿರುಚಿ ಮತ್ತು ಆಸಕ್ತಿ ಎಲ್ಲವೂ ಆಟಿಕೆಯಾಗಿ ಒಳಗೊಂಡಿದ್ದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

* ಚಿಕ್ಕಮಕ್ಕಳ ಚಿತ್ರಕಲೆ ಅಂದರೆ ಅವರ ಆತ್ಮ ಪ್ರಕಟಣೆ. ಅದು ನಾನಾ ಮುಖವಾಗಿ ರೂಪುಗೊಳ್ಳುತ್ತದೆ. ಮಗುವಿನ ಮನಸ್ಸಿನಲ್ಲಿ ಮೂಡಿದ ಭಾವನೆಗಳು ಅದು ಚಿತ್ರಗಳ ಮುಖಾಂತರ ಹೊರ ಹಾಕುತ್ತದೆ ಅಂತಹ ಚಿತ್ರಗಳು ಕಂಡುಬಂದಿರುವುದು ಪ್ರಮುಖ ಅಂಶವಾಗಿದೆ.

* ಚಿಕ್ಕಮಕ್ಕಳ ಕಲೆಯು ಅವರದೇ ಆದ ರೂಪವನ್ನು ಕಲ್ಪಿಸಿರುತ್ತಾರೆ. ಇಲ್ಲಿ ನೈಜಕ್ಕಿಂತ ಸಂಕೇತಗಳೇ ಪ್ರಧಾನ. ನಿಯಮಗಳೂ ಸಹ ಅವರದೇ ಆಗಿರುತ್ತದೆ. ಮಗು ಕಂಡುಕೊಂಡ ಮಾರ್ಗವು ತನಗೆ ಅನಿಸಿದ ಅಂಶಗಳು ಹಾಳೆಯ ಮೇಲೆ ಗೀಚುವುದರ ಮೂಲಕ ಕಲೆಯನ್ನು ಯಾವ ರೀತಿ ವ್ಯಕ್ತಪಡಿಸುತ್ತದೆ ಎಂಬುವುದನ್ನು ತಿಳಿಸಿಕೊಡಲಾಗಿದೆ.

* ಚಿಕ್ಕಮಕ್ಕಳ ಚಿತ್ರಕಲೆಯು ಪ್ರಮುಖವಾಗಿದ್ದು ಮಗುವಿನದು ಕುತೂಹಲ ಸ್ವಭಾವ. ಯಾವುದೇ ಆಗಲಿ ವಸ್ತು ಸನ್ನಿವೇಶಗಳು ಮುಂತಾದ ರೇಖಾ ಚಿತ್ರ ಬರೆಯುವುದು, ಅದಕ್ಕೊಂದು ಆಕಾರ ಕೊಟ್ಟು ಸಂತೋಷಪಡುವುದು ಮಕ್ಕಳ ಸಹಜ ಗುಣ ವಿಶೇಷತೆಯನ್ನು ಕಂಡುಕೊಳ್ಳಲಾಗಿದೆ.

* ಚಿಕ್ಕಮಕ್ಕಳ ಕಲೆಯಲ್ಲಿ ಕಲಾ ಪರಿಕರಗಳಿಗೆ ಎಷ್ಟು ಮುಖ್ಯ. ಚಿತ್ರ ಬರೆಯುವ ಮಗುವಿಗೆ ಮುಖ್ಯವಾಗಿ ಪೆನ್ಸಿಲ್, ಬಳಪ ಮುಂತಾದ ಪರಿಕರಗಳು ಅವಶ್ಯಕವೆಂದು ತಿಳಿದುಕೊಳ್ಳಲಾಗಿದೆ.

* ಚಿಕ್ಕಮಕ್ಕಳ ಚಿತ್ರಕಲೆಯಲ್ಲಿ ವಸ್ತುವಾಗಿ ಇಟ್ಟುಕೊಂಡು ಯಾವ ರೀತಿಯ ಚಿತ್ರಗಳು

ಬರೆಯುತ್ತೆ ಎಂಬ ವಿಚಾರಗಳು ತಿಳಿದುಕೊಳ್ಳಲಾಯಿತು. ಸಾಮಾನ್ಯವಾಗಿ ಮಗು ಚಿತ್ರ ಬರೆಯುವಾಗ ಎಲ್ಲ ರೀತಿಯ ಚಿತ್ರಗಳನ್ನು ಬರೆದಿರುತ್ತದೆ. ಅಂತಹವು ಕೆಲವು ನಾಯಿ, ಬೆಕ್ಕು, ಮೊಲ, ಪ್ರಕೃತಿ ಹೀಗೆ ಅನೇಕ ಚಿತ್ರಗಳನ್ನು ವಸ್ತುವಿಷಯವಾಗಿ ಚಿತ್ರದಲ್ಲಿ ಹೇಗೆ ಪ್ರಸ್ತುತಪಡಿಸುತ್ತವೆ ಎಂದು ತಿಳಿಸಲಾಗಿದೆ.


* ಚಿಕ್ಕಮಕ್ಕಳ ಚಿತ್ರಕಲೆ ತಿಳಿಸುವುದರ ಜೊತೆಗೆ ಪ್ರತಿಯೊಂದು ಚಿತ್ರಗಳು ಮತ್ತು ಮಗುವಿನ ವಯೋಮಾನಕ್ಕೆ ರಚಿಸಲ್ಪಟ್ಟ ಚಿತ್ರಗಳನ್ನು ವ್ಯತ್ಯಾಸ ಕಂಡುಕೊಂಡು ತೌಲನಿಕವಾಗಿ ವಿವೇಚನೆ ಮಾಡಿರುವ ಪ್ರಯತ್ನ ಈ ಅಧ್ಯಯನದಲ್ಲಿದೆ.

* ಮಗುವಿನ ದೃಷ್ಟಿಯಲ್ಲಿ ಕಲೆಯು ಕಂಡುಕೊಳ್ಳುವ ಬಗೆ ಮತ್ತು ಶೈಶಾವಸ್ಥೆಯಲ್ಲಿ ಎಲ್ಲವು ಆಕರ್ಷಣೆಯಾಗಿ ನೋಡುವ ರೀತಿ, ಚಲನೆಯಿಂದ ಕೂಡಿದ ವಸ್ತುಗಳನ್ನು ಆಶ್ಚರ್ಯಕರವಾಗಿ ಕಣ್ಣಲ್ಲೇ ನುಂಗುವ ಹಾಗೆ ಮಗು ಗ್ರಹಿಸುವುದು. ಇದೆಲ್ಲವು ಮಗಿವಿನಲ್ಲಿ ಕಂಡುಬರುವಂತಹ ಅಂಶಗಳು ಎಂದು ತಿಳಿದುಕೊಳ್ಳಲಾಯಿತು.

ಮೇಲಿನ ಗಮನಾರ್ಹ ಫಲಿತಗಳನ್ನು ಬಿಂಬಿಸಿದ ಚಿಕ್ಕಮಕ್ಕಳ ಚಿತ್ರಕಲೆಗಳ ಬಗೆಗಿನ ಈ ಅಧ್ಯಯನವು ಪೂರ್ಣಗೊಂಡಿದೆ. ಪ್ರಸ್ತುತ ಆಯ್ಕೆ ಮಾಡಿಕೊಂಡ ಪ್ರಬಂಧದ ವಿಷಯವು ಆಂಶಿಕವಾಗಿದ್ದು ಕೆಲವು ವಿಚಾರಗಳನು ಮಾತ್ರ ಸಮಯದ ಚೌಕಟ್ಟಿನಲ್ಲಿ ಚರ್ಚೆಗೆ ಒಳಪಡಿಸಲಾಗಿದೆ. ಇನ್ನೂ ಹಲವಾರು ದೃಷ್ಟಿಕೋನಗಳಿಂದ ಇಲ್ಲಿನ ಅಂಶಗಳನ್ನು ಗಮನಿಸಬಹುದಾಗಿದೆ. ಹಾಗಾಗಿ ಇದೊಂದು ಕಿರು ಪ್ರಯತ್ನ ಮಾತ್ರವಾಗಿದ್ದು ಮುಂದಿನ ಅಧ್ಯಯನಕಾರರಿಗೆ ಮಾರ್ಗದರ್ಶಿಯಾದರೆ ಅದುವೇ ಈ ಪ್ರಬಂಧದ ಪ್ರಮುಖ ಆಶಯ ಎಂದು ಹೇಳಬಯಸುತ್ತೇನೆ.

ಅನುಬಂಧಗಳು

* ಗ್ರಂಥಋಣ
* ಸಂಕ್ಷೇಪಗಳು



ಗ್ರಂಥಋಣ

೧. **ಆಡುಗೂಸಿನ ಆರೋಗ್ಯ** — **ಡಾ. ಕರವೀರ ಪ್ರಭು ಕ್ಯಾಲಕೊಂಡ**
ಡಾ. ಪಿ.ಎಸ್. ಶಂಕರ ಪ್ರತಿಷ್ಠಾನ, ಗುಲಬರ್ಗಾ,
೨೦೦೧

೨. **ಕಲಾ ಚರಿತ್ರೆ** — **ಅಶೋಕ ಟಿ. ಅಕ್ಕಿ,**
ಎಮ್.ಎಸ್. ಶಾಬಾದಿಮಠ ಬುಕ್‌ಡಿಪೊ, ಗದಗ
೧೯೯೮

೩. **ಕಲಿಕೆ ಮತ್ತು ಬೋಧನೆಯ ಮನೋವಿಜ್ಞಾನ** — **ಕೆ.ಎಂ. ಸುರೇಶ**
ಸುಮುಖ ಪ್ರಕಾಶನ, ಬೆಂಗಳೂರು
೨೦೦೬

೪. **ಕರ್ನಾಟಕದ ಕಲಾ ಸಂಸ್ಕೃತಿ** — **ಡಾ. ಯಾದಪ್ಪ ಪರದೇಶಿ**
ಕನ್ನಡ ವಿವಿಶ್ವವಿದ್ಯಾಲಯ, ಹಂಪಿ

೫. **ಕಲಾ ಮನೋವಿಜ್ಞಾನ** — **ಎನ್. ಮರಿಶಾಮಾಚಾರ್**
ಪದ್ಮಶ್ರೀ ಪ್ರಕಾಶನ (ಗಣಪತಿ ದೇವಸ್ಥಾನದ ಹತ್ತಿರ), ಬೆಂಗಳೂರು
೨೦೦೪

೬. **ಕಲಾಕೋಶ (ಸಂ)** — **ಪಿ.ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೭. **ಕಲೆ ಮತ್ತು ರಸಾಸ್ವಾದನೆ (ಸಂ)** — **ಪ್ರೊ. ಎಂ.ಎಚ್. ಕೃಷ್ಣಯ್ಯ**
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೯೯೯

೮. **ಕಲಾ ಶಿಕ್ಷಣ (ಚಿತ್ರಕಲಾ ಮಾರ್ಗದರ್ಶಿ)** — **ಶಾಂತವೀರಣ್ಣ ಬುಸನೂರು**
ಶ್ರೀ ವಿರಭದ್ರೇಶ್ವರ ಪ್ರಕಾಶನ, ದಾವಣಗೆರೆ
೨೦೦೪

೯. **ಚಿತ್ರಕಲಾ ಪ್ರಪಂಚ, (ಪ್ರಸಂ)** ಪಿ.ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೨೦೦೮

೧೦. **ಚಿಕ್ಕ ಮಕ್ಕಳ ಚಿತ್ರಕಲೆ,** ಬಿ.ಪಿ. ಬಾಯಿರಿ
ಪ್ರತಿಭಾ ಗ್ರಂಥಮಾಲೆ, ಶಿವಾಜಿ ಬೀದಿ, ಧಾರವಾಡ
೧೯೯೬

೧೧. **ಚಿತ್ರಕಲಾ ಶಿಕ್ಷಣ(ಪಠ್ಯ ಆಧಾರಿತ ಮಾರ್ಗದರ್ಶಿ ಸಾಹಿತ್ಯ)ಅನುಪ** ಮಂಜುನಾಥ ಮಾನೆ
ವಿಜಯಪುರ
೨೦೧೧

೧೨. **ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು** (ಸಂ) ಡಾ. ಎಸ್.ಸಿ. ಪಾಟೀಲ
ಸ್ಕೂಲ್ ಆಫ್ ಆರ್ಟ್, ವಜ್ರಮಹೋತ್ಸವ ಸಮಿತಿ, ಧಾರವಾಡ
೧೯೯೫

೧೩. **ಚಿತ್ರಕಲಾ ಪರಿಚಯ** ವ್ಹಿ.ಟಿ. ಕಾಳೆ
ವಿಜಯ ಬುಕ್ ಡಿಪೋ, ಗದಗ
೧೯೯೬

೧೪. **ಚಿತ್ರಕಲೆ ಮತ್ತು ಮನೋವಿಜ್ಞಾನ** ಡಾ. ಸಿ.ಆರ್. ಚಂದ್ರಶೇಖರ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೯೯೫

೧೫. **ಚಿತ್ರಕಲಾ ಚಿಂತನೆ** ಶಂಕರ ಪಾಟೀಲ
ಪ್ರಗತಿ ಕಲಾಭವನ, ವಿದ್ಯಾನಗರ, ದಾವಣಗೆರೆ
೧೯೯೫

೧೬. **ದೇಸಿ ನಗು** (ಪ್ರಸಂ) ಎಂ.ಎಸ್. ಮೂರ್ತಿ
ಅಭಿನವ ಮಾರೇನಹಳ್ಳಿ ವಿಜಯನಗರ, ಬೆಂಗಳೂರು
೨೦೦೭

೧೭. ನಿಜದ ನೆಲೆ (ಪ್ರಸಂ) ಡಾ. ಎಸ್.ಸಿ. ಪಾಟೀಲ
ಸತ್ಯನಂದ ಪಾತ್ರೋಟ
ಡಾ. ಬಿ.ಆರ್. ಹಿರೇಮಠ ಅಭಿನಂದನ ಗ್ರಂಥ, ವೈರಾಗ್ಯ ಮಲ್ಲಣಾರ್ಯ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ,
೨೦೦೩

೧೮. ಬಿಸಿಲು ಬೆಳದಿಂಗಳು (ಸ್ಮರಣ ಸಂಚಿಕೆ) (ಸಂ) ಯು. ರಮೇಶ
ಬಳ್ಳಾರಿ ಜಿಲ್ಲಾ ಚಿತ್ರಕಲಾ ಶಿಕ್ಷಣ ಸಂಘ, ಬಳ್ಳಾರಿ
೨೦೧೪

೧೯. ಬಾಲ ಕಾರ್ಮಿಕರು ಡಾ. ಯಮನೂರಪ್ಪ ಅಣ್ಣಿಗೇರಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೧೧

೨೦. ಮಕ್ಕಳ ಅಂತಃಕರಣದ ಚಲುವಿಗೆ ಸಾಹಿತ್ಯದ ಕಲೆ ಎಸ್. ಕಲಾಧರ
ಪ್ರಜಾವಾಣಿ (ಮುಕ್ತಚಂದ) ದಿನ ಪತ್ರಿಕೆ
೨೦೧೬

೨೧. ಮಕ್ಕಳ ಮಾನಸಿಕ ಬೆಳವಣಿಗೆ ರಮೇಶ ಜಿ. ಉಪಾಧ್ಯಾಯ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
೨೦೧೩

೨೨. ಮಕ್ಕಳ ಮನೋವಿಕಾಸ ಮಾರ್ಗ ಕೆ.ಆರ್.ಕೆ. ಮೂರ್ತಿ
ಜನಪದ ಪ್ರಕಾಶನ, ಬೆಂಗಳೂರು,
೨೦೦೦

೨೩. ಮಕ್ಕಳ ಹಕ್ಕುಗಳು, ಸಮಸ್ಯೆಗಳು ಮತ್ತು ಅಭಿವೃದ್ಧಿ : ಉಡುಪಿ ಜಿಲ್ಲೆಯ ಒಂದು ಅಧ್ಯಯನ
ಸಂಶೋಧಕರು: ಪ್ರತಿಮಾ
ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ, ಅಭಿವೃದ್ಧಿ ಅಧ್ಯಯನ ವಿಭಾಗ,
೨೦೧೩

೨೪. **ಮಕ್ಕಳ ಹಕ್ಕುಗಳು : ಸ್ಥಳೀಯ ಸರ್ಕಾರ** **ಸಂಶೋಧಕರು: ಪಿ. ಹೊನ್ನೂರು ಸಾಬ್**
ಕನ್ನಡ ವಿಶ್ವವಿದ್ಯಾಲಯ, ಹಂಪಿ,ಗೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ, ಜಾನಪದ ಅಧ್ಯಯನ ವಿಭಾಗ
೨೦೦೮

೨೫. **ಮಕ್ಕಳ ವ್ಯಕ್ತಿತ್ವ ನಿರ್ಮಾಣ** **ಹೆಚ್. ಪರಮೇಶ್ವರ ಹೆಗಡೆ**
ಪಾರು ಪ್ರಕಾಶನ, ಗದಗ
೨೦೦೭

೨೬. **ಮಕ್ಕಳಲ್ಲಿ ಸೃಜನಶೀಲತೆಯನ್ನು ವೃದ್ಧಿಸುವುದು ಹೇಗೆ** **ಡಾ. ಕಿಕ್ಕೇರಿ ವೀರನಾರಾಯಣ**
ನವಕರ್ನಾಟಕ, ಬೆಂಗಳೂರು
೨೦೦೪

೨೭. **ವರ್ಣ ಸಂಚಯ** **ಡಾ. ಎಸ್.ಸಿ. ಪಾಟೀಲ**
ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಲಕಲ್ಲ
೨೦೦೧

೨೮. **ಶಾಲಾ ಮಕ್ಕಳ ಮಾನಸಿಕ ಸಮಸ್ಯೆಗಳು** **ಡಾ. ಸಿ.ಆರ್. ಚಂದ್ರಶೇಖರ**
ನವಕರ್ನಾಟಕ, ಬೆಂಗಳೂರು
೨೦೧೩

೨೯. **ಶಿಕ್ಷಣ ಮತ್ತು ಮನೋವಿಕಾಸ** **ಕೆ.ಎನ್. ರಾಜಶೇಖರಯ್ಯ**
ಸುಮುಖ, ಬೆಂಗಳೂರು
೨೦೦೬


೩೦. **ಶಿಕ್ಷಣ ಮಾರ್ಗ** **ಪ್ರೊ. ಎನ್.ಜಿ. ಕರೂರ**
ಶಾಹ ಸಹಾಯ, ಸಪ್ನಬುಕ್ ಹೌಸ್, ಬೆಂಗಳೂರು
೨೦೦೧

೩೧. **ರಾಯಚೂರು ಜಿಲ್ಲೆಯ ಭಿತ್ತಿಚಿತ್ರಕಲೆ** **ವೆಂಕಟೇಶಕುಮಾರ ಕೆ.ಎಚ್.**
ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಪ್ರಬಂಧ,
೨೦೧೫

ಅನುಬಂಧ

ಸಂಕ್ಷೇಪಕಗಳು

೧. ಕ.ವಿ.ವಿ.ಹಂ.	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
೨. ಕ.ಲ.ಅ.ಬೆ.	:	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೩. ಪ್ರ.ಕ.ವಿ.ವಿ	:	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
೪. ಪುಟ	:	ಪುಟ
೫. ಅ.ಪ್ರ	:	ಅಪ್ರಕಟಿತ
೬. ಸಂ.	:	ಸಂಪಾದಕರು
೭. ಪ್ರ.ಸಂ.	:	ಪ್ರಧಾನ ಸಂಪಾದಕರು
೮. ಲೇ.	:	ಲೇಕಕರು
೯. ಸಂ.ಪ್ರ.	:	ಸಂಪ್ರಬಂಧ
೧೦. ವಾ.ದಿ.ಪ್ರ.	:	ವಾರದ ದಿನ ಪತ್ರಿಕೆ
೧೧. ಮ.ಚಿ.	:	ಮಕ್ಕಳ ಚಿತ್ರಗಳು


ಚಿಕ್ಕ ಮಕ್ಕಳ ಚಿತ್ರಕಲೆ